ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 27 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 72 | ಪುಟಗಳು: 12+VIII
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4




ನಗರಾಭಿವೃದ್ಧಿ ಸಚಿವರು, ಮೈಸೂರು-ಚಾಮರಾಜನಗರ ಉಸ್ತುವಾರಿ ಸಚಿವರಾದ
ಶ್ರೀ ಡಾ. ಯತೀಂದ್ರ ಸಿದ್ದರಾಮಯ್ಯ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
GIRI 9343706416
ಚಂದ್ರಶೇಖರ್
ಶಿವಕುಮಾರ್
ಸೋಮಶೇಖರ್
ಶಿವನಾಗ
ರೋಷನ್
ಶುಭ ಕೋರುವವರು
ಸಿದ್ದರಾಮನಹುಂಡಿ
ಗ್ರಾಮ ಪಂಚಾಯಿತಿ
ಅಧ್ಯಕ್ಷರು, ಸದಸ್ಯರು
ಹಾಗೂ
ಕಾಂಗ್ರೆಸ್ ಮುಖಂಡರು


ತಂದೆಯ ಹಾದಿಯಲ್ಲೇ ನಾಯಕತ್ವದ ಗುಣ ಮೈಗೂಡಿಸಿಕೊಂಡು ರಾಜಕೀಯದಲ್ಲಿ ಛಾಪು
ಮೂಡಿಸಿದ ಯುವ ನೇತಾರ, ಕಿರಿಯ ವಯಸ್ಸಿಗೆ ನಗರಾಭಿವೃದ್ಧಿ ಸಚಿವ ಸ್ಥಾನ ಅಲಂಕರಿಸಿ
ಈಗ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕಗೊಂಡ
ಸನ್ಮಾನ್ಯ ಶ್ರೀ ಯತೀಂದ್ರ ಸಿದ್ದರಾಮಯ್ಯ ರವರಿಗೆ
ಅಭಿನಂದನೆಗಳು ಹಾಗೂ ಹುಟ್ಟು ಹಬ್ಬದ ಶುಭಾಶಯಗಳು
ಶುಭಕೋರುವವರು : ಹೆಚ್.ಡಿ.ಗಣೇಶ್ ಅಧ್ಯಕ್ಷರು, ಮೈಸೂರು ಪೇಂಟಿಂಗ್ಸ್ &
ವಾರ್ನಿಷ್ ಲಿ., ಕರ್ನಾಟಕ ಸರ್ಕಾರದ ಅದೀನ ಉದ್ಯಮ, ಪಿರಿಯಾಪಟ್ಟಣ ತಾಲ್ಲೂಕು ಹಾಗೂ
ಬಿ.ಜವರೇಗೌಡ ಅಧ್ಯಕ್ಷರು, ಮೈಸೂರು ಜಿಲ್ಲಾ ಕೆ.ಎಸ್.ಆರ್.ಟಿ.ಸಿ. ಕನಕ ನೌಕರರ
ಸಂಘ ಹಾಗೂ ಡಿ.ಸಿ.ಸಿ. ಹಿರಿಯ ಕಾರ್ಯದರ್ಶಿಗಳು, ನಂಜನಗೂಡು ತಾಲ್ಲೂಕು
GRAPHIC WORLD 9535370787

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ಕಂಪ್ಯೂಟರ್ ಸರಿಯಾಗಿ ಕೆಲಸ ಮಾಡ್ತಿಲ್ಲ.

ಗಂಡ : ಲೇ ಅದು ಕಂಪ್ಯೂಟರ್ ! ಗಂಡ ಅಲ್ಲ!!

ಮೈಸೂರು ಮಿತ್ರ

ಶನಿವಾರ, ಜೂನ್ 27, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬದುಕಿರುವಷ್ಟು ದಿನ ಒಳ್ಳೆಯ ರೀತಿಯಲ್ಲಿ ಇದ್ದು, ನಂತರ ತನ್ನ ಸುತ್ತಣ ಜನತೆಯ ನೆನಪಿನಲ್ಲಿ ಉಳಿದು, ಎಂತ ಹಿರಿಯ ಬದುಕು! ಅನಿಸುವ ಬಾಳ್ವೆ ಎಷ್ಟು ಜನರ ಪಾಲಿಗಿದ್ದೀತು? – ಕೋಟ ಶಿವರಾಮ ಕಾರಂತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಎಡಗಣ್ಣು ಹೊಡೆದರೆ ನಾರಿಗೆ ಶುಭ.

ನಿಮ್ಮ ಪತ್ರಗಳು

ಪೊಲೀಸ್ ನೇಮಕಾತಿಗೆ ಅರ್ಜಿ ಸಲ್ಲಿಸಲು ಮತ್ತಷ್ಟು ದಿನ ಕಾಲಾವಕಾಶ ನೀಡಿ

ಮಾನ್ಯರೆ,

ಪೊಲೀಸ್ ನೇಮಕಾತಿಗೆ ಕೆಇಎ ಮೂಲಕ ಈಗಾಗಲೇ ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ವೆಬ್ ಸೈಟ್ ನಲ್ಲಿ ಪದೇ ಪದೇ ತಾಂತ್ರಿಕ ದೋಷದಿಂದ ಸಮಸ್ಯೆ ಉಂಟಾಗಿ ಅಭ್ಯರ್ಥಿಗಳು ಸೂಕ್ತ ದಾಖಲೆಯನ್ನು ನೀಡಿ ಅರ್ಜಿ ಸಲ್ಲಿಸುವುದರಲ್ಲಿ ವಿಪರೀತ ವಿಳಂಬವಾಗುತ್ತಿದೆ. ಹಾಗೂ ಇತ್ತೀಚೆಗೆ ರಾಜ್ಯದಲ್ಲಿ ಒಳ ಮೀಸಲಾತಿ ಜಾರಿಯಾಗಿ ಮೀಸಲಾತಿ ವರ್ಗೀಕರಣ ವಾಗಿರುವುದರಿಂದ ಪರಿಶಿಷ್ಟ ಸಮುದಾಯದ ಅಭ್ಯರ್ಥಿಗಳು ಹೊಸದಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಅರ್ಜಿ ಸಲ್ಲಿಸುವುದಕ್ಕೆ ಸ್ವಲ್ಪ ಸಮಯದ ಅವಶ್ಯಕತೆ ಇರುವುದರಿಂದ ಪೊಲೀಸ್ ನೇಮಕಾತಿ ವಿಭಾಗ ಮತ್ತು ಕೆಇಎ ಇದನ್ನು ಸೂಕ್ಷ್ಮವಾಗಿ ಪರಿಗಣಿಸಿ ಸದ್ಯದಲ್ಲಿ ಅರ್ಜಿ ಸಲ್ಲಿಕೆಗೆ ನೀಡಿರುವ ಕೊನೆಯ ದಿನದ, ಮುಂದಿನ 10 ದಿನಗಳಾದರೂ ಪೊಲೀಸ್ ನೇಮಕಾತಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಿ ಅಭ್ಯರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ

ನದಿಯ ಅಪಾಯಕಾರಿ ಸ್ಥಳಗಳ ತೀರದಲ್ಲಿ ಸೂಚನಾ ಫಲಕ ಅಳವಡಿಸಿ

ಮಾನ್ಯರೆ,

ಮಂಡ್ಯ ಜಿಲ್ಲೆ ಹಲಗೂರು ಬಳಿಯ ಮುತ್ತತ್ತಿಯ ಕಾವೇರಿ ನದಿಯಲ್ಲಿ ಅಮಾಯಕ ಒಂದೇ ಕುಟುಂಬದ ನಾಲ್ವರು ಮಹಿಳೆಯರು ಸೇರಿದಂತೆ ಒಟ್ಟು ಐವರು ನೀರು ಪಾಲಾಗಿರುವ ಹೃದಯ ವಿದ್ರಾವಕ ಘಟನೆ ವರದಿಯಾಗಿದೆ. ಕೆಲವೊಮ್ಮೆ ಪ್ರವಾಸಿಗರಿಗೆ ಅಪಾಯಕಾರಿ ಸ್ಥಳದ ಮಾಹಿತಿ ಇಲ್ಲದೆ ಇಂತಹ ಅವಘಡಗಳು ಸಂಭವಿಸುತ್ತವೆ. ಇದರಲ್ಲಿ ಸ್ಥಳೀಯ ಆಡಳಿತದ ಬೇಜವಾಬ್ದಾರಿ ಕಂಡು ಬರುತ್ತದೆ. ಅಂತಹ ಸ್ಥಳಗಳಲ್ಲಿ ಅಪಾಯದ ಸೂಚನೆ ಇರುವ ನಾಮಫಲಕ ಅಳವಡಿಸುವುದರ ಜೊತೆಗೆ ಪ್ರವಾಸಿಗರು ನದಿಯ ನೀರಿನ ಅಪಾಯಕಾರಿ ಸ್ಥಳ ಪ್ರವೇಶಿಸದಂತೆ ತಂತಿ ಬೇಲಿಯನ್ನು ನಿರ್ಮಿಸುವುದರ ಜೊತೆಗೆ ಅದರ ನಿರ್ವಹಣೆಯನ್ನು ಮಾಡಬೇಕು. ಸಾಧ್ಯವಾದರೆ ಭದ್ರತಾ ಸಿಬ್ಬಂದಿಯನ್ನು ನೇಮಿಸಿದರೆ ಇಂತಹ ದುರಂತಗಳನ್ನು ತಪ್ಪಿಸಬಹುದು. ಈ ಬಗ್ಗೆ ಸರ್ಕಾರ ಎಲ್ಲಾ ಅಪಾಯಕಾರಿ ನದಿ ತೀರಗಳಿಗೂ ಸಂಬಂಧಿಸಿದಂತೆ ಏಕರೂಪದ ಕ್ರಮ ಕೈಗೊಳ್ಳಬೇಕು.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಮಿತ್ರನ ಪತ್ರದ ಪ್ರಭಾವ

ಮಾನ್ಯರೆ,

'ಮೈಸೂರು ಮಿತ್ರ' ಪತ್ರಿಕೆಯ ಓದುಗರ ಪತ್ರ ಅಂಕಣದಲ್ಲಿ ನನ್ನ ಪತ್ರ ಗುರುವಾರ ಪ್ರಕಟವಾಯಿತು.ಅಂದೇ ಬೆಳಗ್ಗೆ ನಮ್ಮ ಬೀದಿಗೆ ಬಂದ ಪಾಲಿಕೆಯ ಮೇಸ್ತ್ರಿ ಲಿಂಗರಾಜು ಒಬ್ಬ ಪೌರ ಕಾರ್ಮಿಕನನ್ನು ತಮ್ಮೊಡನೆ ಕರೆತಂದಿಂದಿದ್ದರು. ಅವರು ರಸ್ತೆಯ ಬದಿ/ ಚರಂಡಿಯಲ್ಲಿದ್ದ ಕಳೆ ಗಿಡಗಳನ್ನು ತೆಗೆಸಿದ್ದಾರೆ. ಚರಂಡಿ ಯಲ್ಲಿ ತುಂಬಿರುವ ಹೂಳನ್ನು ತೆಗೆಯುವುದು ಬಾಕಿ ಇದೆ. ಆಗಷ್ಟೇ ಚರಂಡಿಯಲ್ಲಿ ಮಳೆನೀರು ಸಲೀಸಾಗಿ ಹರಿದೀತು.

–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಮೈಸೂರು

ನಮ್ಮ ಹೆಮ್ಮೆಯ ಕೆಂಪೇಗೌಡರು

ಮಾನ್ಯರೆ,

ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಪ್ರತಿ ವರ್ಷ ಜೂನ್ 27ರಂದು ರಾಜ್ಯಾದ್ಯಂತ ಸಡಗರದಿಂದ ಆಚರಿಸಲಾಗುತ್ತದೆ. ಕೇವಲ ಅರಸನಾಗಿಯಷ್ಟೇ ಅಲ್ಲದೆ, ಪ್ರಜೆಗಳ ಕಷ್ಟಸುಖ ಬಲ್ಲ ಧೀಮಂತ ನಾಯಕರಾಗಿದ್ದ ಕೆಂಪೇಗೌಡರು 1537ರಲ್ಲಿ ದೂರದೃಷ್ಟಿಯಿಂದ ಯೋಜನಾಬದ್ಧ ಬೆಂಗಳೂರನ್ನು ನಿರ್ಮಿಸಿದರು.

ನಗರದ ರಕ್ಷಣೆಗಾಗಿ ನಾಲ್ಕು ದಿಕ್ಕುಗಳಲ್ಲಿ ಗಡಿ ಗೋಪುರಗಳನ್ನು ನಿರ್ಮಿಸಿದ್ದು, ವ್ಯಾಪಾರಕ್ಕಾಗಿ ಚಿಕ್ಕಪೇಟೆ, ಬಳೇಪೇಟೆ, ಅಕ್ಕಿಪೇಟೆಯಂತಹ ವೃತ್ತಿಪರ ಮಾರುಕಟ್ಟೆ ಗಳನ್ನು ಸೃಷ್ಟಿಸಿದ್ದು ಅವರ ಆಡಳಿತ ಚಾತುರ್ಯಕ್ಕೆ ಸಾಕ್ಷಿ. ಜಲಸಮೃದ್ಧಿಗಾಗಿ ನೂರಾರು ಕೆರೆಗಳನ್ನು ನಿರ್ಮಿಸಿ ಜನರಿಗೆ ನೀರಿನ ಸೌಲಭ್ಯ ಕಲ್ಪಿಸಿದರು. ಇಂದು ಬೆಂಗಳೂರು ಜಾಗತಿಕ ಮಟ್ಟದಲ್ಲಿ ಬೆಳೆಯಲು ಅಂದೇ ಅವರು ಹಾಕಿಕೊಟ್ಟ ಗಟ್ಟಿ ಬುನಾದಿಯೇ ಕಾರಣ. ವಿಮಾನ ನಿಲ್ದಾಣದಲ್ಲಿ ಸ್ಥಾಪಿಸಲಾದ 108 ಅಡಿ ಎತ್ತರದ 'ಪ್ರಗತಿಯ ಪ್ರತಿಮೆ' ಅವರ ಸ್ಮರಣೆಯನ್ನು ಸದಾ ಜೀವಂತವಾಗಿರಿಸಿದೆ. ಕೆಂಪೇಗೌಡರ ಸಮಾಜಮುಖಿ ಚಿಂತನೆಗಳನ್ನು ಅಳವಡಿಸಿಕೊಳ್ಳುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ.

–ಬಿ.ಗಣೇಶ, ಕನ್ನೇಗೌಡನ ಕೊಪ್ಪಲು, ಮೈಸೂರು.

ಚಾಮುಂಡಿಬೆಟ್ಟದ ಮೆಟ್ಟಿಲಿನ ಬಳಿ ಶೌಚಾಲಯ ನಿರ್ಮಿಸಿ ಮಹಿಳೆಯರ ಪರದಾಟ ತಪ್ಪಿಸಿ

ಮಾನ್ಯರೆ,

ಮೈಸೂರಿನ ಐತಿಹಾಸಿಕ ಸ್ಥಳಗಳಲ್ಲಿ ಪ್ರಮುಖವಾದ ಚಾಮುಂಡಿಬೆಟ್ಟವನ್ನು ಮೆಟ್ಟಿಲುಗಳ ಮೂಲಕ ಹತ್ತುವ ಭಕ್ತರು, ಪ್ರವಾಸಿಗರು, ಮಹಿಳೆಯರು, ಮಕ್ಕಳು, ವಯೋವೃದ್ಧರು ಶೌಚಾಲಯವಿಲ್ಲದೇ ಪರದಾಡುವ ದೃಶ್ಯ ಸರ್ವೇ ಸಾಮಾನ್ಯವಾಗಿದೆ.

ಸುಮಾರು 60 ವರ್ಷಗಳಿಂದಲೂ ಮೆಟ್ಟಿಲು ಹತ್ತುವ ಭಕ್ತಾದಿಗಳಿಗಾಗಿ ಮೂಲ ಭೂತವಾಗಿ ಬೇಕಾದ ಶೌಚಾಲಯವನ್ನು ಕಟ್ಟಿಸಲು ಒಬ್ಬ ಅಧಿಕಾರಿಗಳಾಗಲೀ, ನಗರಸಭೆಯ ಆಯುಕ್ತರಾಗಲೀ, ಜಿಲ್ಲಾಧಿಕಾರಿಗಳಾಗಲೀ, ತಹಸೀಲ್ದಾರರಾಗಲಿ, ಉಸ್ತುವಾರಿ ಸಚಿವರಾಗಲೀ ಮನಸ್ಸು ಮಾಡದಿರುವುದು ನಿಜಕ್ಕೂ ಶೋಚನೀಯ.

ಕೊನೇ ಪಕ್ಷ 200, 300, 1000 ರೂ.ಗಳನ್ನು ದೇವಿಯ ದರ್ಶನಕ್ಕೆ ಭಕ್ತರಿಂದ ವಸೂಲಿ ಮಾಡುತ್ತಿರುವ ದೇವಾಲಯದ ಆಡಳಿತ ಮಂಡಳಿಯವರಾದರೂ ಈ ಬಗ್ಗೆ ಚಿಂತನೆ ನಡೆಸಬೇಕು ಅಲ್ಲವೇ? ಮುಜರಾಯಿ ಇಲಾಖೆಯೂ ಕಣ್ಮುಚ್ಚಿ ಕುಳಿತಿರುವುದು ನಿಜಕ್ಕೂ ವಿಷಾದನೀಯ. ದಯಮಾಡಿ ಸಂಬಂಧಪಟ್ಟವರು ಪ್ರತೀ ದಿನ ಮಹಿಳೆಯರು, ಮಕ್ಕಳು ಇರಿಸು ಮುರಿಸಿಗೆ ಒಳಗಾಗುವುದನ್ನು ತಪ್ಪಿಸಿ ಶೌಚಾಲಯವನ್ನು ನಿರ್ಮಿಸುವರೇ?

–ದುರ್ಗಾಸುತ, ಮೈಸೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ರೌಡಿ ಪ್ರತಿಬಂಧಕ ದಳ ಜನ ಇನ್ನು ನಿರಾಳವೇ..!?



ಇತ್ತೀಚೆಗೆ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅಧ್ಯಕ್ಷತೆಯಲ್ಲಿ ಅವರ ಕಚೇರಿಯ ಸಭಾಂಗಣದಲ್ಲಿ ನಡೆದ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ರೌಡಿ ಪ್ರತಿಬಂಧಕ ದಳದ ಮಹತ್ವ ಕುರಿತಾಗಿ ಸುದೀರ್ಘ ಚರ್ಚೆ ನಡೆಯಿತು.

ಅಂತೂ ಇಂತೂ ಮೈಸೂರಲ್ಲಿ ರೌಡಿ ಪ್ರತಿಬಂಧಕ ದಳ ರಚನೆಯಾಗಿದೆ. ಅದರ ಶ್ರೇಯಸ್ಸೆಲ್ಲಾ ಮೈಸೂರಿನ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ಸಲ್ಲಬೇಕು.

ಮೈಸೂರಿಗರು 2022ರಿಂದಲೂ ಬಯಸುತ್ತಿದ್ದನ್ನು ಅವರು ಈಗ ಕಲ್ಪಿಸಿ ಕೊಟ್ಟಿದ್ದಾರೆ. ಅವರ ಈ ನಡೆ ಪ್ರಶಂಸನೀಯ ಮಾತ್ರವಲ್ಲ ಇದು ಮೈಸೂರಿಗೆ ಅತ್ಯಂತ ಅಗತ್ಯವಾದುದಾಗಿತ್ತು.

ಏಕೆಂದರೆ, ಮೈಸೂರು ಬದಲಾಗುತ್ತಿದೆ. ಅದು ಒಳ್ಳೆಯ ವಿಚಾರದಲ್ಲಿ ಅಲ್ಲ ಎಂಬುದೇ ದುರಂತ.

ಮೈಸೂರು ಆರ್ಥಿಕವಾಗಿ ಬೆಳೆಯುತ್ತಿದೆ. ಇಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ರಾಕೆಟ್ ವೇಗದಲ್ಲಿ ಸಾಗುತ್ತಿದೆ. ಅದರಿಂದ ಯಥೇಚ್ಛವಾಗಿ ಹಣ ಹರಿದು ಬರುತ್ತಿದೆ.

> **ಮಾದಕ ದ್ರವ್ಯಗಳ ದಂಧೆಯೂ ಹೆಚ್ಚಿ, ಮೈಸೂರಿನಲ್ಲಿ ದಾರಿತಪ್ಪಿದ ಯುವಕರ ಹೊಸ ದಂಡೇ ಹುಟ್ಟಿಕೊಂಡಿದೆ. ಈ ದಂಡಿನಲ್ಲಿರುವ ಯುವಕರು ಅಷ್ಟೇನೂ ಪ್ರಭಾವಿಗಳೇನಲ್ಲ. ಒಂದಷ್ಟು ಹಣ, ಒಂದಿಷ್ಟು ರಾಜಕೀಯ ಬೆಂಬಲ ವಿದೆ ಅಷ್ಟೆ. ಆದರೆ, ಎಲ್ಲರೂ ನಮ್ಮನ್ನು ನೋಡಿ ಹೆದರಬೇಕು, ಸಲಾಮು ಹೊಡೆಯಬೇಕು ಎಂಬುದು ಇವರ ನಿರೀಕ್ಷೆಯಾಗಿದೆ.**

ಜೊತೆಗೆ ಮಾದಕ ದ್ರವ್ಯಗಳ ದಂಧೆಯೂ ಹೆಚ್ಚಿ, ಮೈಸೂರಿನಲ್ಲಿ ದಾರಿತಪ್ಪಿದ ಯುವಕರ ಹೊಸ ದಂಡೇ ಹುಟ್ಟಿಕೊಂಡಿದೆ.

ಈ ದಂಡಿನಲ್ಲಿರುವ ಯುವಕರು ಅಷ್ಟೇನೂ ಪ್ರಭಾವಿಗಳೇನಲ್ಲ. ಒಂದಷ್ಟು ಹಣ, ಒಂದಿಷ್ಟು ರಾಜಕೀಯ ಬೆಂಬಲ ವಿದೆ ಅಷ್ಟೆ. ಆದರೆ, ಎಲ್ಲರೂ ನಮ್ಮನ್ನು ನೋಡಿ ಹೆದರಬೇಕು, ಸಲಾಮು ಹೊಡೆಯಬೇಕು ಎಂಬುದು ಇವರ ನಿರೀಕ್ಷೆಯಾಗಿದೆ.

ನಗರದ ಏರಿಯಾಗಳಲ್ಲಿ ಬಿಡುಬೀಸಾಗಿ ಓಡಾಡುವ ಇವರು, ಸಣ್ಣ ಪುಟ್ಟ ವಿಷಯಗಳಿಗೂ ಜಗಳ ತೆಗೆದು ಬಡಿದಾಡಲು ಕಾಯುತ್ತಲೇ ಇರುತ್ತಾರೆ. 'ಯಂಗ್ ಡಾನ್' ಪಟ್ಟ ಪಡೆಯಬೇಕು ಎಂಬುದು ಇವರ ಗುರಿ.

ಕಳೆದ ವರ್ಷ ಹೀಗೆಯೇ ಒಬ್ಬ ಯುವಕ, ಮೈಸೂರು ಮಹಾನಗರ ಪಾಲಿಕೆ ಕಚೇರಿಗೆ ನುಗ್ಗಿ ರೆವಿನ್ಯೂ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ನಡೆಸಿದ್ದ. ಕಾರಣ ಏನು ಗೊತ್ತೆ! ಕಚೇರಿಯ ಆವರಣದಲ್ಲಿ ಸಿಗರೇಟು ಸೇದಬಾರದೆಂದು ಹೇಳಿದ್ದಕ್ಕೆ!

ಕೆಲವು ವಾರಗಳ ಮುಂಚೆ ಒಂದಿಬ್ಬರು ಹುಡುಗರು ಮಧ್ಯವಯಸ್ಸಿನ ವ್ಯಕ್ತಿಯೊಬ್ಬರನ್ನು ಹೀಗೆಯೇ ಥಳಿಸಿದ್ದರು. ಏಕಮುಖ ಸಂಚಾರವಿರುವ ಮಾರ್ಗದಲ್ಲಿ ಏಕಾಏಕಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಆ ಯುವಕರ ಕಂಡು ಹಾರ್ನ್ ಮಾಡಿದ್ದಕ್ಕೆ!

ಅದು ಹೋಗಲಿ, ಇತ್ತೀಚೆಗೆ ಕ್ರಾಫರ್ಡ್ ಭವನದ ಬಳಿಯ ವೃತ್ತದಲ್ಲಿ ಹಿರಿಯ ನಾಗರಿಕರೊಬ್ಬರ ಕಾರಿಗೆ, ವೇಗವಾಗಿ ಬಂದ ದ್ವಿಚಕ್ರವಾಹನ ಸವಾರರಿಬ್ಬರು ಗುದ್ದಿಸಿದರು.

ಅಲ್ಲಿಯೇ ಇದ್ದ ಪ್ರಜ್ಞಾವಂತ ನಾಗರಿಕರೊಬ್ಬರು, ಅತೀ ವೇಗವಾಗಿ ಬಂದು ಅಪಘಾತ ಮಾಡಿದ್ದಕ್ಕೆ ಆ ಹುಡುಗರನ್ನು ತರಾಟೆಗೆ ತೆಗೆದುಕೊಂಡರು.

ಆದರೆ, ಆ ಪುಂಡ ಹುಡುಗರು ಮಾಡಿದ ತಪ್ಪು ಒಪ್ಪಿಕೊಳ್ಳುವುದಕ್ಕೆ ಬದಲಾಗಿ ಅವರನ್ನ ಅವಾಚ್ಯ ಶಬ್ದಗಳಿಂದ ನಿಂದಿಸ ತೊಡಗಿ ದಾಗ, ಮಾನಕ್ಕೆ ಅಂಜಿ ಅವರೂ ಮಾತ್ರವಲ್ಲ ಅಲ್ಲಿ ನೆರೆದಿದ್ದವರೆಲ್ಲರೂ ಅಸಹಾಯ ಕತೆ ಯಿಂದ ಜಾಗ ಖಾಲಿ ಮಾಡಬೇಕಾಗಿ ಬಂತು.

ಈ ರೀತಿ ನಾಗರಿಕರನ್ನು ಅಡ್ಡಗಟ್ಟಿ ಹೆದರಿಸುವ–ಬೆದರಿಸುವ ಘಟನೆಗಳು ಮೈಸೂರಿನಂತಹ ಐತಿಹಾಸಿಕ ನಗರಿಯಲ್ಲಿ ಹೆಚ್ಚಾಗುತ್ತಲೇ ಇವೆ ಮತ್ತು ಸರ್ವೇ ಸಾಮಾನ್ಯ ಎನ್ನುವಂತಾಗಿಬಿಟ್ಟಿವೆ.

ಮೈಸೂರು ಬೆಳೆಯುತ್ತಲೇ ಇರುವುದರಿಂದ ಇಂತಹ ಘಟನೆಗಳು ಮುಂದೆಯೂ ಹೆಚ್ಚಾಗುತ್ತಲೇ ಹೋಗುತ್ತವೆಯೇ ಹೊರತು, ಕಡಿಮೆಯಂತೂ ಆಗುವುದಿಲ್ಲ ಬಿಡಿ.

ದುರಂತವೇನೆಂದರೆ, ಇದುವರೆಗೂ ಪೊಲೀಸ್ ಇಲಾಖೆ ಇಂತಹ ಘಟನೆಗಳತ್ತ ಅಷ್ಟೇನೂ ಗಮನಹರಿಸಲಿಲ್ಲ ಮತ್ತು ಗಂಭಿರವಾಗಿಯೂ ತೆಗೆದುಕೊಳ್ಳಲಿಲ್ಲ.

ಪೊಲೀಸರಿಗೆ ದೂರುಗಳು ಬಂದಾಗಲೂ ಅವರು ಅವುಗಳ ಬಗ್ಗೆ ಹೆಚ್ಚು ತಲೆಕೆಡಿಸಿ ಕೊಳ್ಳದೆ, ಕಾಟಾಚಾರಕ್ಕೆ ಒಂದು ಎಚ್ಚರಿಕೆ ನೀಡಿ ಕಳುಹಿಸಿದ್ದಾರಷ್ಟೆ. ಆ ಪುಂಡರೂ ಆ ಎಚ್ಚರಿಕೆಯನ್ನೇನೂ

> **ಕಾಲದಿಂದಲೂ ಮೈಸೂರು ಸುರಕ್ಷಿತ ನಗರ ಹಾಗೂ ನಾಗರಿಕರ ತಾಣ ಎಂದು ಹೆಮ್ಮೆ ಪಡುವಂತಿತ್ತು. ಆದರೆ ಈಗ ಆ ಹೆಮ್ಮೆ ನಿಧಾನವಾಗಿ ಅಳಿಸಿ ಹೋದಂತಾಗುತ್ತಿದೆ. ಇದೀಗ ಸೀಮಾ ಲಾಟ್ಕರ್ ಅವರು ಮತ್ತೆ ಸ್ಥಾಪಿಸಿರುವ ರೌಡಿ ಪ್ರತಿಬಂಧಕ ದಳದಿಂದ ಮತ್ತೆ ಮೈಸೂರು ಸುರಕ್ಷಿತ ತಾಣವಾಗಲಿ ಮತ್ತು ತನ್ನ ಸಾಂಸ್ಕೃತಿಕ ವೈಭವ ಗರಿಗೆದರಲಿ ಎನ್ನುವುದೇ ಎಲ್ಲರ ಆಶಯ.**

ಗಂಭೀರವಾಗಿ ಪರಿಗಣಿಸದೆ, ಬಳಿಕವೂ ರಾಜಾರೋಷವಾಗಿ ಯಾವ ಭಯವಿಲ್ಲದೆ ಹೊರಬಂದರು. ಅವರ ಧೈರ್ಯ ಇನ್ನೂ ಹೆಚ್ಚಾಯಿತು.

ಹಾಗಾಗಿ ಈಗ **'ರೌಡಿ ಪ್ರತಿಬಂಧಕ ದಳ'** ಅಸ್ತಿತ್ವಕ್ಕೆ ಬಂದಿರುವುದು ಮಹತ್ವದ ಹೆಜ್ಜೆಯಾಗಿದೆ. ಪೊಲೀಸರಿಗೆ ಸ್ವಾತಂತ್ರ್ಯವನ್ನ ನೀಡಿದರೆ ಇದು ಯಶಸ್ವಿಯಾಗುವುದರಲ್ಲಿ ಸಂದೇಹವೇ ಇಲ್ಲ ಎಂದು ಕಮಿಷನರ್ ಕೂಡ ಅಭಿಪ್ರಾಯಪಡುತ್ತಾರೆ.

ಪೊಲೀಸರಿಗೂ ಬೇಕಾಗಿರುವುದು ರಕ್ಷಣೆ. ಆ ರಕ್ಷಣೆ ರೌಡಿಗಳಿಂದಲ್ಲ, ಬದಲಾಗಿ ರಾಜಕೀಯದವರ ಮೂಗುತೂರಿಸುವಿಕೆ ಅರ್ಥಾತ್ ಮಧ್ಯಪ್ರವೇಶದಿಂದ.

ಎಲ್ಲಿಯೋ... ಯಾವುದೋ... ರೌಡಿಯನ್ನು ಬಂಧಿಸಿದರೆ ಅವನನ್ನ ಬೆಂಬಲಿಸುವ ರಾಜಕೀಯ ಧುರೀಣರ ಒಂದೇ ಒಂದು ಕರೆ ಎಲ್ಲವನ್ನೂ ಹದಗೆಡಿಸಿಬಿಡುತ್ತದೆ. ಅಂತಹ ಯಾವ ಹಸ್ತ ಕ್ಷೇಪಗಳಿಲ್ಲದಂತೆ 'ಪ್ರತೀಕಾರದ ವರ್ಗಾವಣೆ' ಯಿಂದ ಪೊಲೀಸರಿಗೆ ರಕ್ಷಣೆ ಬೇಕಿದೆ.

ಪೊಲೀಸ್ ಇಲಾಖೆಯಲ್ಲಿ, ಹಿರಿಯ ಅಧಿಕಾರಿಗಳು ಬೆನ್ನಿಗಿದ್ದರೆ ಮಾತ್ರ ಅಧೀನ ಪೊಲೀಸ್ ಅಧಿಕಾರಿಗಳು ಸುಗಮವಾಗಿ ಕೆಲಸ ಮಾಡಬಲ್ಲರು.

ಹಿಂದೆ 1990ರಲ್ಲಿ ಇದ್ದ ಮೈಸೂರು ನಗರ ಪೊಲೀಸ್ ಕಮಿಷನರ್ ಎಚ್ ಆರ್ ಕಸ್ತೂರಿ ರಂಗನ್ ಅವರು ತಮ್ಮ ಅಧೀನ ಅಧಿಕಾರಿ ಗಳಿಗೆ ಇಂತಹ ಬೆಂಬಲ ಮತ್ತು ರಕ್ಷಣೆ ಯನ್ನ ನೀಡುತ್ತಿದ್ದರು.

1993ರಲ್ಲಿ, ಚಾಮರಾಜ ಜೋಡಿ ರಸ್ತೆಯಲ್ಲಿರುವ ಗಾಯತ್ರಿ ಟಾಕೀಸ್ ಬಳಿ ಇಬ್ಬರು ಪೊಲೀಸರ ಮೇಲೆ ಪುಡಿ ರೌಡಿಗಳಿಂದ ಹಲ್ಲೆ ನಡೆದಿತ್ತು.

ಆಗ ಕಸ್ತೂರಿ ರಂಗನ್ ಅವರು ಇನ್ಸ್‌ಪೆಕ್ಟರ್ ಕೆ.ಎಸ್.ತಮ್ಮಯ್ಯ ನೇತೃತ್ವ ದಲ್ಲಿ ರೌಡಿ ಪ್ರತಿಬಂಧಕ ದಳ ರಚಿಸುವ ಮೂಲಕ ಪೊಲೀಸರ ಬೆನ್ನಿಗೆ ನಿಂತಿದ್ದರು.

ಇದಕ್ಕಿಂತಾ ಹೆಚ್ಚಾಗಿ ಅವರು ಪೊಲೀಸರಿಗೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನೂ ನೀಡಿದ್ದರು ಮತ್ತು ಯಾವುದೇ ರಾಜಕೀಯ ಒತ್ತಡಗಳಿಗೆ ಮಣಿಯುತ್ತಿರಲಿಲ್ಲ. ಇದರಿಂದಾಗಿ ಆ ಪಡೆ ಬಹಳ ಪರಿಣಾಮಕಾರಿಯಾಗಿ ಆಗ ಕೆಲಸ ಮಾಡಲು ಸಾಧ್ಯವಾಯಿತು.

ಆಗ ರೌಡಿ ಪ್ರತಿಬಂಧಕ ದಳ ಎಷ್ಟು ತೀವ್ರತೆಯಿಂದ ಕೆಲಸ ಮಾಡಿತು ಎಂದರೆ, ಅಪರಾಧಿಗಳ ಗುಂಪು ಮತ್ತು ರೌಡಿ ಶೀಟರ್‌ಗಳಲ್ಲಿ ನಡುಕ ಉಂಟು ಮಾಡಿತು.

ನಾಗರಿಕರಲ್ಲಿನ ಭಯ ತೊಲಗಿ, ರೌಡಿಗಳು ಆತಂಕದಿಂದ ಅಡಗಿಕೊಳ್ಳುವಂತಾಯಿತು. ಮತ್ತು ಈ ಫೀಲ್ಡಿಗೆ ಇಳಿಯಬೇಕೆಂದು ಯೋಚಿಸಿದ್ದ ಪಡ್ಡೆ ಹುಡುಗರು ಮತ್ತೊಮ್ಮೆ ಯೋಚಿಸುವಂತೆ ಆಗಿತ್ತು.

ಒಂದೇ ವರ್ಷದಲ್ಲಿ ಎದ್ದು ಕಾಣುವ ಬದಲಾವಣೆಗಳು ಕಂಡುಬಂದವು, ಆಯಾಯ ಏರಿಯಾಗಳ ರೌಡಿಗಳು ಮಾಯವಾದರು ಮತ್ತು ಸಾರ್ವಜನಿಕರ ಆತ್ಮವಿಶ್ವಾಸ ಮರಳಿ ಬಂದಿತು.

ಇದೇ ರೀತಿಯ ಆತ್ಮವಿಶ್ವಾಸ ಮತ್ತು ನಂಬಿಕೆ ಮತ್ತೆ ಮೈಸೂರಿಗರಿಗೆ ಈಗ ಬರಬೇಕಿದೆ. ಅದಕ್ಕೆ ಮೂರು ರೀತಿಯ ಪಡೆಗಳು ಸನ್ನದ್ಧವಾಗಬೇಕಿದೆ.

ಮೊದಲಿಗೆ, ಪೊಲೀಸರು ಮತ್ತು ರೌಡಿಗಳ ಮಧ್ಯೆ ಇದೆ ಎನ್ನಲಾಗುವ 'ಅಪವಿತ್ರ ಮೈತ್ರಿ' ಯನ್ನು ಗಮನದಲ್ಲಿಟ್ಟುಕೊಂಡು, ವರ್ಷ ಗಟ್ಟಲೆ

> **ಪೊಲೀಸರಿಗೂ ಬೇಕಾಗಿರುವುದು ರಕ್ಷಣೆ. ಆ ರಕ್ಷಣೆ ರೌಡಿಗಳಿಂದಲ್ಲ, ಬದಲಾಗಿ ರಾಜಕೀಯದವರ ಮೂಗುತೂರಿಸುವಿಕೆ ಅರ್ಥಾತ್ ಮಧ್ಯಪ್ರವೇಶ ದಿಂದ. ಎಲ್ಲಿಯೋ... ಯಾವುದೋ... ರೌಡಿಯನ್ನು ಬಂಧಿಸಿದರೆ ಅವನನ್ನ ಬೆಂಬಲಿಸುವ ರಾಜಕೀಯ ಧುರೀಣರ ಒಂದೇ ಒಂದು ಕರೆ ಎಲ್ಲವನ್ನೂ ಹದಗೆಡಿಸಿಬಿಡುತ್ತದೆ.**

ಮೈಸೂರಿನಲ್ಲಿಯೇ ಕರ್ತವ್ಯ ನಿರತರಾಗಿರುವ ಪೊಲೀಸರನ್ನು ಕೈಬಿಟ್ಟು, ಹೊಸಬರನ್ನು ಈ ಪಡೆಗಳಲ್ಲಿ ನಿಯೋಜಿಸುವುದು.

ಹೊಸಬರಾದರೆ ಈ ರೀತಿಯ ಮೈತ್ರಿ ಕಷ್ಟ ಹಾಗೂ ನಿಗ್ರಹ ಸುಲಭ ಸಾಧ್ಯ ವಾಗುತ್ತದೆ.

ಎರಡನೆಯದಾಗಿ, ರೌಡಿಶೀಟರ್‌ಗಳು ಆಯಾಯ ಪೊಲೀಸ್ ಠಾಣೆಗಳಲ್ಲಿ ಹಾಜರಾಗಿ ನಿಯಮಿತವಾಗಿ ಹಾಜರಿ ಹಾಕುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಜೊತೆಗೆ ಸಾರ್ವಜನಿಕವಾಗಿ ಆಗಾಗ್ಗೆ ಪರೇಡ್ ಮಾಡಿಸುತ್ತಿರಬೇಕು.

ಮೂರು ವರುಷಗಳ ಹಿಂದೆ ಮೈಸೂರು ನಗರ ಪೊಲೀಸ್ ಕಮಿಷನರ್ ಆಗಿದ್ದ ರಮೇಶ್ ಬಾನೋತ್ ಅವರು ರೌಡಿಶೀಟರ್‌ಗಳ ಪರೇಡ್ ನಡೆಸಿದರು.

ಆಗ ರಾಜಕೀಯವಾಗಿ ಪ್ರಭಾವಿಗಳಾಗಿದ್ದ ಕೆಲ ರೌಡಿಗಳು ಇದರಲ್ಲಿ ಹಾಜರಾಗಲಿಲ್ಲ. ಆಗ ರಮೇಶ್ ಬಾನೋತ್ ಅವರು ಹಿಂದೆ ಮುಂದೆ ನೋಡದೆ, ಆ ರೌಡಿ ಶೀಟರ್‌ಗಳ ಹೆಡೆಮುರಿ ಕಟ್ಟಿ ಪೊಲೀಸ್ ಠಾಣೆಗೆ ಎಳೆದು ತಂದು, ಇಡೀ ಮಾಧ್ಯಮದ ಮುಂದೆ ಪರೇಡ್ ಮಾಡಿಸಿ, ಎಚ್ಚರಿಕೆ ನೀಡಿದ್ದರು.

ಇದು ರೌಡಿಗಳಿಗೆ ಒಂದು ಬಲವಾದ ಸಂದೇಶವನ್ನು ನೀಡಿತು ಮತ್ತು ಸಾರ್ವಜನಿಕರಲ್ಲಿ ಧೈರ್ಯವನ್ನು ತುಂಬಿತು.

ಕೊನೆಯದಾಗಿ, ರೌಡಿ ನಿಗ್ರಹ ದಳಕ್ಕೆ ತನ್ನದೇ ಆದ ಪ್ರತ್ಯೇಕ ತ್ವರಿತ ಸಂಪರ್ಕಿತ (ಹಾಟ್ ಲೈನ್) ಫೋನ್ ಸಂಖ್ಯೆ ವ್ಯವಸ್ಥೆ ಆಗಬೇಕು.

ಹಿರಿಯ ನಾಗರಿಕರು ಹಾಗೂ ಸಾಮಾನ್ಯ ಜನರು ಕರೆ ಮಾಡಿದಾಗ ತಕ್ಷಣ ಸ್ಪಂದಿಸಿ, ತೊಂದರೆಯಾಗಿರುವ ಜಾಗಕ್ಕೆ ಬೈಕ್‌ನಲ್ಲಿ ತುರ್ತಾಗಿ ಭೇಟಿ ನೀಡುವ ಯುವ ಅಧಿಕಾರಿಗಳನ್ನು ನಿಯೋಜಿಸಬೇಕು. ಏಕೆಂದರೆ ಮಾಮೂಲಿ ಜೀಪಿನಂತಹ ಗಸ್ತು ವಾಹನದಿಂದ ಇದು ಸ್ವಲ್ಪ ಕಷ್ಟ.

ಕಾಲದಿಂದಲೂ ಮೈಸೂರು ಸುರಕ್ಷಿತ ನಗರ ಹಾಗೂ ನಾಗರಿಕರ ತಾಣ ಎಂದು ಹೆಮ್ಮೆಪಡುವಂತಿತ್ತು. ಆದರೆ ಈಗ ಆ ಹೆಮ್ಮೆ ನಿಧಾನವಾಗಿ ಅಳಿಸಿ ಹೋದಂತಾಗುತ್ತಿದೆ. ಇದೀಗ ಸೀಮಾ ಲಾಟ್ಕರ್ ಅವರು ಸ್ಥಾಪಿಸಿರುವ ರೌಡಿ ಪ್ರತಿಬಂಧಕ ದಳದಿಂದ ಮತ್ತೆ ಮೈಸೂರು ಸುರಕ್ಷಿತ ತಾಣವಾಗಲಿ ಮತ್ತು ತನ್ನ ಸಾಂಸ್ಕೃತಿಕ ವೈಭವ ಗರಿಗೆದರಲಿ ಎನ್ನುವುದೇ ಎಲ್ಲರ ಆಶಯ.

ಕೊನೆ ಮಾತು!: ಇದೀಗ ನಮ್ಮ ಕಮಿಷನರ್ ಏನೋ ಪೊಲೀಸರಿಗೆ ಎಲ್ಲ ಸ್ವಾತಂತ್ರ್ಯವನ್ನೂ ನೀಡಿ ರೌಡಿ ಪ್ರತಿಬಂಧಕ ದಳವನ್ನು ಮತ್ತೆ ಪರಿಚಯಿಸುವ ಎಲ್ಲಾ ಪ್ರಯತ್ನವನ್ನೂ ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ.

ಅದಕ್ಕೆ ಸರಿಯಾಗಿ ನಮ್ಮ ಪೊಲೀಸರೂ ರೌಡಿಗಳೊಂದಿಗೆ ಯಾವುದೇ 'ಬಾಂಧವ್ಯ' ಬೆಳೆಸಿಕೊಳ್ಳದೆ ದಿಟ್ಟತನದಿಂದ ನಡೆದುಕೊಳ್ಳುವಂತೆ ತಮ್ಮ ಅಧಿಕಾರಿಗಳಿಗೆ ತಾಕೀತು ಮಾಡಬೇಕಿದೆ.

ಸಾರ್ವಜನಿಕರು ಸಾಮಾನ್ಯವಾಗಿ ಪೊಲೀಸರನ್ನು ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ರೌಡಿಗಳೊಂದಿಗೆ ಮತ್ತು ಪ್ರಶ್ನಾರ್ಹ ಚಾರಿತ್ರ್ಯ ಉಳ್ಳವರೊಂದಿಗೆ ಬಿಡುಬೀಸಾಗಿ ಬೆರೆಯುವುದನ್ನು ನೋಡಿದ್ದಾರೆ. ಹಾಗಾಗಿ ಸಾರ್ವಜನಿಕರ ವಿಶ್ವಾಸವನ್ನು ಗಳಿಸಿ ಕೊಳ್ಳುವುದು ಅಷ್ಟು ಸುಲಭವಲ್ಲ.

> **ರೌಡಿ ನಿಗ್ರಹ ದಳಕ್ಕೆ ತನ್ನದೇ ಆದ ಪ್ರತ್ಯೇಕ ತ್ವರಿತ ಸಂಪರ್ಕಿತ (ಹಾಟ್ ಲೈನ್) ಫೋನ್ ಸಂಖ್ಯೆ ವ್ಯವಸ್ಥೆ ಆಗಬೇಕು. ಹಿರಿಯ ನಾಗರಿಕರು ಹಾಗೂ ಸಾಮಾನ್ಯ ಜನರು ಕರೆ ಮಾಡಿದಾಗ ತಕ್ಷಣ ಸ್ಪಂದಿಸಿ, ತೊಂದರೆಯಾಗಿರುವ ಜಾಗಕ್ಕೆ ಬೈಕ್‌ನಲ್ಲಿ ತುರ್ತಾಗಿ ಭೇಟಿ ನೀಡುವ ಯುವ ಅಧಿಕಾರಿಗಳನ್ನು ನಿಯೋಜಿಸಬೇಕು. ಏಕೆಂದರೆ ಮಾಮೂಲಿ ಗಸ್ತು ವಾಹನದಿಂದ ಇದು ಸ್ವಲ್ಪ ಕಷ್ಟ.**

ದೂರು ತೆಗೆದುಕೊಳ್ಳಬೇಕಾದ ಪೊಲೀಸರೇ, ಆರೋಪಿಗಳೊಂದಿಗೆ ತಿಂದು– ಕುಡಿದು ಮೆರೆಯುತ್ತಿದ್ದರೆ, ಸಾಮಾನ್ಯ ಜನರು ಪೊಲೀಸರ ನಂಬುವುದಾದರೂ ಹೇಗೆ? ಯಾರ ಬಳಿ ದೂರು ಒಯ್ಯುವುದು!?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 27 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 72 | ಪುಟಗಳು: 12+VIII
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅ.18, 19ರಂದು ಮೈಸೂರು ದಸರಾ ಕಂಬಳ–2026

- ಮೈಸೂರು ಸಾತಗಳ್ಳಿ ರಿಂಗ್ ರಸ್ತೆಯ ಪಕ್ಕದ 23 ಎಕರೆ ಎಂಡಿಎ ಜಾಗದಲ್ಲಿ ಉತ್ಸವ ಆಯೋಜನೆ
- ಪ್ರಸಿದ್ಧ ದಸರಾ ಉತ್ಸವಕ್ಕೆ ಮತ್ತೊಂದು ಮೆರಗು ಕಂಬಳ ಉತ್ಸವ





ಮೈಸೂರು ಕಂಬಳ ನಡೆಸಲು ನಿರ್ಧರಿಸಿರುವ ಸ್ಥಳವನ್ನು ಕಂಬಳ ಸಮಿತಿ ಅಧ್ಯಕ್ಷರೂ ಆಗಿರುವ ಪುತ್ತೂರಿನ ಶಾಸಕ ಅಶೋಕ್ ಕುಮಾರ್ ರೈ, ಡಿಸಿಪಿಗಳಾದ ಡಾ.ಹರ್ಷ ಪ್ರಿಯಂವದ, ಕೆ.ಎಸ್.ಸುಂದರರಾಜ್ ಹಾಗೂ ಇನ್ನಿತರರು ಪರಿಶೀಲಿಸಿದರು.


ಮೈಸೂರು, ಜೂ.26(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ವೇಳೆ ಅ.18 ಮತ್ತು 19ರಂದು ಮೈಸೂರಿನ ಸಾತಗಳ್ಳಿ ಬಳಿಯ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಮೈದಾನದಲ್ಲಿ 'ಮೈಸೂರು ದಸರಾ ಕಂಬಳ–2026' ಜರುಗಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆಯ 200 ಜೋಡಿ ಕೋಣಗಳು ಇದರಲ್ಲಿ ಪಾಲ್ಗೊಳ್ಳಲಿವೆ ಎಂದು ಕಂಬಳ ಸಮಿತಿ ಅಧ್ಯಕ್ಷರೂ ಆಗಿರುವ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ತಿಳಿಸಿದ್ದಾರೆ.

ದಸರಾದಲ್ಲಿ ಇದೇ ಮೊದಲ ಬಾರಿಗೆ 'ನಮ್ಮ ಕಂಬಳ–ಮೈಸೂರು ದಸರಾ ಕಂಬಳ' ಶೀರ್ಷಿಕೆಯಡಿ ■9ನೇ ಪುಟಕ್ಕೆ

ಕಾವೇರಿ ಸಂಕ್ರಮಣದಿಂದ ಒಂದು ದಿನ ಮುಂದೂಡಿಕೆ

ಮೈಸೂರು ದಸರಾದಲ್ಲಿ ಈ ಬಾರಿ ನಡೆಸುತ್ತಿರುವ ಕಂಬಳ ಉತ್ಸವವನ್ನು ಹೆಚ್ಚು ಜನ ವೀಕ್ಷಿಸಲು ಅವಕಾಶವಾಗುವಂತೆ ಶನಿವಾರ ಮತ್ತು ಭಾನುವಾರ(ಅ.17 ಮತ್ತು 18) ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಅ.17ರಂದು ಕಾವೇರಿ ಸಂಕ್ರಮಣ ಇರುವುದರಿಂದ ಕೋಣಗಳ ಓಟದ ಸ್ಪರ್ಧೆಗೆ ಬಳಸದಿರುವ ಸಂಪ್ರದಾಯವಿರುವುದರಿಂದ ಶುಕ್ರ ವಾರ ಸಂಜೆ ನಡೆದ ಸಭೆಯಲ್ಲಿ ಅ.18 ಮತ್ತು 19ರಂದು (ಭಾನುವಾರ, ಸೋಮವಾರ) ಕಂಬಳ ನಡೆಸಲು ನಿರ್ಧರಿಸಲಾಗಿದೆ.

ಅಯೋಧ್ಯೆ ರಾಮಮಂದಿರದಲ್ಲೂ ಲೂಟಿ 8 ಮಂದಿ ಬಂಧನ



ಅಯೋಧ್ಯೆ: ಅಯೋಧ್ಯೆಯ ರಾಮಮಂದಿರ ದೇಣಿಗೆ ಲೂಟಿ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ) ಶುಕ್ರವಾರ ಶ್ರೀ ರಾಮ ಜನ್ಮಭೂಮಿ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರ ಆಪ್ತ ಟಿನ್ನು ಯಾದವ್ ಸೇರಿದಂತೆ 8 ಜನರನ್ನು ಬಂಧಿಸಿದೆ.

ಅಯೋಧ್ಯೆಯ ರಾಮಮಂದಿರ ನಿರ್ಮಾಣಕ್ಕೆ ಸ್ವೀಕರಿಸಿದ ದೇಣಿಗೆ ದುರುಪಯೋಗ ಆರೋಪಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಗುರುವಾರ ಅಧಿಕೃತವಾಗಿ ಎಫ್‌ಐಆರ್ ದಾಖಲಿಸಿದ್ದು, 8 ಆರೋಪಿಗಳನ್ನು ಬಂಧಿಸಿದೆ.

ಎಂಟು ಆರೋಪಿಗಳಲ್ಲಿ ಚಂಪತ್ ರಾಯ್ ಅವರ ಆಪ್ತ ರಾಮಶಂಕರ್ ಯಾದವ್ ಅಲಿಯಾಸ್ ಟಿನ್ನು ಯಾದವ್ ಸೇರಿದ್ದಾರೆ. ಇತರ ಆರೋಪಿಗಳೆಂದರೆ ಅನುಕಲ್ಪ್ ಮಿಶ್ರಾ, ಅವಿನಾಶ್ ಶುಕ್ಲಾ, ಕರುಣೇಶ್



ಟಿನ್ನು ಯಾದವ್



ಪಾಂಡೆ, ಲವ್ ಕುಶ್ ಮಿಶ್ರಾ, ರಾಮ ಶಂಕರ್ ಮಿಶ್ರಾ ಮತ್ತು ಸುಭಾಷ್ ಶ್ರೀವಾಸ್ತವ ಅವರನ್ನು ಎಸ್‌ಐಟಿ ಬಂಧಿಸಿದೆ.

ಬಂಧಿತ ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆಯಲಾಗಿದ್ದು, ತನಿಖೆಯ ಭಾಗವಾಗಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಆರೋಪಿಗಳನ್ನು ಬಂಧಿಸುವ ಸಾಧ್ಯತೆಯಿದೆ ■9ನೇ ಪುಟಕ್ಕೆ

ಸನಾತನ ಧರ್ಮದ ನಂಬಿಕೆಯೊಂದಿಗೆ ಆಟವಾಡಿದರೆ ಪರಿಣಾಮ ನೆಟ್ಟಗಿರಲ್ಲ!

ಲಖನೌ: ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿನ ಲೂಟಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಸನಾತನ ಧರ್ಮ ಹಾಗೂ ಸಾರ್ವಜನಿಕರ ಧಾರ್ಮಿಕ ನಂಬಿಕೆಗಳೊಂದಿಗೆ ಆಟವಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.



ಯೋಗಿ ಆದಿತ್ಯನಾಥ್

ಅಯೋಧ್ಯೆಯು ಸಾರ್ವಜನಿಕರ ಮತ್ತು ಸನಾತನ ಧರ್ಮದ ಅಪಾರ ■9ನೇ ಪುಟಕ್ಕೆ

ಶನಿವಾರದ ಶಾಲಾ ಅವಧಿಯಲ್ಲಿ ಬದಲಾವಣೆ

ಬೆಂಗಳೂರು: ಶಾಲಾ ಶಿಕ್ಷಣ ಇಲಾಖೆ ಶನಿವಾರದ ಶಾಲಾ ಅವಧಿಯಲ್ಲಿ ಬದಲಾವಣೆ ಮಾಡಿದೆ. ಇನ್ನು ಮುಂದೆ ಶನಿವಾರ ಬೆಳಗ್ಗೆ 8.30ರಿಂದ ಮಧ್ಯಾಹ್ನ 12.30ರವರೆಗೆ ತರಗತಿಗಳು ನಡೆಯಲಿವೆ. ಇಲ್ಲಿಯವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬೇರೆ ಬೇರೆ ಸಮಯ ಇತ್ತು. ಕೆಲವು ಶಾಲೆಗಳಲ್ಲಿ ಬೆಳಗ್ಗೆ 8ರಿಂದ 12 ಗಂಟೆಯವರೆಗೆ ತರಗತಿಗಳಿದ್ದರೆ, ಇನ್ನೂ ಕೆಲವು ಕಡೆ 7.30ರಿಂದ 11.30ರವರೆಗೆ ಶಾಲೆ ನಡೆಯುತ್ತಿತ್ತು. ಈ ಗೊಂದಲಕ್ಕೆ ತೆರೆ ಎಳೆದಿರುವ ಶಿಕ್ಷಣ ಇಲಾಖೆ, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳು ಒಂದೇ ಸಮಯವನ್ನು ಪಾಲಿಸಬೇಕು ಎಂದು ಸೂಚನೆ ನೀಡಿದೆ.

ಬಂಡೀಪುರ, ನಾಗರಹೊಳೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಸಫಾರಿ ಪುನರಾರಂಭ

ಬೆಂಗಳೂರು, ಜೂ.26(ಕೆಎಂಶಿ)– ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪೂರ್ಣ ಪ್ರಮಾಣದಲ್ಲಿ ಸಫಾರಿ ಪುನರಾರಂಭಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಜ್ಞರು ಮತ್ತು ಅಧಿಕಾರಿಗಳ ತಾಂತ್ರಿಕ ವರದಿ ಶಿಫಾರಸಿನ ಅನ್ವಯ ಸಂರಕ್ಷಿತ ಪ್ರದೇಶದಲ್ಲಿ ಉದ್ಯಾನ ಪ್ರವಾಸ ಆರಂಭಿಸಲಾಗುವುದು.



ಡಿ.ಕೆ. ಶಿವಕುಮಾರ್



ತಾಂತ್ರಿಕ ಸಮಿತಿ ವರದಿಯನ್ನು ಸರ್ಕಾರ ಅಂಗೀಕರಿಸಿದ್ದು ವೈಜ್ಞಾನಿಕ ಮೌಲ್ಯಮಾಪನದ ನಂತರ ಪ್ರವಾಸಿಗರ ಸಂಖ್ಯಾ ಸಾಮರ್ಥ್ಯದ ಆಧಾರದ ಮೇಲೆ ಜಂಗಲ್ ಸಫಾರಿಗೆ ಹಸಿರು ನಿಶಾನೆ ನೀಡಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಕರ್ನಾಟಕ ಪರಿಸರ ಪ್ರವಾಸೋದ್ಯಮದಲ್ಲಿ ಅಪಾರ ಸಂಪನ್ಮೂಲ ಹೊಂದಿದ್ದು, ಸುಸ್ಥಿರ ಪ್ರವಾಸೋದ್ಯಮ ಮಾದರಿ ಪಾಲಿಸಿಕೊಂಡು ಬಂದಿದೆ ಎಂದಿದ್ದಾರೆ.

ವಾಣಿಜ್ಯ ಎಲ್‌ಪಿಜಿ ಮೇಲಿನ ನಿರ್ಬಂಧ ಸಂಪೂರ್ಣ ರದ್ದು!

ಬೆಂಗಳೂರು, ಜೂ.26– ರಾಜ್ಯದ ಹೋಟೆಲ್ ಮತ್ತು ರೆಸ್ಟೋರೆಂಟ್ ಉದ್ಯಮಕ್ಕೆ ಕೇಂದ್ರ ಸರ್ಕಾರದಿಂದ ಮಹತ್ವದ ನಿರಾಳತೆ ಸಿಕ್ಕಿದೆ.

ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆಯ ಮೇಲೆ ವಿಧಿಸಲಾಗಿದ್ದ ಎಲ್ಲಾ ವಲಯವಾರು ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ತೆರವುಗೊಳಿಸಿದೆ. ಇದರೊಂದಿಗೆ ಕರ್ನಾಟಕದ, ವಿಶೇಷವಾಗಿ ಬೆಂಗಳೂರಿನ ಹೋಟೆಲ್‌ಗಳು ಮತ್ತೆ ಹಿಂದಿನಂತೆ ಅಡುಗೆ ಕಾರ್ಯಾಚರಣೆ ನಡೆಸಲು ಅನುಕೂಲವಾಗಿದ್ದು, ಗ್ರಾಹಕರಿಗೂ ಸ್ಥಿರ ದರದಲ್ಲಿ ಹಾಗೂ ಸಂಪೂರ್ಣ ಮೆನು ಲಭ್ಯವಾಗುವ ನಿರೀಕ್ಷೆ ಮೂಡಿದೆ.


ಮುತ್ತತ್ತಿ ಕಾಡಿನಲ್ಲಿ ಮೈಸೂರಿನ ಯುವ ವೈದ್ಯ ವಿಷ ಸೇವಿಸಿ ಆತ್ಮಹತ್ಯೆ

ಹಲಗೂರು: ಖಾಸಗಿ ಕ್ಲಿನಿಕ್ ನಡೆಸುತ್ತಿದ್ದ ಮೈಸೂರು ಜಿಲ್ಲೆಯ ಯುವ ವೈದ್ಯರೊಬ್ಬರು ಮುತ್ತತ್ತಿ ಕಾಡಿನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ.



ಡಾ.ರಕ್ಷಿತ್

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲೂಕಿನ ಮಾಕನಹಳ್ಳಿ ಗ್ರಾಮದ ಸುರೇಂದ್ರ ಅವರ ಪುತ್ರ ಡಾ.ರಕ್ಷಿತ್ (28) ಆತ್ಮಹತ್ಯೆಗೆ ಶರಣಾದವರು. ಇವರು ಮದ್ದೂರು ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಕ್ಲಿನಿಕ್ ನಡೆಸುತ್ತಿದ್ದರು. ಡಾ.ರಕ್ಷಿತ್ ಅವರು ಮಂಗಳವಾರದಿಂದ ನಾಪತ್ತೆಯಾಗಿದ್ದ ಹಿನ್ನೆಲೆಯಲ್ಲಿ ಅವರ ತಾಯಿ ಅನ್ನಪೂರ್ಣಮ್ಮ ಅವರು ಕೆಸ್ತೂರು ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿದ್ದರು. ಶುಕ್ರವಾರ ಬೆಳಗ್ಗೆ ಮುತ್ತತ್ತಿ ಸಮೀಪದ ಅರಣ್ಯ ಇಲಾಖೆ ವಸತಿ ಗೃಹದ ಬಳಿ ಅವರ ಮೋಟಾರ್ ಬೈಕ್ ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸರು ಶೋಧ ಕಾರ್ಯ ಕೈಗೊಂಡರು. ಈ ವೇಳೆ ಅರಣ್ಯದಲ್ಲಿ ವೈದ್ಯರ ಮೃತದೇಹ ಪತ್ತೆಯಾಗಿದೆ.





ಕ್ಲೀನ್ ಆಗಿದ್ದರೆ ಇಡಿಗೆ ಯಾಕೆ ಹೆದರಬೇಕು: ಪ್ರಿಯಾಂಕ್ ಖರ್ಗೆಗೆ ನಿರಾಣಿ ತಿರುಗೇಟು

ಬಾಗಲಕೋಟೆ: ಕುಂಬಳಕಾಯಿ ಕಳ್ಳ ಎಂದರೆ ನೀವೇಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ಮಾಜಿ ಸಚಿವ ಮುರುಗೇಶ್ ನಿರಾಣಿ ತಿರುಗೇಟು ನೀಡಿದ್ದಾರೆ



ಕೇಂದ್ರ ಸರ್ಕಾರ ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿ ಇಡಿ, ಐಟಿ ದಾಳಿ ನಡೆಸುತ್ತಿದೆ. ಮುಂದೆ ನಮ್ಮ ಮೇಲೂ ರೇಡ್ ಆಗಬಹುದು ಎಂದು ಪ್ರಿಯಾಂಕ್ ಖರ್ಗೆ ಕಳವಳ ವ್ಯಕ್ತಪಡಿಸಿದ್ದದ್ದಕ್ಕೆ ನಿರಾಣಿ ಪ್ರತಿಕ್ರಿಯಿಸಿದರು.

ಇಡಿ ಯಾರ ಕೈಗೊಂಬೆಯೂ ಅಲ್ಲ, ಅದು ಸ್ವತಂತ್ರವಾಗಿ ಕೆಲಸ ಮಾಡುವ ಸಂಸ್ಥೆ. ಸಾಕಷ್ಟು ಪುರಾವೆ ಹಾಗೂ ಪ್ರೂಫ್ ಸಿಕ್ಕ ಬಳಿಕವೇ ಅಧಿಕಾರಿಗಳು ದಾಳಿ ನಡೆಸುತ್ತಾರೆ. ಸೂಕ್ತ ಸಾಕ್ಷ್ಯಗಳಿಲ್ಲದೆ ಯಾರ ಮನೆಗೂ ಇಡಿ ಹೋಗುವುದಿಲ್ಲ. ಪ್ರಿಯಾಂಕ್ ಖರ್ಗೆ ಅವರು ಯಾವುದೇ ತಪ್ಪು ಮಾಡದೆ ಕ್ಲೀನ್ ಆಗಿದ್ದರೆ ಯಾಕೆ ಹೆದರಬೇಕು ಎಂದು ಪ್ರಶ್ನಿಸಿದರು.

ಪ್ರಿಯಾಂಕ್ ಖರ್ಗೆ ಅವರಿಗೆ ರಾಜಕಾರಣದಲ್ಲಿ ಉಜ್ವಲ ಭವಿಷ್ಯವಿದೆ. ಅವರ ತಂದೆ ಮಲ್ಲಿಕಾರ್ಜುನ ಖರ್ಗೆ ದೇಶದ ದೊಡ್ಡ ಸ್ಥಾನದಲ್ಲಿದ್ದಾರೆ, ಅವರಿಗೊಂದು ಜವಾಬ್ದಾರಿ ಇದೆ. ಅದನ್ನು ಅರಿತು ಕಲ್ಯಾಣ ಕರ್ನಾಟಕದ ಅಭಿವೃದ್ಧಿ, ಕೈಗಾರಿಕೆ, ಕೃಷಿ ಹಾಗೂ ಶಿಕ್ಷಣದ ಕಡೆಗೆ ಪ್ರಿಯಾಂಕ್ ಗಮನ ಹರಿಸಲಿ ಎಂದರು.

ಪ್ರಿಯಾಂಕ್ ಖರ್ಗೆ ಅವರನ್ನು ಪೇಪರ್ ಹುಲಿ ಎಂದು ಟೀಕಿಸಿದ ನಿರಾಣಿ ದಿನಾ ಟಿವಿ, ಪೇಪರ್‌ಗಳಲ್ಲಿ ನೆಗೆಟಿವ್ ಸುದ್ದಿಗಳು ಬಂದಾಗಲೇ ಅವರು ಕಾಣಿಸಿಕೊಳ್ಳುತ್ತಾರೆ. ಆರ್‌ಎಸ್‌ಎಸ್ ಹಿರಿಯರು, ತತ್ವ-ಸಿದ್ಧಾಂತಗಳ ಬಗ್ಗೆ ಏನೂ ತಿಳಿಯದೇ ಮಾತನಾಡಿ ಸಮಯ ವ್ಯರ್ಥ ಮಾಡಬಾರದು ಎಂದು ತಿಳಿಸಿದರು.

ಸನ್ಮಾನ



ಬೆಂಗಳೂರಿನಲ್ಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಕಚೇರಿ 'ಗಾಯತ್ರಿ ಭವನ'ದಲ್ಲಿ ಮೈಸೂರಿನ ಉರಗ ರಕ್ಷಕ ಎಸ್.ಬಾಲಸುಬ್ರಹ್ಮಣ್ಯ(ಸ್ನೇಕ್ ಶ್ಯಾಮ್) ಅವರನ್ನು ಮಹಾಸಭಾದ ರಾಜ್ಯಾಧ್ಯಕ್ಷ ಎಸ್.ರಘುನಾಥ್ ಅವರು ಗೌರವಿಸಿದರು. ಈ ವೇಳೆ ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮೀಕಾಂತ್, ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್, ರಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಐದು ದಿನದಲ್ಲಿ ಮೈಸೂರು ಜಿಲ್ಲೆಯ 1271 ಪ್ರಕರಣದಲ್ಲಿ 3.22 ಲಕ್ಷ ದಂಡ ಸಂಗ್ರಹ


ಮೈಸೂರು, ಜೂ.26(ಎಸ್‌ಪಿಎನ್)– ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆಯ 1271 ಪ್ರಕರಣಗಳಲ್ಲಿ 3.22 ಲಕ್ಷ ರೂ (ಜೂ.21ರಿಂದ ಜೂ.25ರವರೆಗೆ) ದಂಡ ಸಂಗ್ರಹಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.21ರಂದು 292 ಪ್ರಕರಣದಲ್ಲಿ 73,500 ಸಾವಿರ ರೂ., ಜೂ.22ರಂದು 140 ಪ್ರಕರಣದಲ್ಲಿ 35 ಸಾವಿರ, ಜೂ.23ರಂದು 294 ಪ್ರಕರಣದಲ್ಲಿ 73,750 ರೂ., ಜೂ.24ರಂದು 355 ಪ್ರಕರಣದಲ್ಲಿ 90,250 ರೂ., ಜೂ.25ರಂದು 190 ಪ್ರಕರಣದಲ್ಲಿ 49,500 ಸೇರಿದಂತೆ 1271 ಪ್ರಕರಣದಲ್ಲಿ 3.22 ಲಕ್ಷ ರೂ ಸಂಗ್ರಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಅಳವಡಿಸಿರುವ ಸಿಸಿ ಕ್ಯಾಮಾರದಲ್ಲಿ ವಾಹನ ಸವಾರರು ಸಂಚಾರ ನಿಯಮ ಉಲ್ಲಂಘನೆ ಮಾಡಿದ್ದು, ಅವುಗಳಲ್ಲಿ 1,271 ಪ್ರಕರಣದಲ್ಲಿ ದಂಡ ವಸೂಲಾಗಿದೆ.

ಅಲ್ಲದೆ, ಜಿಲ್ಲೆಯ ಎಲ್ಲಾ ಠಾಣೆಗಳಲ್ಲಿ ನಗದು ಪಾವತಿಸಲು ಹಾಗೂ ಕೆಎಸ್‌ಪಿ ಫೈನ್ ಆ್ಯಪ್ ವೆಬ್‌ಸೈಟ್ ಮೂಲಕ ದಂಡ ಪಾವತಿಸಲು ಜು.10ರವರೆಗೆ ಅವಕಾಶ ನೀಡಲಾಗಿದ್ದು, ಸರ್ಕಾರ ಘೋಷಿಸಿರುವ ಶೇ.50 ರಿಯಾಯಿತಿಯನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮನವಿ ಮಾಡಿದ್ದಾರೆ.

ದೇವನೂರು ಮಹದೇವರ ಭೇಟಿ...



ಹಿರಿಯ ಸಾಹಿತಿ ದೇವನೂರು ಮಹದೇವ ಅವರ ನಿವಾಸಕ್ಕೆ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಶುಕ್ರವಾರ ಭೇಟಿ ನೀಡಿ, ಕುಶಲೋಪರಿ ಜೊತೆಗೆ ಪ್ರಸ್ತುತ ರಾಜಕಾರಣ ಸಂಬಂಧ ಮಾತುಕತೆ ನಡೆಸಿದರು.

ಉಚಿತ ಚಿಕಿತ್ಸಾ ಶಿಬಿರ

ಮೈಸೂರು, ಜೂ. 26– ಮೈಸೂರಿನ ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಜೂ. 29 ರಿಂದ ಜು. 5 ರವರೆಗೆ 7 ದಿನಗಳ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9731799317, ದೂ. 0821–2970619 ಸಂಪರ್ಕಿಸಬಹುದು.

ಕುಡಿಯುವ ನೀರು, ನೈರ್ಮಲ್ಯ ಸಮಿತಿ ಸಭೆ



ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆ ನಡೆಯಿತು.

ಹುಣಸೂರು, ಜೂ.26– ಜಿಪಂ ಮೈಸೂರು, ತಾಪಂ ಹುಣಸೂರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತಟ್ಟೆಕೆರೆ ಗ್ರಾಪಂ, ಭಗೀರಥ ಸಂಸ್ಥೆ ಸಹಯೋಗದೊಂದಿಗೆ ತಾಲೂಕಿನ ತಟ್ಟೆಕೆರೆ ಗ್ರಾಪಂ ಆವರಣದಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆ ನಡೆಯಿತು.

ಜಿಲ್ಲಾ ತಂಡದ ನಾಯಕ ಮಹೇಶ್, ಜಲ ಜೀವನ್ ಮಿಷನ್ ಯೋಜನೆಯ ಗುರಿ, ಉದ್ದೇಶ ಹಾಗೂ ನೀರು ಮತ್ತು ನೈರ್ಮಲ್ಯ ಸಮಿತಿ ರಚನೆ, ಜವಾಬ್ದಾರಿಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ತಾಲೂಕು ಸಂಯೋಜಕ ಆನಂದ್, ಜಲ ಜೀವನ್ ಮಿಷನ್ ಯೋಜನೆ ಕಾರ್ಯಾಚರಣೆ ಮತ್ತು ನಿರ್ವಹಣೆ ಹಾಗೂ ಸುಸ್ಥಿರತೆ ಬಗ್ಗೆ ಮಾಹಿತಿ ನೀಡಿದರು.

ಪಿಡಿಓ ಲೋಕೇಶ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ನೀರು ಮತ್ತು ನೈರ್ಮಲ್ಯ ಹೋಗಲಾಡಿಸಲು ಜನರು ಜಾಗೃತರಾಗಬೇಕು. ಗ್ರಾಪಂಗೆ ಕಾಲ ಕಾಲಕ್ಕೆ ಕಂದಾಯ ಕಟ್ಟುವ ಮೂಲಕ ಗ್ರಾಮಾಭಿವೃದ್ಧಿಗೆ ಕೈ ಜೋಡಿಸಬೇಕು ಎಂದರು.

ಸಭೆಯಲ್ಲಿ ಗ್ರಾಪಂ ಆಡಳಿತಾಧಿಕಾರಿ ನವೀನ್, J-PAL SOUTH ASIA ಸಂಸ್ಥೆ ಚೆನ್ನೈ ತಂಡದ ಸದಸ್ಯರಾದ ಅದಿತಿ ಪ್ರೇಮ್ ಕುಮಾರ್, ಪ್ರದ್ಯುಮ್ನ ಕಾರ್ತಿಕ್, ಜೈನ ಹರನ್, ಪ್ರವೀಣ್ ಮತ್ತು ವಿಜಯ್ ಕುಮಾರ್ ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಗ್ರಾಪಂ ಸಿಬ್ಬಂದಿ ಹಾಜರಿದ್ದರು.

ನಿಧನ



ಚಾಮರಾಜನಗರ ತಾಲೂಕಿನ ದೊಡ್ಡರಾಯಪೇಟೆ ಗ್ರಾಮದ ನಿವಾಸಿ ಸೋಬಾನೆ ದುಂಡಮ್ಮ (74) ಶುಕ್ರವಾರ ನಿಧನರಾದರು. ಮೃತರು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸಿದ್ದರಾಜು ಸೇರಿದಂತೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದು, ಅಂತ್ಯಕ್ರಿಯೆಯು ಶನಿವಾರ ಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರಿಷತ್ ಚುನಾವಣೆಯಲ್ಲಿ 'ಅಡ್ಡ' ದಾರಿ ಹಿಡಿದವರಿಗೆ ವರಿಷ್ಠರಿಂದ ಶೀಘ್ರ ತಕ್ಕ ಶಾಸ್ತಿ!

●ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾಹಿತಿ ●ವರಿಷ್ಠರಿಗೆ ಈ ಬಗ್ಗೆ ಸಂಪೂರ್ಣ ಮನವರಿಕೆ

ಬೆಂಗಳೂರು, ಜೂ.26(ಕೆಎಂಶಿ)– ಪರಿಷತ್ ಚುನಾವಣೆ ವೇಳೆ ಅಡ್ಡ ಮತದಾನ ಮಾಡಿ ಪಕ್ಷಕ್ಕೆ ದ್ರೋಹ ಬಗೆದ ಬಿಜೆಪಿ ಶಾಸಕರ ನಡೆ ಬಗ್ಗೆ ಪಕ್ಷದ ವರಿಷ್ಠರು ಗಮನಿಸುತ್ತಿದ್ದಾರೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಸತ್ಯ ಇಂದಲ್ಲ ನಾಳೆ ಹೊರಕ್ಕೆ ಬರಲಿದೆ, ಅಡ್ಡ ಮತದಾನದ ಚರ್ಚೆಗೆ ಸದ್ಯಕ್ಕೆ ಇತಿಶ್ರೀ ಹಾಡೋಣ. ಗೌಪ್ಯ ಮತದಾನ ವ್ಯವಸ್ಥೆಯಲ್ಲಿ ಅಡ್ಡ ಮತದಾನ ಮಾಡಿದರೆ ತಿಳಿಯುವುದಿಲ್ಲ ಎಂಬುದಾಗಿ ಊಹಿಸುವುದು ತಪ್ಪು, ಎಲ್ಲಾ ಮಾಹಿತಿಯನ್ನು ಕೇಂದ್ರದ ವರಿಷ್ಠರಿಗೆ ತಿಳಿಸಿದ್ದೇನೆ. ಪಕ್ಷಕ್ಕೆ ಯಾರೇ ದ್ರೋಹ ಬಗೆದಿದ್ದರೂ ಬಿಡುವುದಿಲ್ಲ. ದೆಹಲಿ ವರಿಷ್ಠರ ಭೇಟಿ ಮಾಡಿ ಎಲ್ಲಾ ಮಾಹಿತಿ ನೀಡಿದ್ದೇನೆ ಎಂದರು.

ಎಸ್.ಟಿ.ಸೋಮಶೇಖರ್ ಅವರಿಗೆ ನಮ್ಮ ಪಕ್ಷದ ಮೂವರು ಶಾಸಕರ ಸಂಪರ್ಕದ ಮಾಹಿತಿ ಇದೆ. ಯಾರನ್ನೂ ರಕ್ಷಿಸುವ ಮಾತೇ ಇಲ್ಲ. ಸತ್ಯ ಏನು ಎಂಬುದು ಮುಂದಿನ ದಿನಗಳಲ್ಲಿ ತಿಳಿಯಲಿದೆ.

ವಿಧಾನ ಪರಿಷತ್ ಚುನಾವಣೆ ನಂತರ ಡಿ.ವಿ.ಸದಾನಂದಗೌಡ ದೂರವಾಣಿ ಕರೆ ಮಾಡಿ ಮಾತನಾಡಿದ್ದನ್ನು ಪ್ರಧಾನ ಕಾರ್ಯದರ್ಶಿಗೆ ತಿಳಿಸಿದ್ದೇನೆ.

ನಮ್ಮ ಪಕ್ಷದ ಕೆಲವು ಶಾಸಕರನ್ನು ಸಂಪರ್ಕಿಸುವ ಕೆಲಸ ಕಾಂಗ್ರೆಸ್‌ನಿಂದ ನಡೆಯುತ್ತಿದೆ ಎಂಬ ಮಾಹಿತಿ ಇವೆ. ಸದಾನಂದಗೌಡ ಒಳ್ಳೆ ಉದ್ದೇಶದಿಂದ ಹೇಳಿದ್ದಾರೆ. ಸಂಶಯ ಪಡುವುದಾದರೆ ಎಲ್ಲ ಬಿಜೆಪಿ ಶಾಸಕರ ಮೇಲೆ ಪಡಬೇಕು ಎಂದರು.



ನನ್ನ ಟೈಮ್ ಚೆನ್ನಾಗಿದೆ, ಕಳೆದ ಎರಡೂ ವರೆ ವರ್ಷದಿಂದ ಎಲ್ಲವನ್ನು ಗಮನಿಸಿದ್ದೇನೆ. ನನಗೆ ತಿಳಿವಳಿಕೆ ಇದೆ. ಪಕ್ಷದ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಲು ಆಗಲ್ಲ ಎಂದಾದರೆ ಅಧ್ಯಕ್ಷ ರಾಗಲು ನಾಲಾಯಕ್. ನನ್ನಿಂದ ಅಪಚಾರ ಆಗಿಲ್ಲ. ಹಿರಿಯರಿಗೆ ಅಗೌರವ ತೋರುವ ಅವಶ್ಯಕತೆ ಇಲ್ಲ. ನಮ್ಮ ಪಕ್ಷದ ರಾಷ್ಟ್ರೀಯ ನಾಯಕರು ಜವಾಬ್ದಾರಿ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ಸರಿಹೋಗಲಿದೆ ಎಂದರು.

ನನ್ನನ್ನು ಪಕ್ಷದ ರಾಜ್ಯಾಧ್ಯಕ್ಷನನ್ನಾಗಿ ಮಾಡಿರುವುದು ಸಂಘಟನೆಗೇ ಹೊರತು ಮುಂದಿನ ಮುಖ್ಯಮಂತ್ರಿ ಹುದ್ದೇಗೇರಲು ಅಲ್ಲ. ಒಂದು ತಂಡವಾಗಿ ಕೆಲಸ ಮಾಡುತ್ತಿದ್ದೇನೆ. ಹೊಂದಾಣಿಕೆ ರಾಜಕೀಯ ಮಾಡಿದರೆ ನನ್ನದೂ ಅಪರಾಧವೇ. ನನ್ನ ಪಕ್ಷ ಮತ್ತು ಕಾರ್ಯಕರ್ತರ ಬಗ್ಗೆ ಅಪಾರ ವಿಶ್ವಾಸ ಇದೆ.

ಅಡ್ಡಮತದಾನದಲ್ಲಿ ಡಿ.ಕೆ.ಶಿವಕುಮಾರ್ ಪಾತ್ರ ಇದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ಶಾಸಕರಂತೂ ಸ್ವಯಂಪ್ರೇರಿತವಾಗಿ ಅಡ್ಡ ಮತದಾನ ಮಾಡಿಲ್ಲ. ಯಾರೋ ಷಡ್ಯಂತ್ರ ಮಾಡಿದ್ದರೂ ತಿಳಿಯಲಿದೆ.

ಡಿ.ಕೆ.ಶಿವಕುಮಾರ್ ಬಹುಮುಖ ಪ್ರತಿಭೆಯ ಮುಖ್ಯಮಂತ್ರಿ, ಅವರು ಯಾರ ಮನೆಗೇ ಬಂದರೂ ನಮ್ಮ ಮನೆಯವರೇ ಎನ್ನಿಸುತ್ತದೆ.

ಮುಖ್ಯಮಂತ್ರಿ ಅರ್ಭಟ ಏನೇ ಇರಲಿ, ಮುಂದಿನ ಬಾರಿ ನಮ್ಮ ಪಕ್ಷವೇ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಒಳ್ಳೆಯ ಆಡಳಿತ ಕೊಡುತ್ತೇವೆ ಎಂಬ ವಿಶ್ವಾಸ ಇದೆ. ಮುಂದಿನ ಎರಡು ವರ್ಷ ಸಂಘಟನೆಗೆ ಶಕ್ತಿ ತುಂಬುತ್ತೇನೆ ಎಂದರು.

ರೈತರ ಪರ ಹೋರಾಟ: ಬಿಡದಿ ಟೌನ್‌ಶಿಪ್ ಸಂಬಂಧ ರೈತರ ಪರ ಹೋರಾಟ ಮಾಡಲಾಗುವುದು. ರೈತರನ್ನು ಒಕ್ಕಲೆಬ್ಬಿಸಲು ಬಿಜೆಪಿ ಬಿಡಲ್ಲ, ನಮ್ಮ ಹೋರಾಟದ ಬಗ್ಗೆ ಬೆಂಗಳೂರಿನಲ್ಲಿ ಘೋಷಣೆ ಮಾಡಲಾಗುವುದು.

ಗೃಹಲಕ್ಷ್ಮಿ ಹಣದಲ್ಲಿ ಅಕ್ರಮ ನಡೆದಿದೆ ಎಂಬುದಾಗಿ ಸಿಎಜಿ ವರದಿ ಇದೆ. ರಾಜ್ಯಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಗ್ಯಾರಂಟಿ ಅನುಷ್ಠಾನ ಸಮಿತಿಗಳಿವೆ. ಸಮಿತಿಗಾಗಿ ಜನರ ತೆರಿಗೆಯ ಕೋಟಿಗಟ್ಟಲೆ ಹಣ ಖರ್ಚು ಮಾಡಲಾಗುತ್ತಿದೆ. ಇಷ್ಟೆಲ್ಲಾ ಅಕ್ರಮ ನಡೆಯುತ್ತಿದ್ದರೂ ಸಮಿತಿಗಳು ಏನು ಮಾಡುತ್ತಿದ್ದವು. ಗ್ಯಾರಂಟಿ ಅಧ್ಯಕ್ಷರನ್ನು ಮನೆಗೆ ಕಳುಹಿಸಿ, ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಲಿ.

ಜನರಲ್ಲಿ ಅರಿವು ಮೂಡಿಸುವ ಕಾರ್ಯ: ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂಬಂಧ ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಎಸ್‌ಐಆರ್ ಕುರಿತು ಬಿಜೆಪಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಅರಿವು ಮೂಡಿಸುವ ಕೆಲಸ ಮಾಡುತ್ತಿದೆ. ಕಾರ್ಯಕರ್ತರಿಗೆ ಜವಾಬ್ದಾರಿ ನೀಡಿದ್ದೇವೆ ಎಂದರು.

ರಾಜ್ಯದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ, ರಾಜ್ಯದಲ್ಲಿನ ಭ್ರಷ್ಟ ಕಾಂಗ್ರೆಸ್ ಸರ್ಕಾರದ ಮುಖವಾಡ ಕಳಚುವ ಕೆಲಸ ನಮ್ಮೆಲ್ಲ ಮುಖಂಡರು, ಕಾರ್ಯಕರ್ತರ ನೇತೃತ್ವದಲ್ಲಿ ಆಗಬೇಕಿದೆ ಎಂದರು.

ಧರ್ಮಸ್ಥಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷ ಸಂಘಟನೆಯಲ್ಲಿ ಲಕ್ಷಾಂತರ ಕಾರ್ಯಕರ್ತರ ಶಕ್ತಿ ಬಗ್ಗೆ ವಿಶ್ವಾಸವಿದೆ. ಜನವಿರೋಧಿ, ಬಡವರು, ರೈತರು, ಯುವಜನ ವಿರೋಧಿ ಸರ್ಕಾರವನ್ನು ಮುಂಬರುವ ದಿನಗಳಲ್ಲಿ ಬುಡಮೇಲು ಕಿತ್ತು ಹಾಕುವ ಕೆಲಸ ನಮ್ಮೆಲ್ಲ ಕಾರ್ಯಕರ್ತರ ಶ್ರಮದಿಂದ ಆಗಲಿದೆ ಎಂದರು.

ಎಂಜಾಯ್ ಮಾಡಿದ್ದ ಮರೆತರೆ?

(ಕೆ.ಎಸ್.ಈಶ್ವರಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿ) ಹಿಂದಿನ ಸಿದ್ದರಾಮಯ್ಯ ನೇತೃತ್ವದ ಸರ್ಕಾರ 5 ವರ್ಷಗಳ ಆಡಳಿತದಲ್ಲಿ 18ಕ್ಕೂ ಹೆಚ್ಚು ಹಿಂದೂ ಕಾರ್ಯಕರ್ತರ ಬರ್ಬರ ಹತ್ಯೆ ಆಗಿತ್ತೆಂಬುದನ್ನು ಅವರು ಮರೆತಿರಬಹುದು.

ಪಕ್ಷದ ಸಾವಿರಾರು ಕಾರ್ಯಕರ್ತರು ಹಾಗೂ ಹಿಂದೂ ಕಾರ್ಯಕರ್ತರ ವಿರುದ್ಧ ಮೊಕದ್ದಮೆಗಳನ್ನು ಹೂಡಿ ಜೈಲಿಗಟ್ಟುವ ಷಡ್ಯಂತ್ರವೂ ಆಯಿನ ಕಾಂಗ್ರೆಸ್ ಆಡಳಿತದಲ್ಲಿ ನಡೆದಿತ್ತು. ಆಗ 17 ಶಾಸಕರ ಬೆಂಬಲದಿಂದ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಒಳ್ಳೆಯ ಆಡಳಿತ ನೀಡಲು ಸಾಧ್ಯವಾಯಿತು.

ಗ್ರಾಮೀಣಾಭಿವೃದ್ಧಿ ಸಚಿವರಾಗಿ ಈಶ್ವರಪ್ಪ ಏನು ಸಾಧನೆ ಮಾಡಿದರೆಂಬ ಕುರಿತು ಚರ್ಚೆಗಳನ್ನು ಬಯಸುವುದಿಲ್ಲ. ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡರು. ಅವೆಲ್ಲ ಪ್ರಸ್ತುತವಲ್ಲ, ಎಂಜಾಯ್ ಮಾಡಿದ್ದನ್ನು ಮರೆತಿದ್ದಂತೆ ಕಾಣುತ್ತದೆ.

-ಬಿ.ವೈ.ವಿಜಯೇಂದ್ರ, ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ

ಶ್ರೀರಾಂಪುರದಲ್ಲಿ ವಿದ್ಯಾರ್ಥಿನಿಯರ ಹಾಸ್ಟೆಲ್ ನಿರ್ಮಾಣಕ್ಕೆ ಚಾಲನೆ



ಮೆಟ್ರಿಕ್ ನಂತರದ ಸ್ನಾತಕೋತ್ತರ ಪದವಿ ಬಾಲಕಿಯರ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು,ಜೂ.26– ಮೈಸೂರಿನ ಶ್ರೀರಾಂಪುರದ ಭವ್ಯ ಭಾರತ ಬಡಾವಣೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 3.19 ಕೋಟಿ ವೆಚ್ಚದ ಮೆಟ್ರಿಕ್ ನಂತರದ ಸ್ನಾತಕೋತ್ತರ ಪದವಿ ಬಾಲಕಿಯರ ವಿದ್ಯಾರ್ಥಿನಿಲಯ ನಿರ್ಮಾಣ ಕಾಮಗಾರಿಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕರು, ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಹೆಣ್ಣುಮಕ್ಕಳು ಉನ್ನತ ಶಿಕ್ಷಣ ಪಡೆಯಲು ಸುರಕ್ಷಿತ ಹಾಗೂ ಸುಸಜ್ಜಿತ ವಿದ್ಯಾರ್ಥಿನಿಲಯಗಳ ನಿರ್ಮಾಣ ಅತ್ಯಂತ ಅಗತ್ಯವಾಗಿದೆ. ಕಟ್ಟಡ ನಿರ್ಮಾಣದಲ್ಲಿ ಅತ್ಯುತ್ತಮ ಗುಣಮಟ್ಟ ಕಾಯ್ದುಕೊಂಡು ಯಾವುದೇ ಲೋಪವಾಗದಂತೆ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ ವಿದ್ಯಾರ್ಥಿನಿಯರ ಬಳಕೆಗೆ ಮುಕ್ತಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಗಿರೀಶ್, ಸತೀಶ್, ಜಗದೀಶ್ ಮಾಯಾ, ಮನೋಜ್, ಸತೀಶ್ ಟ್ರಾವೆಲ್, ಪ್ರದೀಪ್, ಗಿರೀಶ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಬೀದರ್ ಪೊಲೀಸರಿಂದ 9.41 ಕೋಟಿ ಮೌಲ್ಯದ ಮಾದಕ ವಸ್ತು ನಾಶ

ಬೀದರ್: ಜಿಲ್ಲೆಯಾದ್ಯಂತ ವಿವಿಧ ಕಡೆಗಳಲ್ಲಿ ದಾಳಿ ನಡೆಸಿ, ಜಪ್ತಿ ಮಾಡಲಾಗಿದ್ದ 9.41 ಕೋಟಿ ರೂ. ಮೌಲ್ಯದ ಮಾದಕ ವಸ್ತುವನ್ನು ಬೀದರ್ ಪೊಲೀಸರು ನಾಶಪಡಿಸಿದ್ದಾರೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಧನ್ನೂರು ಸಮೀಪದ ಜೈವಿಕ ತ್ಯಾಜ್ಯ ವಿಲೇವಾರಿ ಕುಲುಮೆ ಘಟಕದಲ್ಲಿ 997 ಕೆ.ಜಿ ಗಾಂಜಾ, 51 ಸಾವಿರಕ್ಕೂ ಅಧಿಕ ನಶೆ ಗುಳಿಗೆಗಳು ಮತ್ತು 743 ಮಾದಕ ಸಿರಪ್‌ಗಳನ್ನು ನಾಶಪಡಿಸಿದ್ದಾರೆ.

ಜಿಲ್ಲಾ ಡ್ರಗ್ಸ್ ವಿಲೇವಾರಿ ಸಮಿತಿಯ ನಿಯಮಗಳ ಪ್ರಕಾರ ಎಸ್ಪಿ ಪ್ರದೀಪ್ ಗುಂಟಿ ನೇತೃತ್ವದಲ್ಲಿ ಕೋಟಿ ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ನಾಶ ಮಾಡಲಾಗಿದೆ. ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ದಾಖಲಾಗಿದ್ದ 22 ಪ್ರಕರಣಗಳಲ್ಲಿ ಜಪ್ತಿಯಾಗಿದ್ದ ಮಾದಕ ದ್ರವ್ಯಗಳನ್ನು ನಾಶ ಮಾಡಿ, ಅಕ್ರಮವಾಗಿ ಮಾದಕ ದ್ರವ್ಯ ಮಾರಾಟ ಮಾಡುವ ದಂಧೆಕೋರರಿಗೆ ಎಸ್ಪಿ ವಾರ್ನಿಂಗ್ ನೀಡಿದ್ದಾರೆ.

ರೈತರ ಒಕ್ಕಲೆಬ್ಬಿಸಿ ಟೌನ್‌ಶಿಪ್ ಮಾಡುವುದರಲ್ಲಿ ಅರ್ಥ ಇಲ್ಲ

ಪರಿಹಾರ ಕುರಿತು ಮರುಪರಿಶೀಲನೆ: ಡಿಸಿಎಂ ಪರಮೇಶ್ವರ್

ಬೆಂಗಳೂರು, ಜೂ.26– ಬಿಡದಿ ಟೌನ್‌ಶಿಪ್ ಯೋಜನೆಗೆ ರೈತರಿಂದ ತೀವ್ರ ವಿರೋಧ ವ್ಯಕ್ತವಾಗುತ್ತಿರುವ ನಡುವೆಯೇ, ರಾಜ್ಯ ಸರ್ಕಾರ ಪರಿಹಾರ ಕುರಿತು ಮರುಚಿಂತನೆ ನಡೆಸುವ ಸೂಚನೆ ನೀಡಿದೆ.



ರೈತರ ಒಪ್ಪಿಗೆ ಇಲ್ಲದೆ ಯಾವುದೇ ಭೂಸ್ವಾಧೀನ ಅಥವಾ ಟೌನ್‌ಶಿಪ್ ನಿರ್ಮಾಣ ಯೋಜನೆಯನ್ನು ಜಾರಿಗೊಳಿಸುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದು, ಅಗತ್ಯವಿದ್ದರೆ ಭೂಸ್ವಾಧೀನ ಪರಿಹಾರ ಮೊತ್ತವನ್ನು ಮರುಪರಿಶೀಲಿಸಿ, ಹೆಚ್ಚಿಸಲು ಸರ್ಕಾರ ಸಿದ್ಧವಿದೆ ಎಂದು ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, "ರೈತರನ್ನು ಒಕ್ಕಲೆಬ್ಬಿಸಿ ಟೌನ್‌ಶಿಪ್ ನಿರ್ಮಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಯಾವುದೇ ಗೊಂದಲ ಸೃಷ್ಟಿಯಾಗದಂತೆ ರೈತರೊಂದಿಗೆ ಚರ್ಚಿಸಿ, ಅವರ ಒಪ್ಪಿಗೆ ಪಡೆದ ನಂತರವೇ ಯೋಜನೆಯನ್ನು ಮುಂದುವರಿಸುತ್ತೇವೆ. ಯಾವುದೇ ಗೊಂದಲ ಅಥವಾ ಸಂಘರ್ಷ ಉಂಟಾಗದ ರೀತಿಯಲ್ಲಿ ಟೌನ್‌ಶಿಪ್ ಅಭಿವೃದ್ಧಿಪಡಿಸುವುದು ಸರ್ಕಾರದ ಉದ್ದೇಶ ಎಂದು ತಿಳಿಸಿದರು.

ಭೂಸ್ವಾಧೀನಕ್ಕೆ ನೀಡುತ್ತಿರುವ ಪರಿಹಾರದ ಬಗ್ಗೆ ರೈತರಿಗೆ ಅಸಮಾಧಾನವಿದ್ದರೆ, ಅದನ್ನು ಸರ್ಕಾರ ಮತ್ತೊಮ್ಮೆ ಪರಿಶೀಲಿಸಲು ಸಿದ್ಧವಿದೆ, "ಪರಿಹಾರ ಮೊತ್ತ ಸಾಕಾಗುತ್ತಿಲ್ಲ ಎಂದು ರೈತರು ಅಭಿಪ್ರಾಯಪಟ್ಟರೆ, ಅದರ ಮರುಪರಿಶೀಲನೆ ನಡೆಸುತ್ತೇವೆ. ಅಗತ್ಯವಿದ್ದರೆ ಹೆಚ್ಚಿನ ಪರಿಹಾರ ನೀಡುವ ಬಗ್ಗೆಯೂ ಸರ್ಕಾರ ಸಕಾರಾತ್ಮಕವಾಗಿ ನಿರ್ಧಾರ ಕೈಗೊಳ್ಳಲಿದೆ" ಎಂದು ಭರವಸೆ ನೀಡಿದರು.

ಇದೇ ವೇಳೆ ಟೌನ್‌ಶಿಪ್ ಯೋಜನೆ ಎಐ (ಕೃತಕ ಬುದ್ಧಿಮತ್ತೆ) ಹಬ್ ನಿರ್ಮಾಣಕ್ಕಾಗಿ ರೂಪಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಬೆಂಗಳೂರು ನಗರದಲ್ಲಿ ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಮತ್ತು ಜನಸಂಖ್ಯೆಯ ಒತ್ತಡ ಹೆಚ್ಚುತ್ತಿದೆ. ಈ ಒತ್ತಡವನ್ನು ಕಡಿಮೆ ಮಾಡಲು ಬೆಂಗಳೂರಿನ ಸುತ್ತಮುತ್ತ ಯೋಜಿತ ಟೌನ್‌ಶಿಪ್‌ಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಹೇಳಿದರು.

ಬೆಂಗಳೂರು ಸಮೀಪದ ತುಮಕೂರು, ಕೋಲಾರ ಸೇರಿದಂತೆ ಇತರೆ ನಗರಗಳನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಿದರೆ ರಾಜಧಾನಿಯ ಮೇಲಿನ ಜನಸಂಖ್ಯೆ ಮತ್ತು ಸಂಚಾರದ ಒತ್ತಡವನ್ನು ಕಡಿಮೆ ಮಾಡಬಹುದು. ಈ ಉದ್ದೇಶದಿಂದಲೇ ಟೌನ್‌ಶಿಪ್ ಯೋಜನೆಯನ್ನು ಸರ್ಕಾರ ಮುಂದಿಟ್ಟಿದೆ ಎಂದು ವಿವರಿಸಿದರು.

ಪೌರ ಕಾರ್ಮಿಕರ ವೃತ್ತಿ ವಂಶ ಪಾರಂಪರ್ಯವಲ್ಲ; ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕಲ್ಪಿಸಿ ಮುಂದೆ ಬನ್ನಿ


ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸಲಹೆ

ಮೈಸೂರು, ಜೂ.26(ವಿವಿಹೆಚ್)– ಪೌರ ಕಾರ್ಮಿಕ ವೃತ್ತಿ ಹುಟ್ಟಿನಿಂದಲೇ ಬಂದಿದ್ದಲ್ಲ. ಅದೂ ವಂಶಪಾರಂಪರ್ಯವೂ ಅಲ್ಲ. ಪಾಲಿಕೆ ಮೇಯರ್ ಕೂಡ ಒಬ್ಬ ಪೌರ ಕಾರ್ಮಿಕನೇ ಇದನ್ನು ಅರಿಯಬೇಕು. ಉತ್ತಮ ಶಿಕ್ಷಣದ ಮೂಲಕ ಉನ್ನತ ಹುದ್ದೆಗಳ ಅಲಂಕರಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ನಗರದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಸಂಘ, ಮೈಸೂರು ಜಿಲ್ಲಾ ಮತ್ತು ನಗರ ಪೌರ ಕಾರ್ಮಿಕರ ಸಂಘಟನೆಗಳ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ನೂತನ ಸದಸ್ಯರಾದ ಸಿ.ಶಂಕರ್ ಅಂಕನಶೆಟ್ಟಿಪುರ ಅವರಿಗೆ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹುಟ್ಟಿನಿಂದ ವ್ಯಕ್ತಿಯ ಅಳೆಯುವುದು ಕೀಳು ಮನಸ್ಥಿತಿ. ಹುಟ್ಟಿನ ಜೊತೆಗೆ ಜಾತಿಯ ಹಣೆಪಟ್ಟಿ ಕಟ್ಟಿ ಅದರ ಸಂಕೋಲೆಯಲ್ಲಿಯೇ ಸಾಯುವಂತೆ ಬಂಧಿಸುವ ಜನರೂ ಇಂದಿಗೂ ನಮ್ಮ ನಿಮ್ಮ ಬಳಿ, ದೇಶದ ಉದ್ದಗಲಕ್ಕೂ ಇದ್ದಾರೆ. ಇಂತಹವರ ಬಗ್ಗೆ ಜಾಗರೂಕರಾಗಿರಬೇಕು ಎಂದರು.

ಸ್ವಾತಂತ್ರ್ಯ ಪೂರ್ವದಿಂದ ಇಲ್ಲಿವರೆಗೆ ಜಾತಿ ಆಧಾರದಲ್ಲಿ ಕೆಲಸ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಬಹಳಷ್ಟು ಬದಲಾವಣೆಗಳು ಆಗಿವೆ ಆದರೆ, ಅದು ಸೀಮಿತ ಸ್ಥಳಗಳಲ್ಲಿ ಮಾತ್ರ. ಜಾತಿ ಸಂಕೋಲೆಯಿಂದ ಸಮುದಾಯವನ್ನು ಬಿಡುಗಡೆಗೊಳಿಸುವ ಕೆಲಸವನ್ನು ವಿದ್ಯಾವಂತ ನಾಗರಿಕರು ಮಾಡಬೇಕು ಎಂದು ತಿಳಿಸಿದರು.



ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ನೂತನ ಸದಸ್ಯರಾದ ಸಿ.ಶಂಕರ್ ಅಂಕನಶೆಟ್ಟಿಪುರ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ ಅವರನ್ನು ಗೌರವಿಸಲಾಯಿತು.

ಪೌರ ಕಾರ್ಮಿಕ ಕೆಲಸ ಯಾವುದೇ ಕೀಳು ಅಲ್ಲ. ಅದನ್ನು ವಂಶ ಪಾರಂಪರ್ಯ ಕೆಲಸವನ್ನಾಗಿ ಮಾಡಲು ಬಿಡಬೇಡಿ. ಅಂಬೇಡ್ಕರ್ ಅವರ ಆಶಯದಂತೆ ಮಕ್ಕಳಿಗೆ ಶಿಕ್ಷಣ ಕೊಡಿಸಿ, ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಕೆಲಸ ಪೋಷಕರು ಮಾಡಬೇಕು ಎಂದು ಸಲಹೆ ನೀಡಿದರು.

ಪ್ರಜಾಪ್ರಭುತ್ವದಲ್ಲಿ ಅನೇಕ ಕಾಯಕ ಸಮಾಜಗಳಿವೆ. ಆಗಿದ್ದರು ಸಫಾಯಿ ಕರ್ಮಚಾರಿಗಳು ಮಾತ್ರ ಎಲ್ಲದರಿಂದ, ಎಲ್ಲರಿಂದ ದೂರಾಗಿ ಬದುಕುತ್ತಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣ ಅವರು ಅನುಭವ ಮಂಟಪದಲ್ಲಿ ಎಲ್ಲರನ್ನೂ ಒಳಗೊಂಡ ಸಂಘಟನೆ ನಿರ್ಮಾಣ ಮಾಡಿದ್ದರು. ಇಂದಿನ ಪರಿಸ್ಥಿತಿ ಆಗಿಲ್ಲ. ನಮ್ಮ ಹಕ್ಕುಗಳಿಗಾಗಿ ನಾವೇ ಹೋರಾಡಬೇಕು ಎಂದು ಸಲಹೆ ನೀಡಿದರು.

ಬಸವಣ್ಣ ನಡೆಸಿದ ಕಲ್ಯಾಣ ಕ್ರಾಂತಿ ಇಂದಿನ ದಿನಮಾನಕ್ಕೆ ಬಹಳ ಅವಶ್ಯ ವಾಗಿದೆ. ಅಂತರ್ಜಾತಿ ಮದುವೆಯಾದಲ್ಲಿ ಜಾತೀಯತೆ ನಾಶವಾಗುತ್ತದೆ. ಎಲ್ಲರಲ್ಲೂ ಒಂದೇ ಎನ್ನುವ ಮನೋಭಾವ ಬೆಳೆಯುತ್ತದೆ. ಇದು ಆಗಬೇಕಾದಲ್ಲಿ ನಿಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ಸಮುದಾಯದ ಪ್ರಭಾವಿಗಳು ಅಧಿಕಾರಕ್ಕೆ ಬಂದ ಬಳಿಕ ಸಮುದಾಯಕ್ಕೆ ಏನಾದರೂ ಒಳಿತು ಮಾಡುವ ಕೆಲಸ ಮಾಡಬೇಕು. ಮೈಸೂರಿನ ರೈಲ್ವೆ ನಿಲ್ದಾಣ ಮುಂಭಾಗದಲ್ಲಿ ಜಗಜೀವನರಾಂ ಪ್ರತಿಮೆ ನಿರ್ಮಾಣ ಮಾಡುವಲ್ಲಿ ಶ್ರೀನಿವಾಸರ ಪಾತ್ರ ಬಹಳ ಮುಖ್ಯವಾಗಿತ್ತು ಎಂದು ನೆನೆದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಪೌರ ಕಾರ್ಮಿಕರ ಮಕ್ಕಳು, ತಂದೆ ಅಥವಾ ತಾಯಿಯ ಕೆಲಸವನ್ನೇ ಮುಂದುವರೆಸಿಕೊಂಡು ಹೋಗುವುದನ್ನು ಬಿಡಬೇಕು. ಶಿಕ್ಷಣ ಪಡೆದು ಸಮುದಾಯಕ್ಕೆ ಒಳಿತು ಮಾಡುವ ದಾರಿ ಕಂಡುಕೊಳ್ಳಬೇಕು. ಶಿಕ್ಷಣದಿಂದ ಮಾತ್ರವೇ ಸಾಮಾಜಿಕ ಬದಲಾವಣೆ ಸಾಧ್ಯ ಎಂದು ತಿಳಿಸಿದರು.

ಸಮುದಾಯದ ಪರ ಹೋರಾಟ ಮಾಡುವವರು ಆಸೆ ಆಮಿಷಗಳಿಗೆ ಬಲಿಯಾಗದೆ ಎಲ್ಲರ ಏಳಿಗೆಗೆ ದುಡಿಯುವವರಾಗಬೇಕು. ಅಂಬೇಡ್ಕರ್ ಅವರ ಶಿಕ್ಷಣ ಸಿದ್ಧಾಂತ ಹೊಸ ಪೀಳಿಗೆಯನ್ನು ಹುಟ್ಟು ಹಾಕುತ್ತವೆ. ಇಂತಹ ಶಿಕ್ಷಣ ನಿಮ್ಮ ಮಕ್ಕಳಿಗೆ ಸಿಗಬೇಕಾದಲ್ಲಿ ಸಂಘಟನೆ ಮತ್ತು ಹೋರಾಟ ಅತ್ಯಗತ್ಯ ಎಂದು ಪ್ರತಿಪಾದಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ನೂತನ ಸದಸ್ಯರಾದ ಸಿ.ಶಂಕರ್ ಅಂಕನಶೆಟ್ಟಿಪುರ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಫಾಯಿ ಕರ್ಮಚಾರಿ ಸಂಘದ ಜಿಲ್ಲಾಧ್ಯಕ್ಷ ಆರ್ಟಿಸ್ಟ್ ನಾಗರಾಜು, ಶಿವಣ್ಣ, ರವಿ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಮೈಸೂರು
ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ, ಹೆಚ್.ಡಿ.ಕೋಟೆ

ಪ್ರಕಟಣೆ

ಹೆಚ್.ಡಿ.ಕೋಟೆ ತಾಲ್ಲೂಕಿನ ಅಂತರಸಂತೆ ಹೋಬಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಕೃಷಿ ಯಂತ್ರಧಾರೆ ಕೇಂದ್ರದಲ್ಲಿರುವ (ಪ್ರಸ್ತುತ ಸದರಿ ಸಂಸ್ಥೆಯ ಕಳಸ್ತವಾಡಿ, ಮೈಸೂರು ಇಲ್ಲಿ ದಾಸ್ತಾನಿರುವ) ಅನುಪಯುಕ್ತ ಕೃಷಿ ಯಂತ್ರೋಪಕರಣಗಳನ್ನು ಇ-ಹರಾಜು ಮೂಲಕ ವಿಲೇವಾರಿ ಮಾಡುವ ಸಲುವಾಗಿ ಇ–ಹರಾಜು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **10.07.2026** ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳನ್ನು **E-Procurement** ಅಂತರ್ಜಾಲದ ಮೂಲಕವಾಗಲೀ, ಈ ಕಛೇರಿಯಿಂದಾಗಲೀ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in**ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಸಹಾಯಕ ಕೃಷಿ ನಿರ್ದೇಶಕರು

DIPR/DDMYS/376/KSMCA/253/2026-27

ಜಿಲ್ಲಾಧಿಕಾರಿಗಳು ನ್ಯಾಯಾಲಯ ಮೈಸೂರು ಜಿಲ್ಲೆ, ಮೈಸೂರು.
ಪ್ರಕರಣ ಸಂಖ್ಯೆ : **M.A.G/L.T.A-06/2026**

ವಾದಿ: ಕಾರ್ಯನಿರ್ವಾಹಕರು ಅಭಿಯಂತರು ಎಲೆಕ್ಟ್ರಿಕಲ್ ಕೆ.ಪಿ.ಟಿ.ಸಿ.ಎಲ್.ಮೇಜರ್ ವರ್ಕ್ಸ್ ವಿಭಾಗ ಮೈಸೂರು ಎಫ್.ಟಿ.ಎಸ್. ಕಪೌಂಡ್, ಎನ್.ಆರ್.ಮೊಹಲ್ಲಾ, ಮೈಸೂರು

ವಿರುದ್ಧ

ಪ್ರತಿವಾದಿಗಳು: ಶ್ರೀಮತಿ ಗಿರಿಯಮ್ಮ ಕೋಂ ಲೇಟ್ ಮರಿಲಿಂಗೇಗೌಡ ಮತ್ತು ಮಕ್ಕಳು ಶ್ರೀಮತಿ ಸೌಮ್ಯ ಗೌಡ, ಶ್ರೀಮತಿ ಮಹದೇವಮ್ಮ, ಶ್ರೀಮತಿ ಪುಟ್ಟಲಿಂಗಮ್ಮ ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ವಸಂತ, ಶ್ರೀಮತಿ ಜಯಮ್ಮ, ಶ್ರೀ ಸ್ವಾಮೀಗೌಡ ಗ್ರಾಮ, ಆಂಜನಯ ದೇವಸ್ಥಾನ ರಸ್ತೆ, ಬಿ.ಕೆ. ಕಾವಲ್ ರಸ್ತೆ, ಹನಗೂಡು, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ–571106


ಸಾರ್ವಜನಿಕ ಪ್ರಕಟಣೆ
ನ್ಯಾಯಾಲಯ ಸಮನ್ಸ್ ಪತ್ರಿಕಾ ಪ್ರಕಟಣೆ ಮೂಲಕ

ವಿಷಯ:– ಮೇಲ್ಕಂಡ ನ್ಯಾಯಾಲಯದಲ್ಲಿ ವಾದಿಯ ಪ್ರತಿವಾದಿಗಳು ವಿರುದ್ಧ ಉಪಬಂಧ ಭಾರತೀಯ ಟೆಲಿಗ್ರಾಂ ಕಾಯ್ದೆ 1885 ರ ಕಲಂ 10 ರಿಂದ 16 ರಡಿಯಲ್ಲಿ ಮತ್ತು ಭಾರತೀಯ ಎಲೆಕ್ರಿಸಿಟಿ ಕಾಯ್ದೆ 2003 ಕಲಂ 164 ಅಡಿಯಲ್ಲಿ ಪ್ರತಿವಾದಿಗಳ ವಿರುದ್ಧ ಅರ್ಜಿ ದಾಖಲಿಸಿರುತ್ತಾರೆ. ಪ್ರತಿವಾದಿಗಳ ವಾಸ ಸ್ಥಳ ಗೌಡಿಕೇರೆ ಹನಗೂಡು ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ–571106 ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹನಗೂಡು ಹೋಬಳಿ, ಗೌಡಿಕೇರೆ ಗ್ರಾಮದ ಸರ್ವೆ ನಂ.47/2 ಒಟ್ಟು ವಿಸ್ತೀರ್ಣದಲ್ಲಿ 3 ಎಕರೆ 0–07 ಗುಂಟೆ ಜಮೀನಲ್ಲಿ ವಿದ್ಯುತ್ ಸರಬರಾಜು ಮಾಡಲು ಗೋಪುರ ನಿರ್ಮಾಣದ ಯೋಜನೆ ಸಂಬಂಧಪಟ್ಟಂತೆ 1 ರಿಂದ 6 ಮತ್ತು 8 ಮತ್ತು 9ನೇ ಎದುರುದಾರರು ಪ್ರತಿಭಂದಕಾಜ್ಞೆ ಕೋರಿ ಅರ್ಜಿ ದಾಖಲಿಸಿದ್ದು, ಈ ಸಂಬಂಧ ನ್ಯಾಯಾಲಯದ ನೋಟೀಸ್‌ನ್ನು ಜಾರಿಗೊಳ್ಳಿಸುವುದನ್ನು ನಿರಾಕರಿಸುತ್ತಿದ್ದು ಉದ್ದೇಶಪೂರ್ವಕವಾಗಿ ನೋಟಿಸ್ ಅನ್ನು ಮೇಲ್ಕಂಡ ಎದುರುದಾರರುಗಳಿಗೆ ಈ ಮೂಲಕ ನೋಟೀಸ್ ಜಾರಿಗೊಳಿಸಲು ಆದೇಶಿಸಿದ್ದು, ಪ್ರತಿವಾದಿಯು ಇದನ್ನು ನೋಟೀಸ್ ಎಂದು ಪರಿಗಣಿಸಿ ನ್ಯಾಯಾಲಯಕ್ಕೆ ಹಾಜರಾಗಲು ಹಾಗೂ ತರಕಾರರು ಇದ್ದು ಪಕ್ಷದಲ್ಲಿ ಸಲ್ಲಿಸಲು ತಿಳಿಸಲಾಗಿದೆ.

ಮೇಲ್ಕಂಡ ನ್ಯಾಯಾಲಯಕ್ಕೆ ದಿನಾಂಕ: 07–07–2026 000 ಮಧ್ಯಾಹ್ನ 03 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಘನ ನ್ಯಾಯಾಲಯವು ಲಭ್ಯ ದಾಖಲೆಗಳ ಆಧಾರದ ಮೇಲೆ ತೀರ್ಮಾನಿಸುತ್ತದೆ.

ಮೇಲ್ಮನವಿದ್ದಾರರ ಪರ ವಕೀಲರು
ಸಹಿ/– ಆರ್. ಜಗದೀಶ್ ಕುಮಾರ್
ವಕೀಲರು. #355, ಗುರುಕಾರ್ ದೇವಣ್ಣ ರಸ್ತೆ, ಅಗ್ರಹಾರ ಫೋರ್ಟ್ ಮೊಹಲ್ಲಾ, ಮೈಸೂರು–04.
Mob:9481953440
ಸ್ಥಳ:ಮೈಸೂರು. ದಿನಾಂಕ: 23–06–2026

ಪೀಠಾಧಿಕಾರಿಗಳು
ಜಿಲ್ಲಾಧಿಕಾರಿಗಳ ನ್ಯಾಯಾಲಯ
ಮೈಸೂರು
ಮೈಸೂರು ಜಿಲ್ಲೆ ಮೈಸೂರು ರವರ
ಆದೇಶದ ಮೇರೆಗೆ



ಮೊಹರಂ ಪ್ರಯುಕ್ತ ಮುಸ್ಲಿಮರು ತೇರು ಎಳೆಯುವಾಗ ಹೈಟೆನ್ಷನ್ ವೈರ್ ತಗುಲಿ 3 ಸಾವು, 10 ಮಂದಿಗೆ ಸುಟ್ಟ ಗಾಯ!

ಮಧ್ಯಪ್ರದೇಶ, ಜೂ.26– ಮಧ್ಯ ಪ್ರದೇಶದ ರತ್ಲಂ ಜಿಲ್ಲೆಯಲ್ಲಿ ಮೊಹರಂ ಮೆರವಣಿಗೆಯ ಸಮಯದಲ್ಲಿ ಒಂದು ದೊಡ್ಡ ಅಪಘಾತ ಸಂಭವಿಸಿದೆ. ಪಿಪ್ಲೋಡಾ ಪೊಲೀಸ್ ಠಾಣೆ ವ್ಯಾಪ್ತಿಯ ಹತ್ನಾರಾ ಗ್ರಾಮದಲ್ಲಿ ತಾಜಿಯಾ ಮೆರವಣಿಗೆಯ ಮೇಲ್ಭಾಗವು ಹೈಟೆನ್ಷನ್ ವಿದ್ಯುತ್ ತಂತಿಗೆ ತಗುಲಿ ಮೂವರು ಸಾವನ್ನಪ್ಪಿದ್ದು 10 ಜನರು ಗಂಭೀರವಾಗಿ ಸುಟ್ಟುಹೋಗಿದ್ದಾರೆ.

ಮೊಹರಂ ಮೆರವಣಿಗೆಯನ್ನು ಮೇವಾಟಿ ನೆರೋಲಿಯ ಮೂಲಕ ಸಾಗಿಸಲಾಗುತ್ತಿತ್ತು. ಪ್ರತ್ಯಕ್ಷದರ್ಶಿಗಳ ಪ್ರಕಾರ, ತಾಜಿಯಾ ಮರವಣಿಗೆ ಹೈಟೆನ್ಷನ್ ಲೈನ್‌ಗೆ ಡಿಕ್ಕಿ ಹೊಡೆದ ತಕ್ಷಣ, ಪ್ರಬಲವಾದ ಪ್ರವಾಹವು ಅದರ ಮೂಲಕ ಹಾದು ಹೋಯಿತು. ತಾಜಿಯಾವನ್ನು ಹೊತ್ತೊಯ್ಯುತ್ತಿದ್ದ ಜನರು ಸ್ಥಳದಲ್ಲೇ ಕುಸಿದು ಬಿದ್ದರು. ಸ್ಥಳೀಯರು ತಕ್ಷಣ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿದರು.

ಅಪಘಾತದಲ್ಲಿ ಮೂವರು ಸಾವನ್ನಪ್ಪಿದ್ದಾರೆ ಎಂದು ರತ್ಲಂ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಕುಮಾರ್ ತಿಳಿಸಿದ್ದಾರೆ. ಹತ್ತು ಮಂದಿ ಗಾಯಾಳುಗಳನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಆಸ್ಪತ್ರೆಗೆ ಕರೆತರಲಾದ ಮೂವರು ಸಾವನ್ನಪ್ಪಿದ್ದಾರೆ ಇತರ ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ರತ್ಲಂ ವೈದ್ಯಕೀಯ ಕಾಲೇಜಿನ ಡಾ. ರವೀಂದ್ರ ಸೋಲಂಕಿ ಹೇಳಿದ್ದಾರೆ. ಅವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ.

ಖಾಸಗಿ ವಿಡಿಯೋ, ಚಿತ್ರ ಪ್ರಸಾರ; ಎಫ್‌ಐಆರ್ ಕಡ್ಡಾಯ

ಗೃಹ ಇಲಾಖೆ ಪ್ರಕಟಣೆ

ಬೆಂಗಳೂರು: ಯಾವುದೇ ವ್ಯಕ್ತಿಯ ಅನುಮತಿಯಿಲ್ಲದೆ ಖಾಸಗಿ ಅಥವಾ ಆಪ್ತ ಚಿತ್ರಗಳು ಮತ್ತು ವಿಡಿಯೋಗಳನ್ನು ಪ್ರಕಟಿಸುವ ಅಥವಾ ಪ್ರಸಾರ ಮಾಡುವ ಪ್ರಕರಣಗಳನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಇಂತಹ ಸೈಬರ್ ಅಪರಾಧಗಳು, ಬ್ಲಾಕ್‌ಮೇಲ್ ಮತ್ತು ರಿವೆಂಜ್ ಪೋರ್ನೋಗ್ರಫಿ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮತ್ತು ತಕ್ಷಣವೇ ಕಡ್ಡಾಯವಾಗಿ ಎಫ್‌ಐಆರ್ ದಾಖಲಿಸಲು ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಪೊಲೀಸ್ ಇಲಾಖೆಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಇದರ ಬೆನ್ನಲ್ಲೇ, ಕರ್ನಾಟಕ ರಾಜ್ಯ ಪೊಲೀಸ್ ಮಹಾನಿರ್ದೇಶಕರು, ರಾಜ್ಯದಾದ್ಯಂತ ಏಕರೂಪದ ಅನುಷ್ಠಾನಕ್ಕಾಗಿ ಸ್ಥಾಯಿ ಆದೇಶ 1061ರ ಅಡಿಯಲ್ಲಿ ಕಟ್ಟುನಿಟ್ಟಾದ ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

ಒಪ್ಪಿಗೆಯ ಕುರಿತು ಕಾನೂನು ಸ್ಪಷ್ಟನೆ: ಯಾವುದೇ ಚಿತ್ರೀಕರಣದ ಒಪ್ಪಿಗೆ ಎಂದರೆ ಪ್ರಸಾರಕ್ಕೆ ನೀಡಿದ ಒಪ್ಪಿಗೆಯಲ್ಲ: ಸಂತ್ರಸ್ತರು ಆರಂಭದಲ್ಲಿ ಚಿತ್ರ ಅಥವಾ ವಿಡಿಯೋ ಸೆರೆಹಿಡಿಯಲು ಒಪ್ಪಿಗೆ ನೀಡಿದ್ದರೂ ಸಹ, ಅದನ್ನು ಇತರರಿಗೆ ಹಂಚಲು ಅಥವಾ ಪ್ರಸಾರ ಮಾಡಲು ಒಪ್ಪಿಗೆ ಇರದೇ ಇದ್ದ ಪಕ್ಷದಲ್ಲಿ ಅದನ್ನು ಪ್ರಚಾರಪಡಿಸುವುದು ಗಂಭೀರ ಅಪರಾಧವಾಗುತ್ತದೆ.

ಭಾರತೀಯ ನ್ಯಾಯ ಸಂಹಿತೆ2023ರ ಸೆಕ್ಷನ್ 77ರ ವಿವರಣೆ 2ರ ಪ್ರಕಾರ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಅಡಿಯಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ.

ಜೀರೋ ಎಫ್‌ಐಆರ್: ಬ್ಲಾಕ್‌ಮೇಲ್ ವಿಡಿಯೋಗಳು, ಸೆಕ್ಸ್ಟೋರ್ಷನ್ ಮತ್ತು ರಿವೆಂಜ್ ಪೋರ್ನೋಗ್ರಫಿ ಪ್ರಕರಣಗಳಿಗೆ ಸಂಬಂಧಿಸಿದಂತೆ ದೂರು ಬಂದ ತಕ್ಷಣ ಪೊಲೀಸರು ಯಾವುದೇ ವಿಳಂಬವಿಲ್ಲದೆ ಕಡ್ಡಾಯವಾಗಿ ಎಫ್‌ಐಆರ್ ದಾಖಲಿಸಬೇಕು.

ಪೂರ್ವಾನುಮತಿಯ ನೆಪವಿಲ್ಲ: ಸಂತ್ರಸ್ತರು ಮೊದಲು ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣ ಒಡ್ಡಿ ದೂರು ದಾಖಲಿಸಿಕೊಳ್ಳಲು ನಿರಾಕರಿಸುವಂತಿಲ್ಲ ಅಥವಾ ತಡ ಮಾಡುವಂತಿಲ್ಲ.

ಜೀರೋ ಎಫ್‌ಐಆರ್: ಅಪರಾಧವು ಸ್ಥಳೀಯ ಠಾಣಾ ವ್ಯಾಪ್ತಿಯ ಹೊರಗೆ ನಡೆದಿದ್ದರೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಪ್ರಕಾರ ತಕ್ಷಣವೇ ಜೀರೊ ಎಫ್‌ಐಆರ್ ದಾಖಲಿಸಿ, ಬಳಿಕ ಸಂಬಂಧಿತ ಠಾಣೆಗೆ ವರ್ಗಾಯಿಸಬೇಕು.



ಶಿಕ್ಷೆಯ ಪ್ರಮಾಣ: ದೂರಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸದಿದ್ದರೂ, ಪ್ರಕರಣದ ವಾಸ್ತವಾಂಶಗಳ ಆಧಾರದ ಮೇಲೆ ಕಠಿಣ ಸೆಕ್ಷನ್‌ಗಳನ್ನು ಎಫ್‌ಐಆರ್‌ನಲ್ಲಿ ಕಡ್ಡಾಯವಾಗಿ ಸೇರಿಸಲು ಸೂಚಿಸಲಾಗಿದೆ.

ಭಾರತೀಯ ನ್ಯಾಯ ಸಂಹಿತೆ 2023ರ ಸೆಕ್ಷನ್ 77: ಮಹಿಳೆಯರ ಖಾಸಗಿ ಕ್ಷಣಗಳನ್ನು ಇಣುಕುವುದು, ಚಿತ್ರೀಕರಿಸುವುದು ಅಥವಾ ಪ್ರಸಾರ ಮಾಡುವುದು ಅಪರಾಧ. ಮೊದಲ ಅಪರಾಧಕ್ಕೆ 1 ರಿಂದ 3 ವರ್ಷ ಹಾಗೂ ಪುನರಾವರ್ತಿತ ಅಪರಾಧಕ್ಕೆ 3 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುವುದು.

ಐಟಿ ಕಾಯ್ದೆ, 2000ರ ಸೆಕ್ಷನ್ 66(ಇ) (ಗೌಪ್ಯತೆ ಉಲ್ಲಂಘನೆ): ಅನುಮತಿಯಿಲ್ಲದೆ ವ್ಯಕ್ತಿಯ ಖಾಸಗಿ ಅಂಗಗಳ ಚಿತ್ರ ಸೆರೆಹಿಡಿಯುವುದು ಅಥವಾ ಪ್ರಸಾರ ಮಾಡುವುದಕ್ಕೆ ಗರಿಷ್ಠ 3 ವರ್ಷಗಳ ಜೈಲು ಶಿಕ್ಷೆ ಅಥವಾ 2 ಲಕ್ಷದವರೆಗೆ ದಂಡ ವಿಧಿಸಲಾಗುವುದು.

ಐಟಿ ಕಾಯ್ದೆಯ ಸೆಕ್ಷನ್ 67 ಮತ್ತು 67(ಎ) (ಅಶ್ಲೀಲ ಮತ್ತು ಲೈಂಗಿಕ ವಿಷಯಗಳ ಪ್ರಸಾರ): ಎಲೆಕ್ಟ್ರಾನಿಕ್ ರೂಪದಲ್ಲಿ ಇಂತಹ ವಿಷಯಗಳನ್ನು ಹರಡಿದರೆ 3 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ 5 ಲಕ್ಷದಿಂದ 10 ಲಕ್ಷದವರೆಗೆ ಭಾರಿ ದಂಡ ವಿಧಿಸಲು ಅವಕಾಶವಿದೆ.

ಕಂಟೆಂಟ್ ತೆಗೆದುಹಾಕುವುದು ಮತ್ತು ಸಾಕ್ಷ್ಯ ಸಂರಕ್ಷಣೆ : ಐಟಿ ನಿಯಮಗಳು 2021ರ ಅನ್ವಯ ಸಾಮಾಜಿಕ ಜಾಲ ತಾಣಗಳು ಅಥವಾ ಸಂಬಂಧಿತ ಸಂಸ್ಥೆಗಳಿಗೆ ತಕ್ಷಣವೇ ನೋಟಿಸ್ ನೀಡಿ, ಆನ್‌ಲೈನ್‌ನಲ್ಲಿರುವ ಅಪರಾಧಕರ ಕಂಟೆಂಟ್ ಅನ್ವಯ ತ್ವರಿತವಾಗಿ ತೆಗೆದುಹಾಕಲು/ತಡೆಹಿಡಿಯಲು ಕ್ರಮ ಕೈಗೊಳ್ಳಲಾಗುವುದು. ಡಿಜಿಟಲ್ ಸಾಕ್ಷ್ಯಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸಲಾಗುವುದು.

ಸಂತ್ರಸ್ತರ ರಕ್ಷಣೆ ಮತ್ತು ಗೌಪ್ಯತೆ : ಸಂತ್ರಸ್ತರ ಗುರುತನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ದೂರುದಾರರನ್ನು ಅತ್ಯಂತ ಸೂಕ್ಷ್ಮವಾಗಿ ನಡೆಸಿಕೊಳ್ಳಬೇಕು ಮತ್ತು ಸಾಧ್ಯವಾದಷ್ಟು ಮಹಿಳಾ ಸಂತ್ರಸ್ತರ ದೂರನ್ನು ಮಹಿಳಾ ಅಧಿಕಾರಿಯಿಂದಲೇ ದಾಖಲಿಸಬೇಕು. ತಾಂತ್ರಿಕ ತನಿಖೆಗಾಗಿ ಸಿಐಡಿ ಸೈಬರ್ ವಿಭಾಗದೊಂದಿಗೆ ಸಮನ್ವಯ ಸಾಧಿಸಬೇಕು.

ಗೃಹ ಸಚಿವರ ಎಚ್ಚರಿಕೆ : ಸಂತ್ರಸ್ತರ ಖಾಸಗಿತನದ ಹಕ್ಕು ಭಾರತದ ಸಂವಿಧಾನದ ವಿಧಿ 21ರ ಅಡಿಯಲ್ಲಿ ಮೂಲಭೂತ ಹಕ್ಕಾಗಿದೆ. ಇಂತಹ ಸೂಕ್ಷ್ಮ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲು ನಿರಾಕರಿಸುವುದು ಅಥವಾ ಪೂರ್ವ ಒಪ್ಪಿಗೆ ಎಂಬ ತಪ್ಪು ಕಾರಣ ನೀಡಿ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಗಂಭೀರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಈ ನಿರ್ದೇಶನಗಳನ್ನು ರಾಜ್ಯದ ಪ್ರತಿಯೊಂದು ಪೊಲೀಸ್ ಠಾಣೆಯೂ ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಪೊಲೀಸ್ ಆಯುಕ್ತರು, ವಲಯ ಐಜಿಪಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸಚಿವರು ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ.

ಫಾರ್ಮ್‌ಹೌಸ್ ಗೇಟ್ ಬಳಿ ನಾಡಬಾಂಬ್ ಸ್ಫೋಟ; ವಕೀಲನ ಸ್ಥಿತಿ ಗಂಭೀರ

ರಾಮನಗರ, ಜೂ.26– ಬೆಂಗಳೂರು ದಕ್ಷಿಣ ಜಿಲ್ಲೆ ಹಾರೋಹಳ್ಳಿ ತಾಲೂಕಿನ ಗ್ರಾಮದಲ್ಲಿ ನಾಡಬಾಂಬ್ ಸ್ಫೋಟಗೊಂಡ ಹಿನ್ನೆಲೆಯಲ್ಲಿ ವಕೀಲರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಫಾರ್ಮ್ ಹೌಸ್ ಮುಂಭಾಗದ ಗೇಟ್ ಬಳಿ ದುಷ್ಕರ್ಮಿಗಳು ನಾಡಬಾಂಬ್ ಇಟ್ಟಿದ್ದರು ಎನ್ನಲಾಗುತ್ತಿದೆ. ಸುಣ್ಣ ಘಟ್ಟ ಗ್ರಾಮದಲ್ಲಿರೋ ಫಾರ್ಮ್ ಹೌಸ್‌ನಲ್ಲಿ ಗೇಟ್ ಓಪನ್ ಮಾಡುತ್ತಿದ್ದಂತೆ ನಾಡಬಾಂಬ್ ಸ್ಫೋಟಗೊಂಡಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿ ತಾಲೂಕಿನ ಸುಣ್ಣಘಟ್ಟ ಗ್ರಾಮದ ಜಮೀನಿನಲ್ಲಿ ಈ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ವಕೀಲ ಎನ್.ಸಿ.ಮೋಹನ್ ಎಂಬುವವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸುಣ್ಣಘಟ್ಟ ಗ್ರಾಮದ ಜಮೀನಿನಲ್ಲಿ ಮೋಹನ್ ಫಾರ್ಮ್ ಹೌಸ್ ಕಟ್ಟಿಕೊಂಡಿದ್ದಾರೆ. ಇಂದು ಬೆಳಗ್ಗೆ ಕೂಡ ತೋಟಕ್ಕೆ ಬಂದಿದ್ದು, ಮನೆಯ ಮುಂಭಾಗದ ಗೇಟ್ ಓಪನ್ ಮಾಡುತ್ತಿದ್ದಂತೆ ನಾಡಬಾಂಬ್ ಸ್ಫೋಟಗೊಂಡಿದೆ. ಗಾಯಾಳು ಮೋಹನ್ ಅವರನ್ನ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕೋಡಿಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಭಾರತದಲ್ಲಿ ರಾಮ ರಾಜ್ಯದ ಕನಸು ಸಾಕಾರಗೊಳ್ಳಬೇಕು

ಮೈಸೂರು, ಜೂ.26– ಭಾರತ ದೇಶದಲ್ಲಿ ಗಾಂಧೀಜಿ ಕಂಡ ರಾಮ ರಾಜ್ಯದ ಕನಸು ಸಾಕಾರಗೊಳ್ಳಬೇಕು ಎಂದು ಡಾ. ಲೋಲಾಕ್ಷಿ ಅಭಿಪ್ರಾಯಪಟ್ಟರು.

ಮೈಸೂರಿನ ರೋಟರಿ ಭವನದಲ್ಲಿ ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ತು ಉದ್ಘಾಟನೆ ಮತ್ತು ವಾಲ್ಮೀಕಿ ಜನಾಂಗ ಸಾಂಸ್ಕೃತಿಕ ಪ್ರಜ್ಞೆ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಮಿಳುನಾಡಿನ ಹೊಸ ಸರ್ಕಾರವನ್ನು ನೋಡಿದರೆ ಒಂದು ಹೆಣ್ಣು ಮಗುವಿಗೆ ಆದಂತಹ ಅನ್ಯಾಯ, ಅದಕ್ಕೆ ಅನೇಕರ ತಲೆದಂಡ ಆದದ್ದು ಮಹಿಳೆಯ ಭದ್ರತೆಗೆ ನ್ಯಾಯ ಸಿಕ್ಕಿದಂತೆ. ದೇಶದ ಬೇರೆ ಬೇರೆ ಕಡೆಯೂ ಮಹಿಳೆಯರ ಸ್ವಾತಂತ್ರ್ಯಕ್ಕೆ ರಕ್ಷಣೆ ಬೇಕು. ವಾಲ್ಮೀಕಿ ಸಮುದಾಯ ಸಾಂಸ್ಕೃತಿಕ ಪ್ರಜ್ಞೆಯು ಒಳಗಡೆಗೆ ಸೇರಬೇಕಾಗಿದೆ. ಕೇವಲ ಇದೊಂದು ಸಮುದಾಯಕ್ಕೆ ಮಾತ್ರವಲ್ಲ, ಇಡೀ ಭಾರತದ ಎಲ್ಲಾ ಜನರ ಸಾಂಸ್ಕೃತಿಕ ಪ್ರಜ್ಞೆ ಕಾಡು ನಾಡು ಬೆಸೆಯುವ ಕಾವ್ಯ ವಾಲ್ಮೀಕಿಯವರು. ವಾಲ್ಮೀಕಿ ಗುಹ, ಶಬರಿ, ಬೇಡರ ಕಣ್ಣಪ್ಪ ಏಕಲವ್ಯ, ಕಾಡಿನ ಸಾಂಸ್ಕೃತಿಕ ಪ್ರಜ್ಞೆ ಈ ಕೃತಿಯಲ್ಲಿ ಅಡಗಿದೆ.

ವಾಲ್ಮೀಕಿ ರಾಮಾಯಣ ಮತ್ತು ಜನಪದ ರಾಮಾಯಣ ತಳ ಸಮುದಾಯದ ಸಾಕ್ಷಿ ಪ್ರಜ್ಞೆ, ನಿಸರ್ಗದ ಜೊತೆ ಸದಾ ಅನುಸಂಧಾನದ ಮೂಲಕ ವಾಲ್ಮೀಕಿ ತಮ್ಮ ಅನುಭವದ ಮೂಲಕ ಗ್ರಹಿಸಿಕೊಂಡಿದ್ದಾರೆ. ವಾಲ್ಮೀಕಿ ಬೆವರಿನ ರೂಪಕ ಎಂದು ಪ್ರಶಾಂತ್ ನಾಯಕರು ಹೊಸ ಆಲೋಚನಾ ಕ್ರಮದಲ್ಲಿ ಕಟ್ಟಿ ಕೊಟ್ಟಿದ್ದಾರೆ ಎಂದರು.



ಮೈಸೂರಿನ ರೋಟರಿ ಭವನದಲ್ಲಿ ಮಹರ್ಷಿ ವಾಲ್ಮೀಕಿ ಸಾಹಿತ್ಯ ಪರಿಷತ್ತು ಉದ್ಘಾಟನೆ ಮತ್ತು ವಾಲ್ಮೀಕಿ ಜನಾಂಗ ಸಾಂಸ್ಕೃತಿಕ ಪ್ರಜ್ಞೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮಾತನಾಡಿ, ಎಲ್ಲಾ ಸಾಹಿತ್ಯದ ಆದಿ ಮಾರ್ಗಕಾರ ವಾಲ್ಮೀಕಿ. ಪ್ರಜ್ಞೆ ಇಲ್ಲದವರು ಏನನ್ನು ಮಾಡಲಾರರು ಪ್ರತಿಭೆ ಇರುತ್ತದೆ ಆದರೆ ಪ್ರಜ್ಞೆ ಇರುವುದಿಲ್ಲ. ಪ್ರತಿಭೆಯ ಬುನಾದಿಯ ಮೇಲೆ ಪ್ರಜ್ಞೆ ಕಟ್ಟಬೇಕು. ರಾಮಾಯಣ ಬೇಕು, ರಾಮನೂ ಬೇಕು. ಆದರೆ ವಾಲ್ಮೀಕಿ ಬೇಡ ಎಂದರೆ ಹೇಗೆ. ವ್ಯಾಸ, ಕೃಷ್ಣ, ಕಾಳಿದಾಸ ಇಂಥವರನ್ನು ಸಹಿಸಿಕೊಳ್ಳಲು ಮನಸ್ಸು ಬೇಕು. ಸಂಸ್ಕೃತ ಸಾಮಾನ್ಯ ಭಾಷೆಯಾಗಿತ್ತು. ಅದಕ್ಕೆ ಮಡಿವಂತಿಕೆ ಚೌಕಟ್ಟನ್ನು ಕಟ್ಟಿ ಅಳಿವಿನಂಚಿಗೆ ತಂದರು. ಜಗತ್ತಿನಲ್ಲಿ ಇರದ ಜ್ಞಾನ ಸಂಸ್ಕೃತ ಭಾಷೆಯಲ್ಲಿದೆ ಬ್ರಿಟಿಷರು ನಮ್ಮ ಸಂಸ್ಕೃತ ಜ್ಞಾನವನ್ನು ತೆಗೆದುಕೊಂಡು ಜಗತ್ತಿನಲ್ಲಿ ಕೀರ್ತಿ ಪಡೆದುಕೊಂಡರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಾಲ್ಮೀಕಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಂಜುಂಡಸ್ವಾಮಿ ಹರದನಹಳ್ಳಿ ವಹಿಸಿದರು.

ಕಾರ್ಯಕ್ರಮದಲ್ಲಿ ಪ್ರಶಾಂತ ನಾಯಕ್, ಕನ್ನಡ ಕಲಾ ಕೂಟದ ಅಧ್ಯಕ್ಷ ಚಂದ್ರಶೇಖರ್, ಚಾಮುಂಡಿ ಬೆಟ್ಟದ ಶ್ರೀಧರ್, ಸರ್ವೇಶ್ ಕನ್ನಂಬಾಡಿ ಕುಮಾರ್, ಉದ್ಯಮಿ ನಿಂಗರಾಜು, ವಕೀಲ ಲೋಕೇಶ್, ದೇವರಾಜ್ ಪಾಳೇಗಾರ್ ಡಾ.ಅನುಸೂಯ ಕೆಂಪನಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಆಪರೇಷನ್ ಸಿಂಧೂರ್ ವೇಳೆ ಹುತಾತ್ಮರಾದ ಯೋಧರ ಹೆಸರು ಪ್ರಕಟ

ನವದೆಹಲಿ: ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರ ಭಾಗದಲ್ಲಿ ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿ ಕಳೆದ ವರ್ಷ ನಡೆಸಿದ ಆಪರೇಷನ್ ಸಿಂಧೂರ್ ಸೇನಾ ಕಾರ್ಯಾಚರಣೆ ವೇಳೆ ಹುತಾತ್ಮರಾದ ಆರು ಯೋಧರ ಹೆಸರುಗಳನ್ನು ಕೇಂದ್ರ ಸರ್ಕಾರ ಇದೇ ಮೊದಲ ಬಾರಿಗೆ ಪ್ರಕಟಿಸಿದೆ.

ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಹುತಾತ್ಮರ ಹೆಸರುಗಳನ್ನು ಕೆತ್ತಲಾಗಿದ್ದು, ಸ್ಮಾರಕಕ್ಕೆ ಸಂಬಂಧಿಸಿದ ವೆಬ್‌ಸೈಟ್‌ನಲ್ಲಿಯೂ ಪಟ್ಟಿ ಬಿಡುಗಡೆ ಮಾಡಲಾಗಿದೆ. ಇದರೊಂದಿಗೆ, ಸಿಂಧೂರ ಕಾರ್ಯಾಚರಣೆ ವೇಳೆ ಭಾರತೀಯ ಪಾಳೆಯದಲ್ಲಿಯೂ ಸಾವು–ನೋವು ಆಗಿರುವುದಕ್ಕೆ ಸಂಬಂಧಿಸಿದಂತೆ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ಮಾಹಿತಿ ಹಂಚಿಕೊಂಡಂತಾಗಿದೆ.

ಸೇನೆಯ ವಿವಿಧ ಪಡೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸುಬೇದಾರ್ ಮೇಜರ್ ಪವನ್ ಕುಮಾರ್, ರೈಫಲ್‌ಮನ್ ಸುನಿಲ್ ಕುಮಾರ್, ಲ್ಯಾನ್ಸ್ ನಾಯಕ್ ದಿನೇಶ್ ಕುಮಾರ್, ವಾಯುಸೇನೆ ತಂತ್ರಜ್ಞ ಎಂ. ಮುರಳಿನಾಯಕ್, ಹವಿಲ್ದಾರ್ ಸುನಿಲ್ ಕುಮಾರ್ ಸಿಂಗ್, ಸರ್ಜಂಟ್ ಸುರೇಂದ್ರ ಕುಮಾರ್ ಅವರು ಆಪರೇಷನ್ ಸಿಂಧೂರ ವೇಳೆ ಹುತಾತ್ಮರಾಗಿದ್ದಾರೆ ಎಂದು ತಿಳಿಸಲಾಗಿದೆ.

ರಾಷ್ಟ್ರ ಸೇವೆಯಲ್ಲಿ ತೊಡಗಿದ್ದಾಗಲೇ ಹುತಾತ್ಮರಾದ ವೀರರನ್ನು ಸ್ಮರಿಸುವ ಸಲುವಾಗಿ ಸ್ಮಾರಕ 3ಡಿ ಗೋಡೆಯಲ್ಲಿ ಹೆಸರುಗಳನ್ನು ಕೆತ್ತಲಾಗಿದೆ.

ಭಾರತ–ಪಾಕಿಸ್ತಾನ ಪಡೆಗಳು ನಡೆಸಿದ ಸಂಘರ್ಷದ ವೇಳೆ ಎರಡೂ ಕಡೆ ಸಾಕಷ್ಟು ಹಾನಿಯಾಗಿದೆ ಎಂಬ ಬಗ್ಗೆ ಸಾಕಷ್ಟು ವದಂತಿ, ವರದಿಗಳು ಹರಿದಾಡಿದ್ದರೂ, ಸರ್ಕಾರ ಇದುವರೆಗೆ ಅಧಿಕೃತವಾಗಿ ಯಾವುದೇ ಮಾಹಿತಿ ಬಿಡುಗಡೆ ಮಾಡಿರಲಿಲ್ಲ.

ರಾಷ್ಟ್ರ ರಾಜಧಾನಿಯ ಇಂಡಿಯಾ ಗೇಟ್‌ನಲ್ಲಿ 2019ರಲ್ಲಿ ಉದ್ಘಾಟನೆಗೊಂಡಿರುವ ಯುದ್ಧ ಸ್ಮಾರಕದಲ್ಲಿ, ಸ್ವಾತಂತ್ರ್ಯಾನಂತರ ನಡೆದ ಸೇನಾ ಕಾರ್ಯಾಚರಣೆಗಳು, ಸಂಘರ್ಷಗಳಲ್ಲಿ ಹುತಾತ್ಮರಾದ ಯೋಧರಿಗೆ ಸ್ಮರಿಸಲಾಗುತ್ತದೆ.

ಬೆಂಗಳೂರು ತ್ರಿವಳಿ ಕೊಲೆ ಪ್ರಕರಣ: ಕೊನೆಗೂ ಸಿಕ್ಕಿಬಿದ್ದ ಶ್ವೇತಾಳ ಪ್ರಿಯಕರ ಕೆನತ್



ಬೆಂಗಳೂರು, ಜೂ.26– ಬೆಂಗಳೂರಿನ ಕೆ.ಆರ್.ಪುರಂನಲ್ಲಿ ನಡೆದ ತ್ರಿವಳಿ ಕೊಲೆ ಪ್ರಕರಣದ ಪ್ರಮುಖ ಆರೋಪಿ, ಶ್ವೇತಾಳ ಪ್ರಿಯಕರ ಕೆನತ್‌ನನ್ನು ವೈಟ್‌ಫೀಲ್ಡ್ ಉಪವಿಭಾಗದ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ನಾಲ್ಕು ದಿನಗಳ ತೀವ್ರ ಹುಡುಕಾಟದ ನಂತರ ಕೆನತ್ ಕೊನೆಗೂ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಶ್ವೇತಾಳನ್ನು ಬಂಧಿಸಿದ್ದ ಪುದುಚೇರಿಯಲ್ಲೇ ಈತನನ್ನೂ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.


ಹೋಟೆಲ್‌ನಲ್ಲಿ ಉಳಿದುಕೊಳ್ಳಬೇಕಾದರೆ ಗುರುತಿನ ಚೀಟಿಯನ್ನು ಕೇಳಬಹುದು ಎಂಬ ಕಾರಣಕ್ಕೆ ಕೆನತ್, ಪುದುಚೇರಿಯ ಕಡಲತೀರದ ಗುಡಿಸಲುಗಳಲ್ಲಿ ಆಶ್ರಯ ಪಡೆದಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಕರಣ ಬೆಳಕಿಗೆ ಬಂದ ತಕ್ಷಣ ಇಬ್ಬರೂ ಆರೋಪಿಗಳ ಚಲನವಲನ ಪತ್ತೆಹಚ್ಚಲು ಹಲವು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಒಂದು ತಂಡವು ಶ್ವೇತಾಳನ್ನು ಹಿಂಬಾಲಿಸಿದರೆ, ಇತರ ತಂಡಗಳು ಸಿಸಿಟಿವಿ ದೃಶ್ಯಾವಳಿಗಳನ್ನು ಆಧರಿಸಿ ಕೆನತ್‌ಗಾಗಿ ಹುಡುಕಾಟ ನಡೆಸಿದ್ದವು.

ಪುದುಚೇರಿಯ ರೈಲ್ವೆ ನಿಲ್ದಾಣದ ಬಳಿ ಬರುತ್ತಿದ್ದಂತೆ ಅವರ ಬೈಕ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಕೆಟ್ಟು ನಿಂತಿತ್ತು. ಮುಂದೆ ಹೋಗಲಾರದೆ, ಬೈಕ್ ಅನ್ನು ಅಲ್ಲೇ ಬಿಟ್ಟು ಅವಿತುಕೊಳ್ಳಲು ಇಬ್ಬರೂ ಸಂಚು ರೂಪಿಸುತ್ತಿದ್ದರು. ಆದರೆ, ಟೋಲ್ ಪ್ಲಾಜಾಗಳ ಮೂಲಕವೇ ಇವರ ಹಾದಿಯನ್ನು ಪತ್ತೆಹಚ್ಚುತ್ತಾ ಹಿಂದೆಯೇ ತೆರಳಿದ್ದ ಬೆಂಗಳೂರಿನ ಪೊಲೀಸರು ಕಾರ್ಯಾಚರಣೆ ನಡೆಸಿ ಶ್ವೇತಾಳನ್ನು ಸುತ್ತುವರಿದು ಬಂಧಿಸಿದ್ದರು. ಇದೇ ವೇಳೆ ಕೆನತ್ ತಪ್ಪಿಸಿಕೊಂಡಿದ್ದ.


ಒಂದು ವರ್ಷ ಪೂರೈಸಿದ ಎಸ್‌ಐಆರ್; ಎಸ್‌ಐಆರ್‌ಟಿ ಪಠ್ಯಪುಸ್ತಕದಲ್ಲಿ ಸೇರ್ಪಡೆ

ನವದೆಹಲಿ, ಜೂ.26– 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್‌ಟಿ) ಪ್ರಕ್ರಿಯೆ ಮುಂದುವರಿದಿರುವಂತೆಯೇ, ಈ ಅಭಿಯಾನವು ಇಂದು (ಶುಕ್ರವಾರ) ಒಂದು ವರ್ಷ ಪೂರೈಸಿದೆ. ಎಸ್‌ಐಆರ್ ಪ್ರಕ್ರಿಯೆಯಡಿ ಇದುವರೆಗೆ ಆರು ಕೋಟಿ ಮತದಾರರ ಹೆಸರುಗಳನ್ನು ಕೈಬಿಡಲಾಗಿದ್ದು, ವಿರೋಧ ಪಕ್ಷಗಳು ಮತ್ತು ಚುನಾವಣಾ ಆಯೋಗದ ನಡುವೆ ತೀವ್ರ ವಾಕ್ಸಮರಕ್ಕೆ ನಾಂದಿ ಹಾಡಿದೆ.



2025ರ ಜೂನ್ 24ರಂದು ಬಿಹಾರದಲ್ಲಿ ವಿಧಾನಸಭಾ ಚುನಾವಣೆಗೆ ಮುನ್ನ ಎಸ್‌ಐಆರ್ ಪ್ರಕ್ರಿಯೆ ನಡೆಸಲಾಗಿತ್ತು. ಜತೆಗೆ, ಮತದಾರರ ಪಟ್ಟಿಯಿಂದ 65 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿತ್ತು. ಸೂಕ್ತ ದಾಖಲೆಗಳಿಲ್ಲದ ಕಾರಣ ಮತದಾನದ ಹಕ್ಕನ್ನು ಕಸಿದುಕೊಳ್ಳಲು ಚುನಾವಣಾ ಆಯೋಗವು ಬಿಜೆಪಿಯ ಕೈಗೊಂಬೆಯಂತೆ ಕೆಲಸ ಮಾಡುತ್ತಿದೆ ಎಂದು ವಿಪಕ್ಷಗಳು ಆರೋಪಿಸಿದ್ದವು. ಬಳಿಕ, ಮಾರ್ಚ್‌ನಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸುವ ಚುನಾವಣಾ ಆಯೋಗದ ಕ್ರಮದ ಸಾಂವಿಧಾನಿಕ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಸರ್ವಾನುಮತದಿಂದ ಎತ್ತಿ ಹಿಡಿದಿತ್ತು.

ರಾಜ್ಯ ಚುನಾವಣಾ ಆಯೋಗ ಕಾಂಗ್ರೆಸ್ ಸರ್ಕಾರದ ಕೈಗೊಂಬೆ



ಬೆಂಗಳೂರು, ಜೂ.26– ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ರಾಜ್ಯ ಚುನಾವಣಾ ಆಯೋಗವು ಬೆಂಗಳೂರಿನ 27 ವಾರ್ಡ್‌ಗಳಲ್ಲಿ ಎಸ್‌ಐಆರ್ ನಡೆಸುತ್ತಿದೆ. ಇದು ಕಾನೂನು ಬಾಹಿರ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದ್ದಾರೆ.

ರಾಜ್ಯ ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಭಾರತ ಚುನಾವಣಾ ಆಯೋಗವು ವಿಶೇಷ ಮತಪಟ್ಟಿ ಪರಿಷ್ಕರಣೆ (ಎಸ್‌ಐಆರ್) ನಡೆಸುತ್ತಿದೆ. ಆದರೆ ಇದಕ್ಕೆ ಸಮಾನಾಂತರವಾಗಿ ರಾಜ್ಯ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಇದು ತಪ್ಪು. ಈ ಬಗ್ಗೆ ರಾಜ್ಯ ಚುನಾವಣಾ ಆಯುಕ್ತ ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸಿರುವುದಾಗಿ ಹೇಳಿದರು.

ಮುಖ್ಯ ಚುನಾವಣಾ ಅಧಿಕಾರಿ ವಿ. ಅನ್ಬುಕುಮಾರ್ ಅವರಿಗೆ ಬರೆದ ಪತ್ರದಲ್ಲಿ ನಾರಾಯಣಸ್ವಾಮಿ, ಚುನಾವಣಾ ಆಯೋ ಗವು ರಾಜ್ಯಾದ್ಯಂತ ಎಸ್‌ಐಆರ್ ಅನ್ನು ಕಡ್ಡಾಯಗೊಳಿಸಿದೆ, ದತ್ತಾಂಶ ಸಮಗ್ರತೆಯನ್ನು ಕಾಪಾಡಿಕೊಳ್ಳಲು ಜೂನ್ 16 ರಿಂದ ವಿಧಾನಸಭಾ ಕ್ಷೇತ್ರವಾರು ಮತದಾರರ ಪಟ್ಟಿಯನ್ನು ಸ್ಥಗಿತಗೊಳಿಸಿದೆ ಎಂದು ಹೇಳಿದ್ದಾರೆ.

ಕ್ರಿಪ್ಟೋ ಕರೆನ್ಸಿಗೆ ಬದಲಾವಣೆ ಮಾಡಿಕೊಡುವುದಾಗಿ ವಂಚಿಸಿದ್ದ 12 ಮಂದಿ ಆರೋಪಿಗಳ ಬಂಧನ

ಬೆಂಗಳೂರು, ಜೂ.26– ಭಾರತೀಯ ರೂಪಾಯಿಯನ್ನು ಕ್ರಿಪ್ಟೋ ಕರೆನ್ಸಿಗೆ ಬದಲಾವಣೆ ಮಾಡಿಕೊಡುವುದಾಗಿ ಹೇಳಿ ಉದ್ಯಮಿಯೊಬ್ಬರ ಮೇಲೆ ಹಲ್ಲೆ ನಡೆಸಿ 17. 64 ಲಕ್ಷ ರೂ. ಹಣ ದರೋಡೆ ಮಾಡಿದ್ದ 12 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಗಳಿಂದ 13. 90 ಲಕ್ಷ ನಗದು, ಕೃತ್ಯಕ್ಕೆ ಬಳಸಿದ 6 ದ್ವಿಚಕ್ರ ವಾಹನ, ಒಂದು ಕಾರು ಮತ್ತು 13 ಮೊಬೈಲ್ ಫೋನ್ ಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಕೋಡಿಗೆಹಳ್ಳಿ ನಿವಾಸಿ ಜೂನ್ 10ರಂದು ದೂರು ದಾಖಲಿಸಿದ ನಂತರ ಪ್ರಕರಣ ಬೆಳಕಿಗೆ ಬಂದಿತು ಎಂದು ಸಂಜಯ್ ನಗರ ಪೊಲೀಸರು ತಿಳಿಸಿದ್ದಾರೆ.

ಕೆಫೆ ಓಪನ್ ಮಾಡಲು ಯೋಜನೆ ಹಾಕಿಕೊಂಡು, ಕಿಚನ್ ಟೈಲ್ಸ್ ಮತ್ತಿತರ ವಸ್ತುಗಳನ್ನು ಇಂಟರ್ನೆಟ್ ನಲ್ಲಿ ಹುಡುಕುತ್ತಿದ್ದಾಗ ಇಂತಹ ವಸ್ತುಗಳನ್ನು ಜಪಾನ್ ಅಥವಾ ಚೈನಾ ದೇಶದಿಂದ ಕಡಿಮೆ ದರದಲ್ಲಿ ದೊರೆಯುತ್ತವೆ ಎಂಬುದನ್ನು ಅವರ ಸ್ನೇಹಿತರೊಬ್ಬರಿಂದ ತಿಳಿದುಕೊಂಡು ಕ್ರಿಪ್ಟೋ ಕರೆನ್ಸಿ ಪಾವತಿ ಬಗ್ಗೆ ಮಾಹಿತಿ ಪಡೆದು USDT ಕ್ರಿಪ್ಟೋ ಕರೆನ್ಸಿ ವ್ಯವಹಾರದ ವಾಟ್ಸಾಪ್ ಗ್ರೂಪ್ ಸೇರಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮೆಟ್ರೋ ಕಾಮಗಾರಿ ವೇಳೆ ವಿದ್ಯುತ್ ಸ್ಪರ್ಶ: ಕಾರ್ಮಿಕ ಸಾವು



ಬೆಂಗಳೂರು, ಜೂ.26– 'ನಮ್ಮ ಮೆಟ್ರೋ' ಟ್ರಿನಿಟಿ ನಿಲ್ದಾಣದ ಹೊರಭಾಗದಲ್ಲಿ ಬೆಳಕಿನ ವ್ಯವಸ್ಥೆಯ ಕೆಲಸ ಮಾಡುತ್ತಿದ್ದ ಕಾರ್ಮಿಕ ವಿದ್ಯುತ್ ಸ್ಪರ್ಶವಾಗಿ ಮೃತಪಟ್ಟಿದ್ದಾರೆ.

ನಮ್ಮ ಮೆಟ್ರೋ' ಪಿಲ್ಲರ್‌ಗಳಿಗೆ ಬೆಳಕಿನ ವ್ಯವಸ್ಥೆಯನ್ನು ಎಂ/ಎಸ್ ಎಂ.ಆರ್. ಎಲೆಕ್ಟ್ರಿಕಲ್ಸ್ ಗುತ್ತಿಗೆ ಸಂಸ್ಥೆ ನಿರ್ವಹಿಸುತ್ತಿತ್ತು. ಶುಕ್ರವಾರ ಮಧ್ಯಾಹ್ನ 3.52ಕ್ಕೆ ಟ್ರಿನಿಟಿ ಮೆಟ್ರೋ ನಿಲ್ದಾಣದ ಹೊರಭಾಗದಲ್ಲಿರುವ ಪಿಲ್ಲರ್ ಸಂಖ್ಯೆ 153ರ ಸಮೀಪ ಭೂಮಿಯಲ್ಲಿ ಅರ್ಥ್ ಪಿಟ್ ಕಾಮಗಾರಿ ನಡೆಸುವ ವೇಳೆ ವಿದ್ಯುತ್ ಸ್ಪರ್ಶವಾಗಿ ಕಾರ್ಮಿಕ ಗಂಭೀರ ಗಾಯಗೊಂಡಿದ್ದರು.

ಅವರನ್ನು ತಕ್ಷಣವೇ ಸೇಂಟ್ ಫಿಲೋಮಿನಾ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ದಾಖಲಿಸಲಾಯಿತು. ಆದರೆ, ಆಸ್ಪತ್ರೆಗೆ ತಲುಪುವಷ್ಟರಲ್ಲಿ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದರು.

ಘಟನೆಯ ನಿಖರ ಕಾರಣವನ್ನು ಪತ್ತೆಹಚ್ಚುವ ಕಾರ್ಯ ಪ್ರಗತಿಯಲ್ಲಿದ್ದು, ಸಂಬಂಧಿತ ಅಧಿಕಾರಿಗಳು ಪ್ರಕರಣ ಕುರಿತು ಸಮಗ್ರ ತನಿಖೆ ನಡೆಸುತ್ತಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಹಂತದ ಮಹಾರಾಜ ಟ್ರೋಫಿಗೆ ಮೈಸೂರು ಗುಡ್–ಬೈ



ರಂಗರಾವ್ ಸ್ಮಾರಕ ಶಾಲೆಯ ವಿಶೇಷ ಮಕ್ಕಳು ಪಂದ್ಯ ವೀಕ್ಷಿಸುತ್ತಿರುವುದು.



ಮೈಸೂರಲ್ಲಿ ಆಯೋಜನೆಯಾದ ಮೊದಲ ಹಂತದ ಟೂರ್ನಿಗಾಗಿ 60 ಮಂದಿ ಸಿಬ್ಬಂದಿ ನಿಯೋಜಿಸಲಾಗಿತ್ತು. ನಿರಂತರ ಶ್ರಮವಹಿಸಿ, ಯಾವುದೇ ಲೋಪವಾಗದಂತೆ ಟೂರ್ನಿ ಆಯೋಜಿಸಿರುವುದಕ್ಕೆ ಬಹಳ ಸಂತೋಷವಾಗಿದೆ. ಮೈಸೂರಿನ ಪ್ರತಿಭೆಗಳು ಉತ್ತಮ ಪ್ರದರ್ಶನ ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯ.

–ಶ್ರೀನಿವಾಸ ಪ್ರಸಾದ್,
ಸಂಚಾಲಕ, ಕೆಎಸ್‌ಸಿಎ.

ಮೈಸೂರು, ಜೂ.26(ವಿವಿಹೆಚ್)– ಸತತ 6 ದಿನಗಳ ಕಾಲ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆದ 5ನೇ ಆವೃತ್ತಿಯ ಮಹಾರಾಜ ಟ್ರೋಫಿ ಮೊದಲ ಹಂತ ಗುರುವಾರ ಮುಕ್ತಾಯವಾಯಿತು. ಸತತ 6 ದಿನಗಳು ಡಬಲ್ ಡೆಕ್ಕರ್ ಪಂದ್ಯಗಳು ನಡೆದಿದ್ದು, ಪ್ರೇಕ್ಷಕರು ಮತ್ತು ಕ್ರಿಕೆಟ್ ಪ್ರೇಮಿಗಳು ಹೊನಲು–ಬೆಳಕಿನ ಪಂದ್ಯಾವಳಿ ವೀಕ್ಷಿಸಿ ಸಂಭ್ರಮಿಸಿದರು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಒಂದು ವಾರ ಕಾಲ ನಡೆದ ಕರ್ನಾಟಕದ ಐಪಿಎಲ್ ಎಂದೇ ಪ್ರಸಿದ್ಧಿಯಾಗಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿಯ ಮೊದಲ ಹಂತ ಮುಕ್ತಾಯವಾಗಿದ್ದು, ಎರಡನೇ ಹಂತ ಪಂದ್ಯಾವಳಿಗಾಗಿ ನಾಳೆ(ಜೂ.26) ಎಲ್ಲಾ 6 ತಂಡಗಳು ಹುಬ್ಬಳ್ಳಿಗೆ ಪ್ರಯಾಣ ಬೆಳೆಸಲಿವೆ.

ಇಂದು(ಗುರುವಾರ) ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಕ್ರೀಡಾಂಗಣದಲ್ಲಿ ಹುಬ್ಬಳ್ಳಿ ಟೈಗರ್ಸ್ ಮತ್ತು ಗುಲ್ಬರ್ಗಾ ಮಿಸ್ಟಿಕ್ಸ್ ನಡುವಿನ ಪಂದ್ಯದೊಂದಿಗೆ ಟೂರ್ನಿಯ ಮೊದಲ ಹಂತ ಮುಕ್ತಾಯವಾಯಿತು.

ಜೂ.20 ರಂದು ಆರಂಭವಾದ ಮಹಾರಾಜ ಟ್ರೋಫಿ 5ನೇ ಆವೃತ್ತಿಯ ಮೊದಲ ಹಂತಕ್ಕೆ ಮೈಸೂರು ಆತಿಥ್ಯ ವಹಿಸಿತ್ತು. ಜೂ.20 ರಿಂದ 25ವರೆಗೆ 12 ಪಂದ್ಯಗಳು ಮೈಸೂರಲ್ಲಿ ನಡೆಯಿತು. ಉಳಿದಂತೆ ಜೂ.27 ರಿಂದ ಜು.3 ವರೆಗೆ ಹುಬ್ಬಳ್ಳಿಯಲ್ಲಿ 12 ಪಂದ್ಯಗಳು ನಡೆಯಲಿವೆ. ಎಲಿಮಿನೇಟರ್, ಕ್ವಾಲಿಫೈಯರ್ ಹಾಗೂ ಫೈನಲ್ಸ್ ಸೇರಿದಂತೆ ಉಳಿದ 10 ಪಂದ್ಯಗಳಿಗೆ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಆತಿಥ್ಯ ವಹಿಸಲಿದೆ.

ಪ್ರತಿ ತಂಡಗಳು ಈವರೆಗೆ ತಲಾ 4 ಪಂದ್ಯಗಳನ್ನು ಆಡಿದ್ದು, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡ ಮೂರು ಪಂದ್ಯಗಳನ್ನು ಗೆದ್ದು, 6 ಪಾಯಿಂಟ್ಸ್‌ನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಇತ್ತ ತವರಿನಂಗಳದಲ್ಲಿ ಕಳಪೆ ಪ್ರದರ್ಶನ ತೋರಿರುವ ಅತಿಥೇಯ ಮೈಸೂರು ವಾರಿಯರ್ಸ್ 4 ಪಂದ್ಯಗಳಲ್ಲಿ ಮೂರರಲ್ಲಿ ಸೋತು, ಬಿಲೋ ರನ್‌ರೇಟ್ ಹೊಂದಿರುವ ಕಾರಣ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ.

ಇನ್ನು ಮೊದಲ ಹಂತದಲ್ಲಿ ಮೈಸೂರಿನ ಎಲ್.ಆರ್.ಚೇತನ್ ಭರ್ಜರಿ ಫಾರ್ಮ್‌ನಲ್ಲಿದ್ದು, 4 ಪಂದ್ಯಗಳಿಂದ 1 ಶತಕ ಸೇರಿದಂತೆ 194 ರನ್ ಕಲೆಹಾಕಿ ಟಾಪ್ ಸ್ಕೋರರ್ ಆಗಿದ್ದಾರೆ ಇತ್ತ ಕಲ್ಯಾಣಿ ಬ್ಲಾಸ್ಟರ್ಸ್‌ನ ಶುಭಾಂಗ್ ಹೆಗ್ಡೆ ಹಾಗೂ ಅಭಿಲಾಷ್ ಶೆಟ್ಟಿ ತಲಾ 7 ವಿಕೆಟ್ ಕಬಳಿಸಿ ಅತ್ಯಧಿಕ ವಿಕೆಟ್ ಪಡೆದ ಆಟಗಾರರಾಗಿದ್ದಾರೆ.

ಮೈಸೂರಿಗರ ಕಮಾಲ್: ಈ ಬಾರಿಯ ಸೀಸನ್‌ನಲ್ಲಿ ಹಳೇ ಮೈಸೂರು ಭಾಗದ ಬಹುತೇಕ ಪ್ರತಿಭೆಗಳ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದೆ. ಅದರಲ್ಲೂ ಮೈಸೂರು, ಕೊಡಗು, ಮಂಡ್ಯ ಭಾಗದ ಪ್ರತಿಭಾನ್ವಿತ ಆಟಗಾರರು ತಮ್ಮ ಕೌಶಲ ಪ್ರದರ್ಶಿಸಿ, ಪ್ರೇಕ್ಷಕರ ಮೆಚ್ಚುಗೆಗಳಿಸಿದ್ದಾರೆ. ಮೈಸೂರು ವಾರಿಯರ್ಸ್ ಪರ ಎಸ್.ಯು.ಕಾರ್ತಿಕ್, ಎಲ್.ಆರ್. ಚೇತನ್, ಕೆ.ಎಸ್.ಲಂಕೇಶ್, ಗೌತಮ್ ಸಾಗರ್ ಆಡುತ್ತಿದ್ದರೆ, ಕೋಸ್ಟಲ್ ಕಿಂಗ್ಸ್ ಮಂಗಳೂರು ಪರ ನಿಕಿನ್ ಜೋಸ್ ತಮ್ಮ ಕಮಾಲ್ ತೋರುತ್ತಿದ್ದಾರೆ. ಇವರಲ್ಲಿ ಎಲ್.ಆರ್.ಚೇತನ್ ಹಾಗೂ ನಿಕಿನ್ ಜೋಸ್ ಭರ್ಜರಿ ಫಾರ್ಮ್‌ನಲ್ಲಿದ್ದು, ಆಯಾ ತಂಡಗಳ ಪರ ಉತ್ತಮ ಪ್ರದರ್ಶನ ತೋರುತ್ತಿದ್ದಾರೆ.

2 ಶತಕ ದಾಖಲು: ಮೊದಲ ಹಂತದಲ್ಲಿ ಒಟ್ಟು 12 ಪಂದ್ಯಗಳು ನಡೆದಿದ್ದು, ಇದರಲ್ಲಿ 2 ಶತಕ ದಾಖಲಾಗಿವೆ. ಅಚ್ಚರಿಯೆಂಬಂತೆ ಈ ಎರಡೂ ಶತಕಗಳನ್ನು ಮೈಸೂರಿಗರೇ ಬಾರಿಸಿರುವುದು ವಿಶೇಷ. ಗುಲ್ಬರ್ಗಾ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡದ ನಿಕಿನ್ ಜೋಸ್, ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ 47 ಎಸೆತಗಳಲ್ಲಿ ಶತಕ ಬಾರಿಸಿದರೆ, ಮೈಸೂರು ವಾರಿಯರ್ಸ್‌ನ ಎಲ್.ಆರ್.ಚೇತನ್ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ 60 ಎಸೆತಗಳಲ್ಲಿ 106 ರನ್ ಕಲೆಹಾಕಿದ್ದರು.

ಗಮನ ಸೆಳೆದ ವಿಶೇಷ ಮಕ್ಕಳು: ಮೈಸೂರಿನ ರಂಗರಾವ್ ಸ್ಮಾರಕ ಶಾಲೆಯ ವಿಶೇಷ ಮಕ್ಕಳು ಮೈಸೂರು ವಾರಿಯರ್ಸ್ ತಂಡವನ್ನು ಬೆಂಬಲಿಸಿದರು. ಕ್ರೀಡೋತ್ಸಾಹ ಮರೆದ ಅವರು, ಮೈದಾನದ ಮೊದಲ ಅನುಭವವನ್ನು ಆನಂದಿಸಿದರು.

ಇಂದಿನಿಂದ ಹುಬ್ಬಳ್ಳಿಯಲ್ಲಿ ಎರಡನೇ ಹಂತದ ಪಂದ್ಯಾವಳಿ

ಮೈಸೂರು, ಜೂ.26(ವಿವಿಹೆಚ್)– ಹುಬ್ಬಳ್ಳಿಯ, ಕೆಎಸ್‌ಸಿಎ ಹುಬ್ಬಳ್ಳಿ ಕ್ರೀಡಾಂಗಣದಲ್ಲಿ ಇಂದಿನಿಂದ (ಜೂ.27) ಎರಡನೇ ಹಂತದ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಪಂದ್ಯಾವಳಿ ನಡೆಯಲಿದೆ



ಜೂ.20 ರಂದು ಆರಂಭವಾದ ಮಹಾರಾಜ ಟ್ರೋಫಿ 5ನೇ ಆವೃತ್ತಿಯ ಮೊದಲ ಹಂತಕ್ಕೆ ಮೈಸೂರು ಆತಿಥ್ಯ ವಹಿಸಿತ್ತು. ಜೂ.20 ರಿಂದ 25ವರೆಗೆ 12 ಪಂದ್ಯಗಳು ಮೈಸೂರಲ್ಲಿ ನಡೆಯಿತು.

ಮೊದಲ ಹಂತದ ಪಂದ್ಯಾವಳಿ ಮುಗಿಸಿರುವ 6 ತಂಡಗಳು ಈಗ ಹುಬ್ಬಳ್ಳಿಗೆ ಬಂದು ನೆಲೆಸಿವೆ. ಇಂದಿನಿಂದ (ಜೂ.27) ಜು.3ರ ವರೆಗೆ ಎರಡನೇ ಹಂತದ ಟೂರ್ನಿ ನಡೆಯಲಿದ್ದು, ಇದರಲ್ಲಿ 12 ಪಂದ್ಯಗಳು ಆಯೋಜನೆಯಾಗಿವೆ.

ಮೊದಲ ಪಂದ್ಯ ಮಧ್ಯಾಹ್ನ 2.30ಕ್ಕೆ ಶಿವಮೊಗ್ಗ ಯೋಧಾಸ್ ಮತ್ತು ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ನಡುವೆ ನಡೆದರೆ, ಎರಡನೇ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ಮತ್ತು ಗುಲ್ಬರ್ಗಾ ಮಿಸ್ಟಿಕ್ಸ್ ಸೆಣಸಾಡಲಿವೆ.

7 ದಿನಗಳ ಕಾಲ 12 ಪಂದ್ಯಗಳು ನಡೆಯಲಿದ್ದು, 5 ದಿನ ಡಬಲ್ ಡೆಕ್ಕರ್ ಪಂದ್ಯ ನಡೆದರೆ, 2 ದಿನ ಒಂದೊಂದೇ ಪಂದ್ಯ ಆಯೋಜನೆಯಾಗಿದೆ. ಇತ್ತ ಬೆಂಗಳೂರು ಬ್ಲಾಸ್ಟರ್ಸ್ ಭರ್ಜರಿ ಫಾರ್ಮ್‌ನಲ್ಲಿದ್ದು, ಅದನ್ನೇ ಮುಂದುವರಿಸುವ ಆತ್ಮವಿಶ್ವಾಸದಿಂದಿದ್ದರೆ, ಮತ್ತೊಂದೆಡೆ ಹೀನಾಯ ಪ್ರದರ್ಶನ ತೋರುತ್ತಿರುವ ಮೈಸೂರು ವಾರಿಯರ್ಸ್ ಪುಟಿದೇಳಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ.

ವೆನೆಜುವೆಲಾದಲ್ಲಿ ಪ್ರಬಲ ಭೂಕಂಪ

ಮೃತರ ಸಂಖ್ಯೆ 589ಕ್ಕೇರಿಕೆ; 3000 ಜನರಿಗೆ ಗಾಯ

ಕರಾಕಸ್, ಜೂ.26– ವೆನೆಜುವೆಲಾದಲ್ಲಿ ಸಂಭವಿಸಿದ ಎರಡು ಪ್ರಬಲ ಭೂಕಂಪಗಳಿಂದಾಗಿ ಮೃತಪಟ್ಟವರ ಸಂಖ್ಯೆ 589ಕ್ಕೆ ಏರಿಕೆಯಾಗಿದ್ದು, 3,000ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಬುಧವಾರ ಸಂಜೆ 7.2ರಷ್ಟು ತೀವ್ರತೆಯ ಭೂಕಂಪ ಸಂಭವಿಸಿತ್ತು. ಅದಾದ ಕೆಲ ಸೆಕೆಂಡುಗಳ ಅಂತರದಲ್ಲಿಯೇ ಮತ್ತೆ 7.5ರಷ್ಟು ತೀವ್ರತೆಯ ಭಾರೀ ಭೂಕಂಪ ಸಂಭವಿಸಿತ್ತು. ಇದರಿಂದ ದೇಶದ ವಿವಿಧೆಡೆ ಕಟ್ಟಡಗಳು ಕುಸಿದಿದ್ದು, ಅವಶೇಷಗಳ ಅಡಿ ನೂರಾರು ಜನ ಸಿಲುಕಿದ್ದಾರೆ. ದೇಶದ ಪ್ರಮುಖ ವಿಮಾನ ನಿಲ್ದಾಣಕ್ಕೂ ಹಾನಿಯಾಗಿದ್ದು, ಸಂಚಾರ ಸ್ಥಗಿತಗೊಳಿಸಲಾಗಿದೆ.

ತುರ್ತು ರಕ್ಷಣಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದು, ಕಟ್ಟಡಗಳ ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಒಂದರ ಹಿಂದೆ ಒಂದರಂತೆ ಸಂಭವಿಸಿದ ಭಾರೀ ಭೂಕಂಪದಿಂದ ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ ಎಂದು ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಮಾಹಿತಿ ನೀಡಿದ್ದಾರೆ.

ಭೂಕಂಪದಿಂದಾಗಿ 49,500 ಜನರು ನಾಪತ್ತೆಯಾಗಿದ್ದು, 10,000 ಜನರು ಮೃತಪಟ್ಟಿರುವ ಸಾಧ್ಯತೆ ಇದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಭೂಕಂಪದಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ವೆನೆಜುವೆಲಾಕ್ಕೆ 35 ಟನ್ ಪರಿಹಾರ ಸಾಮಗ್ರಿ, ಔಷಧ ಮತ್ತು ವೈದ್ಯಕೀಯ ಉಪಕರಣಗಳನ್ನು ಭಾರತ ರವಾನಿಸಿದೆ.

ಪರಿಷತ್ ಚುನಾವಣೆಯಲ್ಲಿ 'ಅಡ್ಡ' ಮತದಾನ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ವಿಪಕ್ಷ ನಾಯಕ ಅಶೋಕ್ ತಲೆದಂಡ ಸನ್ನಿಹಿತ!

ವಿಪಕ್ಷ ನಾಯಕ ಸ್ಥಾನಕ್ಕೆ ಸುನೀಲ್‌ಕುಮಾರ್; ಅರವಿಂದ ಬೆಲ್ಲದ್ ಇಲ್ಲವೇ ಕೇಂದ್ರ ಸಚಿವ ಸೋಮಣ್ಣಗೆ ಪಕ್ಷದ ಸಾರಥ್ಯ!!

ಬೆಂಗಳೂರು, ಜೂ.26(ಕೆಎಂಶಿ)– ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಶಾಸಕರಿಂದ ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಪಕ್ಷದ ದೆಹಲಿ ವರಿಷ್ಠರು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಲೆದಂಡಕ್ಕೆ ನಿರ್ಧರಿಸಿದ್ದಾರೆ.

ಅಶೋಕ್ ಸ್ಥಾನಕ್ಕೆ ಆರ್‌ಎಸ್‌ಎಸ್ ಮೂಲದ ವಿ.ಸುನೀಲ್‌ಕುಮಾರ್ ಹಾಗೂ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಅರವಿಂದ ಬೆಲ್ಲದ್ ಇಲ್ಲವೇ ಕೇಂದ್ರ ಸಚಿವ ವಿ. ಸೋಮಣ್ಣ ಅವರನ್ನು ತರಲು ಚಿಂತನೆ ನಡೆಸಿದ್ದಾರೆ.

ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಪಕ್ಷದ ರಾಜ್ಯ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್ವಾಲ್ ನೀಡಿದ ವರದಿ ಆಧಾರದ ಮೇಲೆ ಕರ್ನಾಟಕ ಬಿಜೆಪಿಯಲ್ಲಿ ಭಾರೀ ಬದಲಾವಣೆಗೆ ಮುಂದಾಗಿದ್ದಾರೆ.

ವರದಿ ಆಧಾರದ ಮೇಲೆ ಬಿಜೆಪಿ ರಾಷ್ಟ್ರೀಯ ಸಂಘಟನಾ



ವಿಜಯೇಂದ್ರ



ಆರ್.ಅಶೋಕ್

ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹಾಗೂ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರು, ಕೇಂದ್ರದಲ್ಲಿ ರಾಜ್ಯ ಪ್ರತಿನಿಧಿಸುವ ಸಚಿವರು, ಕೆಲವು ಹಿರಿಯ ಸಂಸದರೊಂದಿಗೆ ಬದಲಾವಣೆ ಸಂಬಂಧ ಸಮಾಲೋಚನೆ ನಡೆಸಿದ್ದಾರೆ. ಮೈತ್ರಿ ಪಕ್ಷ ಜೆಡಿಎಸ್‌ನ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಜೊತೆಯೂ ಚರ್ಚಿಸಿರುವ ಉಭಯ ನಾಯಕರು ಅಶೋಕ್ ಹಾಗೂ ವಿಜಯೇಂದ್ರ ಅವರನ್ನು ದೆಹಲಿಗೆ ಕರೆಸಿಕೊಂಡು ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಖುದ್ದು ವಿವರಣೆ ಪಡೆದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸಂಪುಟವನ್ನು ಪುನರ್ ರಚನೆ ಮಾಡುತ್ತಿದ್ದು, ನಂತರ ಇಲ್ಲವೇ ಅದಕ್ಕೂ ಮೊದಲೇ ಕರ್ನಾಟಕ ಬಿಜೆಪಿಯಲ್ಲಿ ಬದಲಾವಣೆ ಆಗಲಿದೆ.

ಅಧಿಕಾರದಿಂದ ಕೆಳಗಿಳಿಯುವ ಅಶೋಕ್ ಮತ್ತು ವಿಜಯೇಂದ್ರ ಅವರನ್ನು ರಾಷ್ಟ್ರೀಯ ಸಂಘಟನೆಗೆ ಬಳಸಿಕೊಳ್ಳುವ ಬಗ್ಗೆ ಚಿಂತನೆ ಮಾಡಿರುವ ವರಿಷ್ಠರು, ಕೇಂದ್ರ ಸಂಪುಟ ಪುನರ್ ರಚನೆ ವೇಳೆ ಬಿ.ವೈ. ರಾಘವೇಂದ್ರ ಅವರಿಗೆ ಮಂತ್ರಿ ಸ್ಥಾನ ಕಲ್ಪಿಸುವ ಬಗ್ಗೆಯೂ ಚರ್ಚೆ ನಡೆದಿದೆ. ರಾಜ್ಯ ವಿಧಾನಸಭೆಯಿಂದ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯ 7, ಜೆಡಿಎಸ್‌ನ 4 ಶಾಸಕರು ಅಡ್ಡ ಮತದಾನ ಮಾಡಿದ್ದ ರಿಂದ ಕಾಂಗ್ರೆಸ್‌ನ 5ನೇ ಅಭ್ಯರ್ಥಿ ನಿರೀಕ್ಷೆಗಿಂತ ಹೆಚ್ಚು ಮತಗಳನ್ನು ಪಡೆದು ಜಯ ಗಳಿಸಿದ್ದರು. ಶಿಸ್ತಿಗೆ ಹೆಸರಾದ ಪಕ್ಷದಲ್ಲೇ ಶಾಸಕರಿಂದ ಅಡ್ಡ ಮತದಾನ ಆಗಿದ್ದನ್ನು ಬಿಜೆಪಿ ವರಿಷ್ಠರು ಗಂಭೀರವಾಗಿ ಪರಿಗಣಿಸಿ, ತಕ್ಷಣದಿಂದಲೇ ಇದಕ್ಕೆ ಕಾರಣ ಕಂಡುಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದ್ದಾರೆ.

ಇಂದು 'ಎಸ್‌ಎಂ ಕೃಷ್ಣ ರಸ್ತೆ' ಲೋಕಾರ್ಪಣೆ

ಬೆಂಗಳೂರು: ಇಲ್ಲಿನ ಮೈಸೂರು ರಸ್ತೆಯ ಚಲ್ಲಘಟ್ಟ ಮೆಟ್ರೋ ನಿಲ್ದಾಣದಿಂದ ಮಾಗಡಿ ರಸ್ತೆಯ ಕಡಬಗೆರೆ ಕ್ರಾಸ್‌ಗೆ ಸಂಪರ್ಕ ಕಲ್ಪಿಸುವ ಬಿಡಿಎಯ 631 ಕೋಟಿ ವೆಚ್ಚದ ಬಹುನಿರೀಕ್ಷಿತ ಎಸ್‌ಎಂ ಕೃಷ್ಣ ರಸ್ತೆಯನ್ನು ನಾಳೆ (ಜೂ.27) ಸಿಎಂ ಡಿಕೆ ಶಿವಕುಮಾರ್ ಲೋಕಾರ್ಪಣೆ ಮಾಡಲಿದ್ದಾರೆ.

ನಾಳೆ ಕೆಂಪೇಗೌಡ ಜಯಂತಿಯಂದೇ ಈ ಕಾರ್ಯಕ್ರಮ ನಡೀತಿದೆ. ಕೆಂಪೇಗೌಡ ಬಡಾವಣೆಯ ಎಲ್ಲಾ 9 ಬ್ಲಾಕ್‌ಗಳ ಸಂಚಾರಕ್ಕೂ ಕೊಂಡಿ ಕಲ್ಪಿಸುವ ಈ ದಶಪಥ ರಸ್ತೆಯನ್ನು 631 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. 10.7 ಕಿ.ಮೀ ಉದ್ದದ, 100 ಮೀಟರ್ ಅಗಲದ (330 ಅಡಿ), 10 ಲೇನ್‌ಗಳ ರಸ್ತೆ ಇದಾಗಿದೆ. 3 ಪ್ರಮುಖ ಅಂಡರ್ ಪಾಸ್‌ಗಳು, 11 ಸೇತುವೆಗಳು, 270 ಮೀಟರ್ ಉದ್ದದ ಸುರಂಗ ಮಾರ್ಗ, ಅಗಲದ ರಸ್ತೆ ವಿಭಜಕ, ಆಧುನಿಕ ಸರ್ವಿಸ್ ರಸ್ತೆ, ಸೈಕಲ್ ಟ್ರ್ಯಾಕ್ ವ್ಯವಸ್ಥೆ ಹೊಂದಿದೆ. ಪೀಣ್ಯ, ಕೆಂಗೇರಿ, ಮೈಸೂರು, ಮಾಗಡಿ, ಹಾಸನ, ಕುಣಿಗಲ್, ಮಂಡ್ಯ ಹಾಗೂ ರಾಮನಗರ ಭಾಗಗಳಿಂದ ಬೆಂಗಳೂರಿಗೆ ಸಂಚರಿಸುವ ಸಾವಿರಾರು ಪ್ರಯಾಣಿಕರಿಗೆ ಅನುಕೂಲವಾಗಲಿದೆ. ನೈಸ್ ರಸ್ತೆಗೆ ಪರ್ಯಾಯ ಮಾರ್ಗವಾಗಿ ಟೋಲ್ ಫ್ರೀ ಹಾಗೂ ಸಿಗ್ನಲ್ ಫ್ರೀ ರಸ್ತೆಗೆ ಜನರು ಖುಷ್ ಆಗಿದ್ದು, ನಾಳೆ ಸಂಚಾರಕ್ಕೆ ಮುಕ್ತವಾಗಲಿದೆ.

ಇಂದು ನೂತನ ನವಗ್ರಹ, ಪಂಚಮುಖಿ ಆಂಜನೇಯಸ್ವಾಮಿ ವಿಗ್ರಹ ಪ್ರತಿಷ್ಠಾಪನೆ

ಮೈಸೂರು, ಜೂ.26– ಮೈಸೂರಿನ ಗೋಕುಲಂ ಮೊದಲ ಹಂತದ 1ನೇ ಮುಖ್ಯ ರಸ್ತೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಜೂ.27ರಂದು ಶನಿವಾರ ನೂತನ ನವಗ್ರಹ ಹಾಗೂ ಪಂಚಮುಖಿ ಆಂಜನೇಯಸ್ವಾಮಿ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 5.30ರಿಂದ 6.15 ರೊಳಗೆ ಸಲ್ಲುವ ಶುಭ ಮಿಥುನ ಲಗ್ನ ಪುಷ್ಕರಾಂಶದಲ್ಲಿ ಕಳಾಕರ್ಷಣ ಹೋಮಾದಿಗಳು, ನಂತರ 11 ಗಂಟೆಗೆ ಪೂರ್ಣಾಹುತಿ ನಂತರ ವಿಗ್ರಹಗಳಿಗೆ ಕುಂಬಾಭಿಷೇಕ, ಮಧ್ಯಾಹ್ನ 12.30ಕ್ಕೆ ಅಭಿಜಿನ್ ಮುಹೂರ್ತದಲ್ಲಿ ಮಹಾಮಂಗಳಾರತಿ, ಪ್ರತಿಷ್ಠಿತ ದೇವರ ದರ್ಶನ ಭಾಗ್ಯ, ನಂತರ ತೀರ್ಥಪ್ರಸಾದ ವಿನಿಯೋಗ ವಿರುತ್ತದೆ. ದೇವರ ದರ್ಶನ ಭಾಗ್ಯಕ್ಕೆ ಆಗಮಿಸುವ ಭಕ್ತಾದಿಗಳಿಗೆ ಭೋಜನ ವ್ಯವಸ್ಥೆ ಏರ್ಪಡಿಸಲಾಗಿರುತ್ತದೆ. ಭಕ್ತಾದಿಗಳು ಪೂಜಾ ಸಮಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಸಿಎಂ ಪ್ರತಿಕ್ರಿಯೆಗೆ ಭೈರಮಂಗಲದಲ್ಲಿ ಸಂಜೆವರೆಗೆ ಕಾಯುತ್ತೇನೆ

ಮಂಡ್ಯ: ಬಿಡದಿ ಟೌನ್‌ಶಿಪ್‌ಗೆ ಸಂಬಂಧಿಸಿದಂತೆ ನಾನು ಬರೆದ ಎರಡು ಪತ್ರಗಳಿಗೆ ಇಲ್ಲಿಯವರೆಗೂ ಮುಖ್ಯಮಂತ್ರಿ ಅವರಿಂದ ಪ್ರತಿಕ್ರಿಯೆ ಬಂದಿಲ್ಲ. ಭೈರಮಂಗಲದಲ್ಲಿ ನಾಳೆ ಸಂಜೆ 4 ಗಂಟೆವರೆಗೂ ಕಾಯುತ್ತೇನೆ. ಮುಖ್ಯಮಂತ್ರಿ ಬರಲಾಗದಿದ್ದರೆ, ಸಂಬಂಧಿಸಿದ ಅಧಿಕಾರಿಗಳನ್ನಾದರೂ ಕಳುಹಿಸಲಿ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.



ಮಂಡ್ಯದ ಶಿವಾರ ಗ್ರಾಮದಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿ, ಬಿಡದಿ ಟೌನ್‌ಶಿಪ್ ಯೋಜನೆಯನ್ನು ಶೇ 80ರಷ್ಟು ರೈತರು ವಿರೋಧಿಸುತ್ತಿದ್ದಾರೆ. ಪುಢಾರಿಗಳನ್ನು ಕರೆತಂದು ರೈತರಿಗೆ ದುಡ್ಡು ಕೊಡಲು ಕಾಂಗ್ರೆಸ್ ಹೊರಟಿದೆ. ಜನವಿರೋಧಿ ಸರ್ಕಾರಗಳು ಧೂಳಿಪಟವಾಗುತ್ತವೆ! ಎಂದು ಹರಿಹಾಯ್ದರು.

ಮಾತೆತ್ತಿದ್ದರೆ ನನಗೆ ಏನು ಹರಿದೆ ಅಂತಾರೇ! ಇವರೆಲ್ಲಾ ಇಷ್ಟು ವರ್ಷ ಹರಿದಿದ್ದೇನು. ಬೆಂಗಳೂರಲ್ಲಿ ಗುಂಡಿ ಮುಚ್ಚೋರಿಲ್ಲ, ಟಾರ್ ಹಾಕೋರಿಲ್ಲ. ಇವರ ಸ್ವೇಚ್ಛಾಚಾರದ ಆಡಳಿತದಿಂದ ಬೆಂಗಳೂರಿನ ಜನ ಬೇಸತ್ತಿದ್ದಾರೆ ಎಂದು ಟೀಕಿಸಿದರು.

ಹಾದಿಬೀದಿ ಚರ್ಚೆ ಬೇಡ, ವಿಧಾನಸೌಧಕ್ಕೆ ಬನ್ನಿ ಎಂಬ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಯತೀಂದ್ರ ಎಲ್ಲಿ ನಿಂತು ಮಾತಾಡುತ್ತಿದ್ದರು. ಅಪ್ಪಯ್ಯ, ಅಪ್ಪಯ್ಯ ಎಂದು ಮಾತನಾಡಿದ್ದು ನಾವು ನೋಡಿಲ್ವಾ! ಇವರಿಂದ ನಾನು ಕಲಿಯಬೇಕಾ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಶೀಘ್ರ ಸಚಿವ ಸಂಪುಟ ಪುನಾರಚನೆ ಸಾಧ್ಯತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದಲ್ಲಿ ಶೀಘ್ರ ಸಚಿವ ಸಂಪುಟ ಪುನರ್ ರಚನೆಯಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ಮಾಡಿರುವ ಗೃಹ ಸಚಿವ ಅಮಿತ್ ಶಾ ಭಾನುವಾರ ಅಥವಾ ಸೋಮವಾರ ಸಚಿವ ಸಂಪುಟ ಪುನರ್ ರಚನೆಗೆ ಸಮಯ ಕೇಳಿದ್ದಾರೆ ಎಂದು ಹೇಳಲಾಗಿದೆ.

ಹೊಸ ಸಂಪುಟದಲ್ಲಿ ಹಲವು ಮಂದಿ ಸಚಿವರು ಹಾಗೂ ಆರು ಮಂದಿ ರಾಜ್ಯಖಾತೆ ಸಚಿವರನ್ನು ಕೈ ಬಿಡಲಾಗುತ್ತಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ರನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಕ್ಕೆ ವರ್ಗಾವಣೆ ಮಾಡುವ ಸಾಧ್ಯತೆ ಇದೆ. ಧರ್ಮೇಂದ್ರ ಪ್ರಧಾನ್ ಮತ್ತು ಹರ್ದೀಪ್ ಸಿಂಗ್ ಪುರಿ ಅವರನ್ನು ಸಚಿವ ಸಂಪುಟದಿಂದ ಹೊರಗಿಡ್ತಾರೆ ಎಂಬ ಚರ್ಚೆ ಆಗುತ್ತಿದೆ. ಆರ್‌ಬಿಐ ಮಾಜಿ ಗವರ್ನರ್ ಮತ್ತು ಪ್ರಧಾನ ಮಂತ್ರಿಯ ಕಚೇರಿಯ ಪ್ರಧಾನ ಕಾರ್ಯದರ್ಶಿ ಶಕ್ತಿಕಾಂತ ದಾಸ್ ಅವರಿಗೆ ಸಚಿವ ಸ್ಥಾನ ನೀಡುವ ಸಾಧ್ಯತೆ ಹೆಚ್ಚಿದೆ.



ನರೇಂದ್ರ ಮೋದಿ

ಆಪ್ ಹಾಗೂ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ತೊರೆದು ಬಂದಿರುವ ಸಂಸದರಿಗೆ ಮಣೆ ಹಾಕುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಬಿಹಾರದ ಮಾಜಿ ಸಿಎಂ ನಿತೀಶ್ ಕುಮಾರ್, ಅನುರಾಗ್ ಠಾಕೂರ್, ಮಹಾರಾಷ್ಟ್ರ ಡಿಸಿಎಂ ಏಕನಾಥ್ ಶಿಂಧೆ ಪುತ್ರ ಶ್ರೀಕಾಂತ್ ಶಿಂಧೆ, ಯುಬಿಟಿಯಿಂದ ಬಂದಿರುವ ಸಂಸದ ಸಂಜಯ್ ದಿನಾ ಪಾಟೀಲ್, ಪಂಜಾಬ್ ಆಪ್‌ನಿಂದ ಬಂದಿರುವ ರಾಘವಚಡ್ಡಾ, ಅಶೋಕ್ ಮಿತ್ತಲ್ ಸೇರಿ ಹಲವರಿಗೆ ಸಚಿವ ಸ್ಥಾನ ಸಿಗೋ ಸಾಧ್ಯತೆ ಇದೆ ಎನ್ನಲಾಗಿದೆ.

ಐದನೇ ಪುಟದಿಂದ

ರಾಮಮಂದಿರದಲ್ಲೂ ಲೂಟಿ 8 ಮಂದಿ ಬಂಧನ

ಎಂದು ಮೂಲಗಳು ಸೂಚಿಸಿವೆ. ಆದರೆ, ಚಂಪತ್ ರಾಯ್ ಅಥವಾ ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ವಿರುದ್ಧ ಇದುವರೆಗೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ. ಆದರೆ ಈ ಇಬ್ಬರು ತಮ್ಮ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ.

ರಾಮ ಮಂದಿರ ದೇಣಿಗೆ ಲೂಟಿ ಆರೋಪಕ್ಕೆ ಸಂಬಂಧಿಸಿ ದಂತೆ ಉತ್ತರ ಪ್ರದೇಶ ಸರ್ಕಾರದ ನಿರ್ದೇಶನದ ಮೇರೆಗೆ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ನ ಸೆಕ್ಷನ್ 306, 316(5), 317(4), 317(5), 61 ಮತ್ತು 3(5) ಸೇರಿದಂತೆ ಹಲವು ಸೆಕ್ಷನ್ ಗಳಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಅಯೋಧ್ಯೆಯ ಮಾಜಿ ಎಸ್‌ಪಿ ಶಾಸಕ ಪವನ್ ಪಾಂಡೆ ಅವರು ರಾಮ ಮಂದಿರದಲ್ಲಿ 7 ಕೋಟಿಯಿಂದ 7.5 ಕೋಟಿ ರೂ.ಗಳವರೆಗೆ ದೇಣಿಗೆ ದುರುಪಯೋಗ ವಾಗಿದೆ ಎಂದು ಆರೋಪಿಸಿದ ನಂತರ ಪ್ರಕರಣದ ತನಿಖೆಗೆ ಉತ್ತರ ಪ್ರದೇಶ ಸರ್ಕಾರ ಎಸ್‌ಐಟಿ ರಚನೆ ಮಾಡಿದೆ.

ಅರ್ಚಕರು ಆಕ್ರೋಶ: ಅಯೋಧ್ಯೆಯ ರಾಮ ಮಂದಿರ ದೇಣಿಗೆ ಲೂಟಿ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ) ಗುರುವಾರ ಎಫ್‌ಐಆರ್ ದಾಖಲಿಸಿದ್ದು, ಈ ಬಗ್ಗೆ ಶುಕ್ರವಾರ ಅಯೋಧ್ಯೆಯ ಆಧ್ಯಾತ್ಮಿಕ ಸಮುದಾಯದಿಂದ ತೀವ್ರ ಪ್ರತಿಕ್ರಿಯೆ ಹುಟ್ಟುಹಾಕಿದೆ.

ಎಸ್‌ಐಟಿ ಈಗ ಅಧಿಕೃತವಾಗಿ ಎಫ್‌ಐಆರ್ ದಾಖಲಿಸುವ ಮೂಲಕ ಆರೋಪಿಗಳನ್ನು ಹೆಸರಿಸಿದೆ. ಈ ಬಗ್ಗೆ ಮಾಧ್ಯಮದ ಜೊತೆ ಮಾತನಾಡಿದ ಅಯೋಧ್ಯೆಯ ಸ್ಥಳೀಯ ಪುರೋಹಿತರು, ಲಕ್ಷಾಂತರ ಜನರ ನಂಬಿಕೆಗೆ ದ್ರೋಹ ಬಗೆದ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಸಾಮೂಹಿಕವಾಗಿ ಒತ್ತಾಯಿಸಿದರು.

ವಿಶೇಷ ತನಿಖಾ ತಂಡ(ಎಸ್‌ಐಟಿ) ತನಿಖಾ ಕಾನೂನು ಪ್ರಾತಿಯನ್ನು ಒಪ್ಪಿಕೊಂಡರೂ,

> ನಿಧಿಯ ದುರುಪಯೋಗದ ಆರೋಪದ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿರುವುದು ಸ್ವಾಗತಾರ್ಹ ಕ್ರಮ ರಾಮ ಮಂದಿರ ಪ್ರಪಂಚದಾದ್ಯಂತದ ಹಲವಾರು ಭಕ್ತರ ಪವಿತ್ರ ಸ್ಥಳವಾಗಿದೆ. ಅಂತಹ ಪವಿತ್ರ ಸ್ಥಳದಲ್ಲಿ, ಅಂತಹ ಅದ್ಭುತ ಅಪರಾಧ ನಡೆಯಬಾರದಿತ್ತು. ನಿಜವಾದ ಆರೋಪಿಗಳಿಗೆ ಶಿಕ್ಷೆಯಾಗಬೇಕು ಮತ್ತು ಸತ್ಯ ಹೊರಬರಬೇಕು. – **ಪೇಜಾವರ ಶ್ರೀಗಳು**

ಕೆಲವು ಅರ್ಚಕರು ಇನ್ನೂ ಹೆಚ್ಚು ಪರಿಣಾಮಕಾರಿ ಕ್ರಮಕ್ಕೆ ಒತ್ತಾಯಿಸುತ್ತಿದ್ದಾರೆ ಮತ್ತು ನ್ಯಾಯವನ್ನು ಖಚಿತಪಡಿಸಿಕೊಳ್ಳಲು ತ್ವರಿತ, ಪಾರದರ್ಶಕ ಹಾಗೂ ಇತರರಿಗೆ ಮಾದರಿಯಾಗುವಂತಹ ತೀರ್ಮಾನಕ್ಕೆ ಕರೆ ನೀಡುತ್ತಿದ್ದಾರೆ.

ತನಿಖೆಯ ಪ್ರಸ್ತುತ ವ್ಯಾಪ್ತಿಯ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ಆಧ್ಯಾತ್ಮಿಕ ವಾಗ್ಮಿ ಕರ್ಪಾತ್ರಿ ಮಹಾರಾಜ್, ನಾನು ಎಸ್‌ಐಟಿ ತನಿಖೆಯಿಂದ ತೃಪ್ತನಾಗಿಲ್ಲ... ನಾನು ಸಿಎಂ ಯೋಗಿ ಆದಿತ್ಯನಾಥ್‌ಗೆ ಕಠಿಣ ಕ್ರಮ ಕೈಗೊಳ್ಳುವಂತೆ ಹೇಳುತ್ತೇನೆ. ಅಂತಹ ಜನರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಮತ್ತು ಅವರನ್ನು ಅಯೋಧ್ಯೆಯಿಂದ ಹೊರಗಟ್ಟಬೇಕು ಎಂದು ಆಗ್ರಹಿಸಿದರು.

ಎಸ್‌ಐಟಿ ವರದಿ ಸಲ್ಲಿಸಿದ ನಂತರ ಎಫ್‌ಐಆರ್ ದಾಖಲಿಸಲಾಗಿದೆ. ಇದರಲ್ಲಿ ಎಂಟು ಜನರ ಹೆಸರಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ. ತಪ್ಪಿತಸ್ಥರು ಎಂದು ಕಂಡುಬಂದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಾಕೇತ್ ಭವನ ಪೀಠಾಧೀಶ್ವರ ಸೀತಾರಾಮ್ ದಾಸ್ ಜಿ ಮಹಾರಾಜ್ ಅವರು ಹೇಳಿದ್ದಾರೆ. ಅಲ್ಲದೆ ಈ ಪ್ರಕರಣವನ್ನು ಅತ್ಯಂತ ತುರ್ತಾಗಿ ಪರಿಗಣಿಸಬೇಕೆಂದು ಕರೆ ನೀಡಿದರು.

ಚಂಪತ್ ರಾಯ್ ರಾಜೀನಾಮೆ: ಅಯೋಧ್ಯೆ ರಾಮಮಂದಿರದಲ್ಲಿ ದೇಣಿಗೆ ಕಳ್ಳತನ ಆರೋಪದ ಬೆನ್ನಲ್ಲೇ ರಾಮ ಮಂದಿರ ಟ್ರಸ್ಟ್‌ನ ಉನ್ನತ ಹುದ್ದೆಯಲ್ಲಿದ್ದ ಚಂಪತ್ ರಾಯ್ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ್ದಾರೆ.

ಚಂಪತ್ ರಾಯ್ ಅವರು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅವರು ಮತ್ತು ಟ್ರಸ್ಟಿ ಅನಿಲ್ ಮಿಶ್ರಾ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಬಲವಾದ ನಿಲುವು ಮತ್ತು ಕಳ್ಳತನದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಪ್ರಾಥಮಿಕ ವರದಿಯನ್ನು ಸಲ್ಲಿಸಿದ ನಂತರ ರಾಜೀನಾಮೆ ನೀಡಲಾಗಿದೆ. ದೇಣಿಗೆ ದುರುಪಯೋಗದ ಆರೋಪದಲ್ಲಿ ಎಂಟು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಲ್ಲಿ ದೇವಾಲಯದ ಟ್ರಸ್ಟ್‌ನ ನಗದು ಎಣಿಕೆ ಸಿಬ್ಬಂದಿ, ಎಣಿಕೆ ಕಾರ್ಯಾಚರಣೆಯ ಮುಖ್ಯಸ್ಥ, ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಿದ ನಿವೃತ್ತ ಬ್ಯಾಂಕರ್ ಮತ್ತು ರಾಮಮಂದಿರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರ ಚಾಲಕ ಮತ್ತು ನಿಕಟ ಸಹವರ್ತಿ ರಾಮಶಂಕರ್ ಯಾದವ್ ಅಲಿಯಾಸ್ ತಿನ್ನು ಸೇರಿದ್ದಾರೆ.

ವಿಶೇಷ ತನಿಖಾ ತಂಡ (ಎಸ್‌ಐಟಿ) ತನ್ನ ಪ್ರಾಥಮಿಕ ವರದಿಯನ್ನು ಉತ್ತರ ಪ್ರದೇಶ ಸರ್ಕಾರಕ್ಕೆ ಸಲ್ಲಿಸಿದ ನಂತರ, ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕ್ರಿಮಿನಲ್ ಮೊಕದ್ದಮೆ ಹೂಡಲು ಪ್ರೇರೇಪಿಸಿದ ನಂತರ ಎಫ್‌ಐಆರ್ ದಾಖಲಿಸಲಾಗಿದೆ. ಆರೋಪಿಗಳ ವಿರುದ್ಧ ಕಳ್ಳತನ, ಕ್ರಿಮಿನಲ್ ನಂಬಿಕೆ ದ್ರೋಹ, ವಂಚನೆ ಮತ್ತು ಕ್ರಿಮಿನಲ್ ಪಿತೂರಿ ಸೇರಿದಂತೆ ಆರೋಪಗಳನ್ನು ಹೊರಿಸಲಾಗಿದೆ.

ಮೈಸೂರು ದಸರಾ ಕಂಬಳ–2026

ಮೈಸೂರು ಕಂಬಳ ಉತ್ಸವ ಆಯೋಜಿಸಲಾಗುತ್ತಿದ್ದು, ಅದಕ್ಕಾಗಿ ಕೋಣಗಳ ಮಾಲೀಕರಿಗೆ ಆಹ್ವಾನ ನೀಡ ಲಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ಮೇರೆಗೆ ಈ ಬಾರಿ ದಸರಾದಲ್ಲಿ ಮೈಸೂರು ಕಂಬಳ ನಡೆಸಲಾಗುತ್ತಿದೆ. ಕಳೆದ ವರ್ಷ ಬೆಂಗಳೂರಲ್ಲಿ ಉತ್ಸವ ಯಶಸ್ವಿಯಾಗಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ಕಂಬಳಕ್ಕೆ ಎರಡು ದಿನದಿಂದ 5ರಿಂದ 10 ಲಕ್ಷ ಜನ ಆಗಮಿಸುವ ಸಾಧ್ಯತೆಯಿದೆ ಎಂದು ತಿಳಿಸಿದರು.

ದಸರಾ ಕಂಬಳ ಉತ್ಸವಕ್ಕೆ ಮೈಸೂರಲ್ಲಿ ಎರಡು ಸ್ಥಳ ಗುರುತಿಸಲಾಗಿತ್ತು. ವಿಜಯನಗರದ ಐಶ್ವರ್ಯ ಪೆಟ್ರೋಲ್ ಬಂಕ್ ಸಮೀಪ ಎಂಡಿಎಗೆ ಸೇರಿದ 15 ಎಕರೆ ವಿಸ್ತೀರ್ಣದ ಕ್ರೀಡಾ ಮೈದಾನ ಹಾಗೂ ಸಾತಗಳ್ಳಿ ವಿಟಿಟಿಯು ಸಮೀಪದ 23 ಎಕರೆ ಮೈದಾನದಲ್ಲಿ ಯಾವುದಾದರು ಒಂದು ಸ್ಥಳ ನಿಗದಿ ಮಾಡಲು ನಿರ್ಧರಿಸಲಾಗಿತ್ತು. ವಿಜಯನಗರದ ಸ್ಥಳ ಮೈಸೂರು–ಹುಣಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವುದರಿಂದ ಹಾಗೂ ದಸರಾ ಸಂದರ್ಭದಲ್ಲಿ ವಿವಿಧ ಜಿಲ್ಲೆಗಳಿಂದ ಪ್ರವಾಸಿಗರು ಹುಣಸೂರು ಮುಖ್ಯ ರಸ್ತೆ ಮೂಲಕವೇ ಆಗಮಿಸುವುದರಿಂದ ಟ್ರಾಫಿಕ್ ಜಾಮ್ ಆಗುವ ಮತ್ತು ಕಂಬಳ ನೋಡಲು ಬರುವವರ ವಾಹನ ನಿಲುಗಡೆಗೆ ಸ್ಥಳಾಭಾವದ ಸಮಸ್ಯೆ ಉಂಟಾಗುವುದರಿಂದ ಸಾತಗಳ್ಳಿ ರಿಂಗ್ ರಸ್ತೆಗೆ ಸಮೀಪವಿರುವ ಸ್ಥಳದಲ್ಲಿ ಕಂಬಳ ಉತ್ಸವ ನಡೆಸಲು ನಿರ್ಧರಿಸಲಾಗಿದೆ. ಇಲ್ಲಿ 3500 ಸಾವಿರ ಕಾರು, ಸಾವಿರಾರು ದ್ವಿಚಕ್ರ ವಾಹನ ನಿಲುಗಡೆಗೆ ಸ್ಥಳಾವಕಾಶ ಇರುವುದರಿಂದ ಸಾತಗಳ್ಳಿ ಸ್ಥಳ ಸೂಕ್ತವಾಗಿದೆ. ಅಲ್ಲದೆ, ಆ ಸ್ಥಳದಿಂದ ಒಂದೂವರೆ ಕಿ.ಮೀ. ದೂರದಲ್ಲಿ ಯುವ ದಸರಾ ಕಾರ್ಯಕ್ರಮ ನಡೆಯುವುದರಿಂದ ಅಲ್ಲಿ ಕಾರ್ಯಕ್ರಮ ಮುಗಿಸಿ ಬಂದವರು ಕಂಬಳ ವೀಕ್ಷಿಸಲು ನೆರವಾಗಲಿದೆ ಎಂದರು.

ಮುಖ್ಯಮಂತ್ರಿ ಡಿ.ಕೆ.ಶಿಕುಮಾರ್ ದಸರಾಕ್ಕೆ ಬರುವ ಪ್ರವಾಸಿಗರಿಗೆ ಕಂಬಳ ಉತ್ಸವ ನೋಡುವಂತಿರಬೇಕು. ಕಂಬಳದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರವಹಿಸುವಂತೆ ಸಲಹೆ ನೀಡಿದ್ದಾರೆ. ಇದರಿಂದ ರಿಂಗ್ ರಸ್ತೆ ಬಳಿ ಕಂಬಳ ನಡೆಸಲಾಗುತ್ತಿದೆ ಎಂದು ತಿಳಿಸಿದರು.

200ಕ್ಕೂ ಹೆಚ್ಚು ಜೋಡಿ ಕೋಣ ಭಾಗಿ: ತುಳುನಾಡಿನ ಪ್ರಸಿದ್ಧ ಕಂಬಳ ಉತ್ಸವಗಳಲ್ಲಿ ಪಾಲ್ಗೊಂಡಿರುವ 200ಕ್ಕೂ ಹೆಚ್ಚು ಜೋಡಿ ಕೋಣಗಳು 'ಮೈಸೂರು ಕಂಬಳ' ಉತ್ಸವದಲ್ಲಿ ಪಾಲ್ಗೊಳ್ಳಲಿವೆ. ಈಗಾಗಲೆ ದಸರಾ ಮೈಸೂರು ಕಂಬಳ ಉತ್ಸವದ ಬಗ್ಗೆ ಮಾಹಿತಿ ನೀಡಲಾಗಿದ್ದು, ಮಂಗಳೂರು, ಪುತ್ತೂರು, ಕಾರ್ಕಳ, ಉಡುಪಿ, ಮೂಡಬಿದ್ರೆ, ಸುಳ್ಯ ಸೇರಿದಂತೆ ಸುತ್ತಮುತ್ತಲಿನ ಕೋಣಗಳ ಮಾಲೀಕರಿಗೆ ಆಹ್ವಾನ ನೀಡಲಾಗಿದೆ. ಈ ಉತ್ಸವ ಜನರು ಮತ್ತು ಕೋಣಗಳ ನಡುವೆ ಇರುವ ಬಾಂಧವ್ಯ ಪ್ರದರ್ಶಿಸುವ ಉತ್ಸವವಾಗಲಿದೆ ಎಂದರು.

ಎರಡು ಟ್ರ್ಯಾಕ್‌ನಲ್ಲಿ ಓಟ: ಕೋಣಗಳ ರೋಚಕ ಓಟದ ಸ್ಪರ್ಧೆಗೆ 250 ಮೀಟರ್ ಉದ್ದ, 50 ಅಡಿ ಅಗಲದ ಎರಡು ಟ್ರ್ಯಾಕ್ ನಿರ್ಮಿಸಲಾಗುತ್ತದೆ. ಆದರೆ, ಓಟಕ್ಕೆ 140 ಮೀಟರ್ ಅಂತರವನ್ನು ನಿಗದಿ ಮಾಡಲಾಗುತ್ತದೆ. ಅಕ್ಕ–ಪಕ್ಕ ಇರುವ ಟ್ರ್ಯಾಕ್‌ನಲ್ಲಿ ಏಕಕಾಲಕ್ಕೆ ಎರಡು ಜೋಡಿ ಕೋಣಗಳು ಓಡಲಿದ್ದು, ಅದರಲ್ಲಿ ಗೆದ್ದ ಜೋಡಿ ಮುಂದಿನ ಸುತ್ತಿಗೆ ಅರ್ಹತೆ ಪಡೆಯಲಿವೆ. ದಕ್ಷಿಣ ಕನ್ನಡದಲ್ಲಿ ನಡೆಸುವ ಮಾದರಿ ಹಾಗೂ ನಿಯಮಾವಳಿ ಮೈಸೂರು ಕಂಬಳ ಉತ್ಸವಕ್ಕೂ ಅನ್ವಯವಾಗಲಿದ್ದು, 48 ಗಂಟೆ ಸತತ ಕಂಬಳ ಉತ್ಸವ ನಡೆಯಲಿದೆ ಎಂದು ತಿಳಿಸಿದರು.

ಕೋಣಗಳೊಂದಿಗೆ ಅದರ ಪಾಲಕರು, ಕುಟುಂಬ ಸದಸ್ಯರು ಆಗಮಿಸಲಿದ್ದಾರೆ. ಅಲ್ಲದೆ, ಕೋಣಗಳಿಗೆ ಕುಡಿಯಲು ಒಂದು ಟ್ಯಾಂಕರ್‌ನಲ್ಲಿ ನೀರು ತರಲ್ಲಿದ್ದಾರೆ. ಕೋಣಗಳನ್ನು ಕರೆತರುವಾಗ ಮಾರ್ಗ ಮಧ್ಯೆ ಮಡಿಕೇರಿಯಲ್ಲಿ ಎರಡು ಗಂಟೆ ವಿಶ್ರಾಂತಿ ನೀಡಲಿದ್ದು, ಅಲ್ಲಿ ಸ್ಥಳೀಯರು ಕೋಣಗಳಿಗೆ ಬೇಕಾದ ಉಪಚಾರ ಮಾಡುವುದಾಗಿ ತಿಳಿಸಿದ್ದಾರೆ. ಕಂಬಳ ಉತ್ಸವಕ್ಕೆ ಒಂದು ದಿನ ಮೊದಲೇ ಕೋಣಗಳು ಮೈಸೂರು ತಲುಪಿ, ತಾಲೀಮು ನಡೆಸಲಿವೆ. ವಿಜೇತ ಜೋಡಿಗೆ ಸಂಪ್ರದಾಯದಂತೆ ಚಿನ್ನದ ಉಡುಗೊರೆ ನೀಡಲಾಗುತ್ತದೆ ಎಂದು ಹೇಳಿದರು. ಸ್ಥಳ ಪರಿಶೀಲನೆ ವೇಳೆ ಡಿಸಿಪಿಗಳಾದ ಡಾ.ಹರ್ಷ ಪ್ರಿಯಂವದ, ಕೆ.ಎಸ್. ಸುಂದರ ರಾಜ್, ಉಪವಿಭಾಗಾಧಿಕಾರಿ ಆಶಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಿ.ಸುದರ್ಶನ್, ಕಂಬಳ ಸಮಿತಿಯ ಪದಾಧಿಕಾರಿಗಳಾದ ವಿಜಯ್‌ಕುಮಾರ್, ಮುರುಳೀದರ ರೈ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಕಂಬಳಕ್ಕೆ ಉಚಿತ ಪ್ರವೇಶ

ಕಂಬಳ ಟ್ರ್ಯಾಕ್ ನಿರ್ಮಾಣಕ್ಕೆ ಮೂರು ತಿಂಗಳು ಸಮಯಾವಕಾಶ ಬೇಕಾಗುತ್ತದೆ. ದೈವ ಶಕ್ತಿಯ ಆರಾಧನೆ, ಪೂಜೆಯೊಂದಿಗೆ ಸ್ಥಳ ಸಿದ್ಧ ಮಾಡುವ ಕಾರ್ಯ ಆರಂಭಿಸಲಾಗುತ್ತದೆ. ಬಳಿಕ ಟ್ರ್ಯಾಕ್ ನಿರ್ಮಿಸಲಾಗುತ್ತದೆ. ಕಂಬಳಕ್ಕೆ ಬೇಕಾದ ನೀರು ಸರಬರಾಜಿಗೆ ಸ್ಥಳದಲ್ಲಿ 3ರಿಂದ 4 ಬೋರ್‌ವೆಲ್ ಕೊರೆಸಲಾಗುತ್ತದೆ. ಟ್ರ್ಯಾಕ್‌ಗೆ ಸ್ಥಳೀಯ ಮಣ್ಣಿನೊಂದಿಗೆ ಮರಳು, ಎಂ–ಸ್ಯಾಂಡ್ ಬಳಸಲಾಗುತ್ತದೆ. ಕಂಬಳದೊಂದಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಆಹಾರ ಮೇಳದಲ್ಲಿ ವಿವಿಧ ಬಗೆಯ ಸಾಂಪ್ರದಾಯಿಕ ಆಹಾರ ಲಭ್ಯವಿರುತ್ತದೆ. ಸಾರ್ವಜನಿಕರು ಉಚಿತವಾಗಿ ಕಂಬಳ ವೀಕ್ಷಿಸಬಹುದಾಗಿದೆ. ಮೈಸೂರು ಕಂಬಳಕ್ಕೆ 5ರಿಂದ 8 ಕೋಟಿ ಖರ್ಚಾಗುವ ಸಂಭವವಿದೆ.

– **ಅಶೋಕ್ ಕುಮಾರ್ ರೈ**, ಶಾಸಕ ಹಾಗೂ ಅಧ್ಯಕ್ಷರು, ಕಂಬಳ ಸಮಿತಿ

ಆಟವಾಡಿದರೆ ಪರಿಣಾಮ ನೆಟ್ಟಗಿರಲ್ಲ!

ನಂಬಿಕೆಯ ಸಂಕೇತವಾಗಿದೆ. ಯಾರೂ ಅಯೋಧ್ಯೆಯತ್ತ ವಕ್ರದೃಷ್ಟಿ ಬೀರಬಾರದು. ಶ್ರೀರಾಮನನನ್ನು ಗೌರವಿಸುವುದನ್ನು ಕಲಿಯಿರಿ. ಈ ಹಗರಣದ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ ಮತ್ತು ಅದರ ವರದಿ ಬಂದ ತಕ್ಷಣ ಕಠಿಣ ಕ್ರಮ ತೆಗೆದುಕೊಳ್ಳಲಿದ್ದೇವೆ ಎಂದು ನಾವು ಮೊದಲೇ ಹೇಳಿದ್ದೆವು ಎಂದು ನೆನಪಿಸಿದರು.

ಎಸ್‌ಐಟಿ ಸಲ್ಲಿಸಿದ ಪ್ರಾಥಮಿಕ ವರದಿಯ ಬೆನ್ನಲ್ಲೇ ಆರೋಪಿಗಳ ವಿರುದ್ಧ ತಕ್ಷಣವೇ ಕಾನೂನು ಕ್ರಮ ಜರುಗಿಸಲಾಗಿದೆ ಎಂದು ಯೋಗಿ ತಿಳಿಸಿದರು.

ನಾನು ನಿಮಗೆ ಭರವಸೆ ನೀಡುತ್ತೇನೆ. ಈ ಪ್ರಕರಣದಲ್ಲಿ ಸತ್ಯ ಮತ್ತು ಸುಳ್ಳನ್ನು ನಾವು ಸಂಪೂರ್ಣವಾಗಿ ಬೇರ್ಪಡಿಸಿ ಸಾರ್ವಜನಿಕರ ಮುಂದೆ ಇಡಲಿದ್ದೇವೆ. ಸಾರ್ವಜನಿಕರ ಧಾರ್ಮಿಕ ಭಾವನೆಗಳೊಂದಿಗೆ ಆಟವಾಡುವುದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ಯಾರೇ ಆಗಲಿ ಸನಾತನ ಧರ್ಮದ ಪವಿತ್ರ ನಂಬಿಕೆಯನ್ನು ಕೆಡಿಸಲು ಅಥವಾ ಅದರೊಂದಿಗೆ ತಮಾಷೆ ಮಾಡಲು ಯತ್ನಿಸಿದರೆ, ಅವರು ಅದರ ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಇಂತಹ ದೇಶದ್ರೋಹಿ ಮತ್ತು ಧರ್ಮದ್ರೋಹಿ ಕೆಲಸ ಮಾಡುವ ಯಾರಿಗೇ ಆದರೂ ಯಾವುದೇ ರೀತಿಯ ವಿನಾಯಿತಿಯನ್ನು ನೀಡಲು ಸಾಧ್ಯವೇ ಇಲ್ಲ ಎಂದು ಅವರು ಎಚ್ಚರಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITE FOR SALE
Nithyanandha sagara Phase-1 30x40 Face E/ South MUDA Approved
9611074123

ತಕ್ಷಣ ಬೇಕಾಗಿದ್ದಾರೆ
ಬೇಸಿಕ್ ಕಂಪ್ಯೂಟರ್ ತಿಳಿದಿರುವ ಟೆಲಿಕಾಲರ್/ ಆಫೀಸ್ ಕೆಲಸಕ್ಕೆ/ಪಿಯುಸಿ/ಡಿಗ್ರಿ/ 25–45 ವರ್ಷದ ಮಹಿಳೆಯರು ಮಾತ್ರ, ಮೈಸೂರು ಮಾತ್ರ.
80881 76022

SITE FOR SALE
30x40 N/F
Gayatri Layout (Attach R.T. Nagar)
98802 73834

SITE FOR SALE
40X60 MUDA DATTAGALLI
Call: 9880273834

HOUSE FOR SALE
30x40 Duplex, Dattagalli, (Near Christ Public School)
98802 73834

ಶ್ರೀ ಬಾಲಾಜಿ ಟೂರಿಸ್ಟ್
7.8.26: 3 ದಿನ: ಕಾಮಾಕ್ಷಿದೇವಿ ಶಕ್ತಿಪೀಠ, ನವಗ್ರಹ, ಬ್ರಹ್ಮದತ್ತ ಉಪನಾಸಂದ ಶಿವಶಕ್ತಿಪೀಠ, ಶ್ರೀಮಾತಂಕರ ಜ್ಯೋತಿರ್ಲಿಂಗ, ಚಾಲಾವ ಮಂದಿರ, ವಿಷ್ಣು ಮಂದಿರ 23.8.26: 7 ದಿನ: ರಾಮೇಶ್ವರ, ಕನ್ಯಾಕುಮಾರಿ, ಕಂಚಿ, ಶ್ರೀರಂಗಂ, ಮಧುರೈ, ತಂಜಾವೂರು, ಬೇಲೂರು 17.9.26: 7 ದಿನ: ದೆಹಲಿ, ಆಗ್ರಾ, ಅಯೋಧ್ಯೆ, ಕಾಶಿ, ಮಥುರಾ, ಬೃಂದಾವನ, ಪ್ರಯಾಗ್‌ರಾಜ್, ಗಯಾ 23.10.26: 8 ದಿನ: ಕೊಲ್ಹಾಪುರ, ಪಂಡರಾಪುರ, ಶಿರಡಿ ...
9945770486

ಡ್ರೈವರ್ ಬೇಕಾಗಿದ್ದಾರೆ
ಆಟೋ ಗೇರ್ SUV ಕಾರ್ ಚಲಾಯಿಸಲು ಡ್ರೈವರ್ ಬೇಕಾಗಿದ್ದಾರೆ. ಸಂಬಳ ಮಾಸಿಕ ರೂ. 15,000/–, ಸಂಪರ್ಕಿಸಿ
6364748485

60x40 ಮನೆ ಮಾರಾಟಕ್ಕಿದೆ.
30x50 ಮನೆ ಮಾರಾಟಕ್ಕಿದೆ.
30x40 ಮನೆ ಮಾರಾಟಕ್ಕಿದೆ
20x30 ಮನೆ ಮಾರಾಟಕ್ಕಿದೆ
30x50 ಮನೆ ಮಾರಾಟಕ್ಕಿದೆ
ವಿವೇಕಾನಂದ ಸರ್ಕಲ್
9008711654

ಉದ್ಯೋಗಾವಕಾಶ
"ಸೈಟ್ ಸೂಪರ್‌ವೈಸರ್" ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅರ್ಹತೆ:– ಪಿಯುಸಿ, ಬಿ.ಇ, ಸಿವಿಲ್ ಇಂಜಿನಿಯರ್, ಡಿಪ್ಲೋಮ & ಯಾವುದೇ ಡಿಗ್ರಿ ಅನುಭವವುಳ್ಳ ನುರಿತರು ಅಥವಾ ಆಸಕ್ತಿಯುಳ್ಳ ಹೊಸಬರಿಗೆ ಆದ್ಯತೆ. ಸಂಬಳ :15,000/– (ಹೊಸಬರಿಗೆ) 20,000/– (ಅನುಭವವುಳ್ಳವರಿಗೆ) ಊಟ ಮತ್ತು ವಸತಿ ಒದಗಿಸಲಾಗುವುದು.
97319 50606

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಸರಸ್ವತಿಪುರಂ ವಿಜಯನಗರದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು ವಯೋಮಿತಿ : 50 ವರ್ಷದೊಳಗೆ
ಸಂಬಳ : 27,000/-(26 ದಿನಗಳು)
ESI, PF , ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

FOR SALE
30x40 Site & Commrcial Property @ Dattagalli
23x35 G+1 House @ Srirampura
40x60 Commercial Property @ BEML Arch, Srirampura
30x40 Site @ Bogadi, SBM Layout Attach
40x60 Site @ Sharadha Layout &
30x40 Duplex House @ JP Nagar
30x40 House @ Vidyaranya Prm
95386 90359, 90359 90359

ಮನೆ ಶಿಕ್ಷಕರು
ಮೈಸೂರು ಜಯನಗರದಲ್ಲಿ ವಾಸಿಸುವ ನನ್ನ ಮಗಳು 9ನೇ ತರಗತಿಯಲ್ಲಿ (St Joseph central school, Vijayanagar) ಓದುತ್ತಿರುವ ಮಗಳಿಗೆ ಮನೆಗೆ ಬಂದು ಪಾಠ ಹೇಳುವ ಅನುಭವ ಹೊಂದಿರುವ ಶಿಕ್ಷಕಿ ಬೇಕಾಗಿದ್ದಾರೆ. ಸ್ಥಳ : ಜಯನಗರ, ಮೈಸೂರು. ತರಗತಿ : 9ನೇ ತರಗತಿ, ಸಮಯ : ಸಂಜೆ 7:00 ರಿಂದ 9:00 ಗಂಟೆಯ ನಡುವೆ ಆಸಕ್ತ ಶಿಕ್ಷಕರು ದಯವಿಟ್ಟು ಸಂಪರ್ಕಿಸಿ.
9449825074

SVM
HOME CONSTRUCTION START AT RS. 1675/-
9945676765

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ, ಕಡಕೊಳ ವಿಭಾಗದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು ವಯೋಮಿತಿ : 50 ವರ್ಷದೊಳಗಿನವರು ಸಂಬಳ: 18500 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿದೆ.
9620777819

MUDA / DTCP SITES
ತಕ್ಷಣ ಮನೆ ಕಟ್ಟಲು ಬಿಡಿ ಲೇಔಟ್‌ನಲ್ಲಿ
ಟಿ.ಎನ್. ಮಠ ಪಕ್ಕದ ಚಿಕ್ಕಳ್ಳಿ ಹತ್ತಿರ, 22.3 ಲಕ್ಷ ವಸಂತನಗರ ಪೊಲೀಸ್ ಲೇಔಟ್ ಪಕ್ಕ 32 ಲಕ್ಷ ಮಾನಸನಗರ ಪಕ್ಕ ವಿದ್ಯಾವಿಕಾಸ 34 ಲಕ್ಷ ಬೋಗಾದಿ ಟ್ರೆಂಡ್ ಫ್ಲಾಟ್ ಹತ್ತಿರ 30 ಲಕ್ಷ ವಿಜಯನಗರ 4ನೇ ಸ್ಟೇಜ್ ಪಕ್ಕ 64 ಲಕ್ಷ ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ.
Mob: 8123075038
Brokers Excuse. 0% commission.

ಇಂಡಿಪೆಂಡೆಂಟ್ ಮನೆ ಭೋಗ್ಯಕ್ಕೆ ಇದೆ
2 ರೂಮ್‌ಗಳು, ಉತ್ತರದಿಕ್ಕಿನ, ಪೂರ್ವಕ್ಕೆ ಬಾಗಿಲು, 30x35ರ 100% ವಾಸ್ತು, ಸೋಲಾರ್, Tank Sumpಗಳುಳ್ಳ ಮನೆ 8 ಲಕ್ಷ ಭೋಗ್ಯಕ್ಕೆ ಇದೆ(Negotiable) ಸಿದ್ದರಾಮಯ್ಯ ಸರ್ಕಲ್ ಹತ್ತಿರ, University Layoutನಲ್ಲಿ, ಲಿಂಗಾಂಬುದಿ ಪಾಳ್ಯ.
9980353445
7676357395


ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ ಷೂಗಳು, ಸಾಕ್ಸ್ ಬ್ಯಾಗ್‌ಗಳು
1 ಜೊತೆ ಷೂಕೊಂಡಲ್ಲಿ 1 ಜೊತೆ ಸಾಕ್ಸ್ ಉಚಿತ
ಫಾಶನ್ಸ್ ಶ್ರೀಗಣೇಶ್

ಟೀಚರ್ಸ್ ಟ್ರೈನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕಾ ? SSLC ಪಾಸ್ PUC, Degree ಪಾಸ್/ಫೇಲ್! NURSERY TEACHERS TRAINING PRIMARY TEACHERS TRAINING ಟ್ರೈನಿಂಗ್ ನಂತರ ತಕ್ಷಣ ಕೆಲಸ, ಬಸ್ಸು, ಫೀಸ್, ಹಾಸ್ಟೆಲ್, ಸಂಪಾದಿಸಿ ನಿಮ್ಮ ವಿದ್ಯಾಭ್ಯಾಸ ಜೊತೆಗೆ ಈ ಕೋರ್ಸ್ ಸುಲಭ ಮಾಡಿಸುವ, ವಿವರಗಳಿಗೆ watsapp
9113980741

COMMERCIAL SITE SALE
ಗದ್ದಿಗೆ ಮುಖ್ಯ ರಸ್ತೆ, ಮಾದಹಳ್ಳಿ 80 ಅಡಿ ರಸ್ತೆಗೆ 2250 sqt (30x75) ಅಡಿಯಲ್ಲಿರುವ Commercial ಜಾಗ ಸೇಲ್‌ಗೆ ಇದೆ. Price per sqt 2600
8884616461
8073300783

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Ankithana Road, kuvempunagar, Mysuru
MYSURU 9591311161 BANGALORE 9901910161


ಬಣ್ಣದ ಕೆಲಸ, ಮರದ ಪಾಲಿಶ್ & ನಲ್ಲಿ ಕೆಲಸ ಮಾಡಿಕೊಡಲಾಗುವುದು.
99728 13003

ARYAN ASSOCIATES
TAX, ACCOUNTS & FINANCIAL CONSULTANTS
Services Offered: Financial Statement Preparation, Income Tax Returns, GST Registration & Returns, TDS, PF & ESI Registration & Returns, Accounting & Book keeping Services, Contact Number
8553050040

S.K. CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ ಕಟ್ಟಬೇಕೆ ಚಿಂತೇ ಬೇಡ. Approved Plan 3D-Elevation. ಇಂಟೀರಿಯರ್ ಡಿಸೈನ್ & Work Construction ಮತ್ತು ಅಲ್ಟ್ರೇಶನ್ ಸಹಿತ ಮಾಡಿಕೊಡುತ್ತೇವೆ.
9620528490

ಸಂಪು, ಟ್ಯಾಂಕ್ ಕ್ಲೀನಿಂಗ್, ಕೋರ್ ಕಟಿಂಗ್, ಸೋಲಾರ್ ಸರ್ವೀಸ್, ಸ್ಲಾಬ್ ಕಟಿಂಗ್, ಗ್ಯಾಸ್ ಲೈನ್, ಫ್ಲಮಿಂಗ್ ವರ್ಕ್.
6362150462
7795749881

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279



SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

30x30 ಮತ್ತು 30x40 ಸೈಟುಗಳು ಮಾರಾಟಕ್ಕಿದೆ
ವರುಣ ಊರಿಗೆ ಹೊಂದಿಕೊಂಡಿದೆ. ರಿಂಗ್ ರಸ್ತೆಯಿಂದ 6 ಕಿ.ಮೀ. ಕೆ.ಆರ್.ವೃತ್ತದಿಂದ 12 ಕಿ.ಮೀ. ಟಿ ನರಸೀಪುರ ರಸ್ತೆ, ಮೈಸೂರು
9964923399

WANTED HELPING
Staffs(Females) for a Clinic in Gokulam. SSLC Pass/Fail Can also apply, Contact immediately
8105912167

ಬೇಕಾಗಿದ್ದಾರೆ
ಹೆಬ್ಬಾಳ್ ಮತ್ತು ಮೈಸೂರು ಸಿಟಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸೌಲಭ್ಯಗಳು : ಇ.ಎಸ್.ಐ ಮತ್ತು ಪಿ.ಎಫ್. ಹೆಚ್ಚಿನ ಮಾಹಿತಿಗಾಗಿ
7892441955

30X40 ಸೈಟು ಮಾರಾಟಕ್ಕಿದೆ
ಕೆ.ಆರ್. ವೃತ್ತದಿಂದ 8 ಕಿ.ಮೀ. ದೇವೇಗೌಡ ವೃತ್ತದಿಂದ 2.5 ಕಿಮಿ. ವಿದ್ಯಾವಿಕಾಸ್ ಕಾಲೇಜಿನಿಂದ 1.5 ಕಿ.ಮೀ. ಬನ್ನೂರು ರಸ್ತೆ, ಮೈಸೂರು
9964923399

FOR SALE
40x60 SITE
Vijayanagar 4th Stage.
8884133677

ಜಮೀನು ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ತಾಲ್ಲೂಕು, ಕೊಲ್ಲೇಗೌಡನಹಳ್ಳಿ ಸರ್ಕಲ್ ಹತ್ತಿರ ಮೈಸೂರು – ಮಾನಂದವಾಡಿ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ 1 ಎಕರೆ ಕೃಷಿ ಭೂಮಿ ಮಾರಾಟಕ್ಕಿದೆ ದಲ್ಲಾಳಿಗಳಿಗೆ ಅವಕಾಶವಿಲ್ಲ ಆಸಕ್ತರು ನೇರವಾಗಿ ಸಂಪರ್ಕಿಸಿ
ಮೊ. : 9980907989, 9449885857

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

A TO Z
WE BUY OLD FURNITURE'S OLD VESSEL'S, UPS BATTERY, ELECTRIC ITEM, OLD SOLAR SET, GENERATOR AND OTHER SCRAP ITEM'S CALL - ANAND
9900945675

SITE BUY & SALE
MUDA Approved
Ananda Sagara
Pragathi Nagar
Nityanand Sagara
Paramanand Sagara
Kuberananda Sagara
30x40 50x80 & 40x60
JK 8951144240

MUDA SITE FOR SALE
30/60 N/F Dattagalli Mahamane circle
30/50 Site Dattagalli near RT nagara
30/40 3BHK DUPLEX HOME FOR SALE in Dattagalli
9900464111



9901291267 / 9148991267

30x40 SITE FOR SALE
NEAR JP NAGAR RING ROAD 30x40 SITE FOR SALE NEAR VISHNU-VARDHAN SMARAKA HD KOTE Main Road.
9880344263

FOR SALE
1236 sq.ft. commercial site on Chamundipuram Main Road, Near Nanjumalige Circle.
7899214181

ಬೇಕಾಗಿದ್ದಾರೆ
ನ್ಯೂ ಶಾರದ ರೆಸಾರ್ಟ್ ಕೆಆರ್.ಎಸ್ ರೋಡ್
1) ಹೆಡ್ ಕುಕ್ ಆಲ್ ರೌಂಡ್
2) ಸ್ಟೀವರ್ಡ್, 3) ಕ್ಯಾಪ್ಟನ್
4) ಅಕೌಂಟೆಂಟ್
9880185785

SITE FOR SALE
20x30 West Facing Vijayanagar 4th Stage, 2nd Face S.No 10980, Near Marimallappa School,
7795349907
9945914127

SITES FOR SALE
East Facing 30x62 - U.B. City, Vijaynagar 4th Stage, 40x90 South West Corner, Niveditha Nagar
9538272726

SITE & HOUSE FOR SALE
850, Sqft E/F CFTRI Layout Bogadi 20x30, N/F Ground and first floor Ramakrishna Nagar.
Call: 9741561111

ಕಳೆದಿದೆ
ಮುಬೀನ್ ತಾಜ್, ಇವರಿಗೆ ಸೇರಿದ ಹಂಚ್ಯಾ ಸಾತಗಳ್ಳಿ 'A' ವಲಯ ನಿವೇಶನ ಸಂಖ್ಯೆ 104 ಅಳತೆ 6x9 ಮೀ ಸ್ವತ್ತಿನ ಮಂಜೂರಾತಿ ಪತ್ರವು ಕಳೆದಿದ್ದು, ಸಿಕ್ಕವರು ಸಂಪರ್ಕಿಸಿ –
7829244685

FOR SALE
40X60 NORTH FACING NEAR ROTARY SCHOOL DATTAGALLI MUDA APPROVED
9480606154
9448324232

SITE FOR SALE
1) 20X30 N/F HUNSUR ROAD, 18 LAKHS
2) 30X60 N/F HUNSUR ROAD, 45 LAKHS
3) 30X40 N/F HUNSUR ROAD, 19 LAKHS
CONTACT : VIJAYA PROPERTIES
9986004007
8722337733
(AGENTS WELCOME)

ಬೇಕಾಗಿದ್ದಾರೆ
PGಯಲ್ಲಿ ಅಡುಗೆ ಸಹಾಯಕಿ (HELPER) ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲೇ ಉಳಿಯಬೇಕು. ಊಟ ವಸತಿ ಇರುತ್ತದೆ.
9986622769
9900944982

ಹೊಸ ಮನೆ ಮಾರಾಟಕ್ಕಿದೆ
30x40, North Face, East door, Ground Floor & First Floor, All Teak with Borwell, ಶಕ್ತಿನಗರ ಪಾರ್ಕ್ ಹತ್ತಿರ, ಸಾತಗಳ್ಳಿ, ಮೈಸೂರು
9880623476

ಸೈಟು / ಮನೆ ಕೊಳ್ಳಲು / ಮಾರಲು ಸೈಟುಗಳು ಮಾರಾಟಕ್ಕಿದೆ
40x60 N/W VYASTI URBANE LAYOUT
40X60 S/F ROOPANAGARA
40X60 W/F HIGHLANDS LAYOUT
30x40 W/F PRAKRUTHI ENCLAVE
9538412881

SITE FOR SALE
50X53 SOUTH-EAST CORNER, PARK FACING ATTACHED TO POLICE LAYOUT, 100 METER FROM T NARASIPURA MAIN ROAD
9880311785

DTCP APPROVED SITES FOR SALE
MANUGAHALLI
20X30 =1350000
30X40 =2700000
READY TO REGISTER, BANK LOAN AVAILABLE CONTACT
9483067223

SITE FOR SALE
MUDA APPROVED
30X40 NORTH EAST CORNER
30X40 WEST FACING, BOGADI PATTANA PANCHAYATHI, E KATHA, K. HEMMANALLI, HUYILALU MAIN ROAD
9844130293

ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತಾ ಮುತ್ತ ಕೈಗಾರಿಕಾ ಪ್ರದೇಶಗಳಲ್ಲಿ ಹಾಗೂ ಕಾರ್ಖಾನೆಗಳಲ್ಲಿ, ಎಲೆಕ್ಟ್ರಿಕಲ್ ಕಂಪನಿಗಳಲ್ಲಿ, ಹಾಸ್ಪಿಟಲ್‌ಗಳಲ್ಲಿ, ಸ್ಕೂಲ್‌ಗಳಲ್ಲಿ, ಕೆಲಸ ಮಾಡಲು. ಸೆಕ್ಯೂರಿಟಿಗಳು, ಹೌಸ್‌ಕೀಪಿಂಗ್‌ಗಳು, Helperಗಳು, ಹೂಟಗಳ್ಳಿ, ಹೆಬ್ಬಾಳು ಮೆಟಗಳ್ಳಿ, ದಟ್ಟಗಳ್ಳಿ, ಇಲ್ಲಿ ಕೆಲಸ ಮಾಡಲು. ಮಹಿಳೆಯರು, ಪುರುಷರು, ತಕ್ಷಣ ಬೇಕಾಗಿದ್ದಾರೆ. ESI & PF ಸೌಲಭ್ಯ ವಿರುತ್ತದೆ. ಸಂಪರ್ಕಿಸಿ :
9611208553
7795367205

1000 Sq.ft. Commercial Space on Rent / Lease / Joint Venture
For Clinic / Pharmacy Distributorship etc. 1st floor Manandwadi Main Road Opp. Ashokapuram Railway Station
9243505777
mugadur.gsi@gmail.com

ವಾಣಿಜ್ಯ ನಿವೇಶನ ಮಾರಾಟಕ್ಕಿದೆ
1) 50'x80' ಪಶ್ಚಿಮ ಮುಖ, ಆದಿಚುಂಚನಗಿರಿ 80' ಅಡಿ ಮುಖ್ಯರಸ್ತೆ, KHB Vನೇ ಫೇಸ್ ಕುವೆಂಪುನಗರ, ನಿಯರ್ ಅಗರವಾಲ್ ಕಣ್ಣಿನ ಆಸ್ಪತ್ರೆ ಹತ್ತಿರ, ಮೈಸೂರು, 2) 45'x60' ಉತ್ತರಮುಖ 80 ಅಡಿ ರಸ್ತೆ K.S.R.T.C ಬಸ್ ಡಿಪೋ ಹತ್ತಿರ A1 ಕಾರ್‌ಕೇರ್ 'N' ಬ್ಲಾಕ್ ಕುವೆಂಪುನಗರ, ಮೈಸೂರು
9448166798

SITE FOR SALE
40X60 North Suvarna Nagar
Call: 9740088990

PUC ಓದಿರುವಂತಹ ಹುಡುಗರು ಬೇಕಾಗಿದ್ದಾರೆ
ಮಾರ್ಕೆಟಿಂಗ್ ಕೆಲಸಕ್ಕಾಗಿ ಉತ್ತಮ ಸಂಬಳ ಹಾಗೂ Incentive ಇರುತ್ತದೆ. ಸ್ಥಳ: Hunsur, K.R Nagar, Nanjangudu, Periyaptna, H.D Kote, Mysore city.
ವೈಷ್ಣವಿ ಎಂಟರ್ ಪ್ರೈಸಸ್
7996667678
7996667679

ಸೈಟ್‌ಗಳು ಮಾರಾಟಕ್ಕಿವೆ
30x50 ಸೈಟ್–ರಾಘವೇಂದ್ರನಗರ.
30x40 ಸೈಟ್–ವರುಣ.
20x60 ಸೈಟ್–ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ
20x30 ಸೈಟ್–ಬನ್ನೂರು ರಸ್ತೆ (opp. R V School)
7975597049
9632071471

ನಿವೇಶನ ಬಾಡಿಗೆಗೆ ಇದೆ
ಶ್ರೀರಂಗ ಪಟ್ಟಣ ನಗುವನಹಳ್ಳಿ ಗೇಟ್ ಬೆಂಗಳೂರು ಮೈಸೂರು ರಸ್ತೆ. ಸ್ವತ್ತಿನ ಸಂಖ್ಯೆ 128, 43,000 ಚ.ಅಡಿ ವಿಸ್ತೀರ್ಣವುಳ್ಳ ನಿವೇಶನದಲ್ಲಿ ಬಿಲ್ಡಿಂಗ್ ಮತ್ತು ಖಾಲಿ ನಿವೇಶನಕ್ಕೆ ನೀರಿನ ಸೌಲಭ್ಯ ವಿದ್ಯುಚ್ಛಕ್ತಿ ಇರುವ ಸ್ಥಳ; ಬಾಡಿಗೆಗೆ ದೊರೆಯುತ್ತದೆ.
9986973595

ಬೇಕಾಗಿದ್ದಾರೆ
ಕಾಫಿ ಎಸ್ಟೇಟ್ ನಲ್ಲಿ ಕೆಲಸ ಮಾಡಲು ಅನುಭವವಿರುವ ಸಂಸಾರಸ್ಥ ರೈಟರ್ ಬೇಕಾಗಿದ್ದಾರೆ. ಸ್ಥಳ: ಕೊಡಗು ಜಿಲ್ಲೆ, ವಿದ್ಯಾಹರ್ತೆ: ಎಸ್‌ಎಸ್‌ಎಲ್‌ಸಿ
9880380970
8762153947

2ನೇ ಸಂಬಂಧಕ್ಕೆ ಶ್ರೀಮಂತ ವರನಿಗೆ ವಧು ಬೇಕಾಗಿದ್ದಾರೆ
ಲಿಂಗಾಯತ Age: 35/5.4/m.s.w Working as Bank Manager, Salery: 1 ಲಕ್ಷಕ್ಕಿಂತ ಅಧಿಕ Independent & Well Settled ಇರುವಂತಹ ಮಕ್ಕಳಿಲ್ಲದಂತಹ ವರನಿಗೆ 2ನೇ ಸಂಬಂಧಕ್ಕೆ ಯಾವುದೇ ಜಾತಿಯ ಅಭ್ಯಂತರವಿಲ್ಲ. ವಿಧವೆ । ವಿಚ್ಛೇದಿತೆ । ನೌಕರಸ್ಥೆ । ವ್ಯಾಪರಸ್ಥೆ । ವಧು ಬೇಕಾಗಿದ್ದಾರೆ. ಮಕ್ಕಳಿದ್ದರೂ ಪರವಾಗಿಲ್ಲ. ಬೆಂಗಳೂರು:
9742458242

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

DOCUMENT LOST
Sameena Tabassum, Residing at No 21, EWS 10th Cross, 1st Stage, Rajivnagar, Mysore-570003, I have lost my Hudco Allotment Letter Application No 07, Identification : House SL No 02, Ward No 02. date 03-12-1988, lost at in my House, Finders pls Contact: 8105184040

ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ ವತಿಯಿಂದ
ಧಾರ್ಮಿಕ ಯಾತ್ರೆ
ಅಮರನಾಥ ಹಾಗೂ ವೈಷ್ಣವಿ ದೇವಿ ಯಾತ್ರಾ ಆಗಸ್ಟ್ ತಿಂಗಳಲ್ಲಿ ಕೇವಲ 11300 ರೂ. ಮಾತ್ರ 5 ಸಾವಿರ ಸಹಾಯ ಧನ ಪಡೆಯುವ ಅವಕಾಶ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಕ್ಕೆ
9964683183

ಪ್ರವೇಶಕ್ಕೆ ಕೊನೆಯ ದಿನಾಂಕ:30 ಜೂನ್ 2026
ಜಯಲಕ್ಷ್ಮೀದೇವಿ ಪಿಯು ಕಾಲೇಜು
ರಾಮಕೃಷ್ಣ ನಗರ, ಮೈಸೂರು ರಿಲಯನ್ಸ್ ಜಿಯೋ ಮಾರ್ಟ್ ಎದುರು, ಆಂದೋಲನ ಸರ್ಕಲ್. ತಕ್ಷಣ ಸಂಪರ್ಕಿಸಿ 100% ಉಚಿತ ವಿದ್ಯಾರ್ಥಿವೇತನ (Free Ship) ಸೀಟುಗಳು ಲಭ್ಯ ಸೀಮಿತ ಉಚಿತ ಸೀಟುಗಳು–ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆ
9692079953

SITE FOR SALE
30x40 S/F (opp to Park)
Vijayanagara 4th Stage
MANASA SERENE LAYOUT Mysuru
0821-4288355
9845097287
8105060384

WANTED DRIVERS
TWO WHEELER AND FOUR WHEELER
8310381391
9066586460

WANTED TEACHING STAFF
for reputed institution (Experience Preferred) for Spoken English and social science Transport facilities available. Drop your resume through Whatsapp Contact no:
9980631121

ಸದ್ಗುರು ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯಬೇಕೆ? ಕೂಡಲೇ ನಮಗೆ ಕರೆಮಾಡಿ
9448229184
7899625268

AXIS MAX LIFE INSURANCE
ಮಕ್ಕಳಿಗಾಗಿ Children Plan
ನಿಮಗಾಗಿ Savings Plan
ನಿಮ್ಮವರಿಗಾಗಿ Protection Plan
ಭವಿಷ್ಯಕ್ಕಾಗಿ Pension Plan
ಜೀವನಕ್ಕೆ Money Back
ನೆಮ್ಮದಿಗಾಗಿ Axis Max Life Insurance ತಗೊಳ್ಳಿ... ಖುಷಿಯಾಗಿರಿ
8095741384

ಬೇಕಾಗಿದ್ದಾರೆ
Ladies P.G. ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. (ಅಡುಗೆ ಹೆಲ್ಪರ್) ಕಡ್ಡಾಯವಾಗಿ P.G.ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ ದೊರೆಯುತ್ತದೆ.
9972567537
9035004605

LAND SITE FOR SALE
30X40- R.K. NAGAR, LAND HUNSUR CITY 70 GUNTA SITE FOR RENT, 35X125 - BAMBOO BAZAR
9844472137
9164453570
WHOLESALE DOOR WINDOWS & COTS AVAILABLE.

ಕಂಪ್ಯೂಟರ್ ಬೇಸಿಕ್, ಕನ್ನಡ, ಹಿಂದಿ ಮಾತನಾಡುವವರು, ಆಫೀಸ್ ಮೇನ್‌ಟೆನೆನ್ಸ್, ಹುಡುಗಿ
ಬೇಕಾಗಿದ್ದಾರೆ / WANTED
9731305656
ಸೂರ್ಯಬೇಕರಿ ಹೆಬ್ಬಾಳ್

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 11ನೇ ಪುಟ ನೋಡಿ

ಡಿಕೆಶಿ ಜೊತೆ ವ್ಯವಹಾರಿಕ ಸಂಬಂಧ ಇಲ್ಲ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಪಷ್ಟನೆ



ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಧರ್ಮಸ್ಥಳಕ್ಕೆ ಭೇಟಿ ನೀಡಿದ್ದರು.

ಮಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ನನ್ನ ನಡುವೆ ಯಾವುದೇ ಆತ್ಮೀಯತೆ, ವ್ಯವಹಾರಿಕ ಸಂಬಂಧ ಇಲ್ಲ. ಅಪಪ್ರಚಾರ ಮಾಡುವವರಿಗೆ ಭಗವಂತ ಒಳಿತು ಮಾಡಲಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಶುಕ್ರವಾರ ಧರ್ಮಸ್ಥಳದಲ್ಲಿ ದೇವರಿಗೆ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆ ವೇಳೆ ಆಗಿರುವ ಅಡ್ಡ ಮತದಾನದಿಂದ ನನ್ನನ್ನು ಸೇರಿದಂತೆ ರಾಜ್ಯದ ಎಲ್ಲ ಕಾರ್ಯಕರ್ತರಿಗೆ ನೋವುಂಟು ಮಾಡಿದೆ. ಬಿಜೆಪಿ ಶಾಸಕರಿಂದ ನಡೆದ ಅಡ್ಡ ಮತದಾನ ಬೇರೆ ಬೇರೆ ಚರ್ಚೆಗಳನ್ನು ಹುಟ್ಟು ಹಾಕಿದೆ. ಹೀಗಾಗಿ ಫಲಿತಾಂಶದ ಮಾರನೇ ದಿನ ಆಣೆ ಪ್ರಮಾಣ, ಶಾಸಕಾಂಗ ಪಕ್ಷದ ಸಭೆ ಧರ್ಮಸ್ಥಳದಲ್ಲಿ ಆಗಬೇಕೆಂದು ಹೇಳಿದ್ದೆ. ನಾನು ಭಾವನಾತ್ಮಕ ವ್ಯಕ್ತಿ, ನನ್ನ ಮನಸ್ಸಿಗೆ ತೋಚಿದ್ದನ್ನು ಹೇಳಿದ್ದೇನೆ ಎಂದರು.

ಪಕ್ಷದ ಹಿರಿಯರು ಧರ್ಮಸ್ಥಳದ ತನಕ ಹೋಗುವುದು ಬೇಡ ಎಂದು ಹೇಳಿದ್ದರು. ನಾನು ದೇವರ ಪರಮ ಭಕ್ತನಾಗಿ ಈ ಕ್ಷೇತ್ರಕ್ಕೆ ಬಂದಿದ್ದೇನೆ. ಸಾಕಷ್ಟು ಅಪಪ್ರಚಾರ ಹಿಂದೆಯೂ ಆಗಿದೆ, ಈಗಲೂ ಆಗಿದೆ. ವಿಜಯೇಂದ್ರ ಮತ್ತು ಸಿಎಂ ಡಿಕೆಶಿ ನಡುವೆ ವ್ಯವಹಾರಿಕ ಸಂಬಂಧ, ಆತ್ಮೀಯತೆ ಇದೆ ಎಂದು ಆರೋಪ ಮಾಡಿದರು. ನಾನೇ ಅಡ್ಡ ಮತದಾನಕ್ಕೆ ಸಹಕಾರ ನೀಡಿದ್ದೇನೆ ಎಂಬ ಚರ್ಚೆಯನ್ನು ನಮ್ಮವರೇ ಮಾಡಿದರು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಆಶೀರ್ವಾದದಿಂದ ಪಕ್ಷದ ರಾಜ್ಯಾಧ್ಯಕ್ಷ ಆಗಿದ್ದೇನೆ. ರಾಜ್ಯಾಧ್ಯಕ್ಷನಾಗಿ ಇಂಥ ಕೀಳುಮಟ್ಟದ ಯೋಚನೆ ಮಾಡುವುದಿಲ್ಲ ಎಂದರು.

ಮೂರ್ನಾಲ್ಕು ದಿನ ದೆಹಲಿಯಲ್ಲಿದ್ದು ಪಕ್ಷದ ಹಿರಿಯರನ್ನು ಭೇಟಿ ಮಾಡಿ ಬಂದಿದ್ದೇನೆ. ಗುರುವಾರ ರಾತ್ರಿ ದೆಹಲಿಯಿಂದ ನೇರವಾಗಿ ಮಂಗಳೂರಿಗೆ ಬಂದು ಧರ್ಮಸ್ಥಳಕ್ಕೆ ತಲುಪಿದ್ದೇನೆ.

ಮಂಜುನಾಥ ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಭೀಕರ ಬರಗಾಲ ಪರಿಸ್ಥಿತಿ ದೂರವಾಗಲಿ ಎಂದು ಬೇಡಿಕೊಂಡಿದ್ದೇನೆ. ಕರ್ನಾಟಕದಲ್ಲಿ ಮತ್ತೊಮ್ಮೆ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರಬೇಕು. ಹಿಂದೂಗಳ ರಕ್ಷಣೆ ಮಾಡುವ ಸರ್ಕಾರ ಬರಬೇಕು. ಈ ಬಗ್ಗೆ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದು ಹೇಳಿದರು.

ಪೊನ್ನಂಪೇಟೆ : ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆ



ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಯೊಬ್ಬರು ಮಾಹಿತಿ ನೀಡುತ್ತಿರುವುದು.

ಗೋಣಿಕೊಪ್ಪ: ಪೊನ್ನಂಪೇಟೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆ ತಾಲೂಕು ಅಧ್ಯಕ್ಷ ಪ್ರಶಾಂತ್ ಅಧ್ಯಕ್ಷತೆಯಲ್ಲಿ ಜರುಗಿತು.

ಶಕ್ತಿ ಯೋಜನೆ: ಶಕ್ತಿ ಯೋಜನೆಯಿಂದ ಕೆಲಸ ಮಾಡುವ ಮಹಿಳೆಯರಿಗೆ ಹೆಚ್ಚು ಅನುಕೂಲವಾಗಿದ್ದು, ಗೋಣಿಕೊಪ್ಪದಿಂದ ಮೈಸೂರು, ಬೆಂಗಳೂರು ಮಾರ್ಗವಾಗಿ ಚಲಿಸುವ ಬಸ್ಸುಗಳ ಸಂಖ್ಯೆಯನ್ನು ರಜಾ ದಿನಗಳಲ್ಲಿ ಹೆಚ್ಚುವರಿ ಮಾಡಿ. ರಜಾ ದಿನಗಳಲ್ಲಿ ನೂಕುನುಗ್ಗಲುಗಳಂತಹ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದು, ಕೂಡಲೇ ಹೆಚ್ಚುವರಿ ಬಸ್ಸುಗಳನ್ನು ನಿಯೋಜಿಸಲು ಸೂಚಿಸಲಾಯಿತು.

ಯುವನಿಧಿ: ತಾಲೂಕಿನಲ್ಲಿರುವ ಡಿಪ್ಲೊಮಾ ಐ.ಟಿ.ಐ. ಕಾಲೇಜುಗಳ ವಿದ್ಯಾರ್ಥಿಗಳನ್ನು ಹೆಚ್ಚು ನೊಂದಣಿ ಮಾಡಿಸಲು ಹೆಚ್ಚು ಪ್ರಚಾರ ಮಾಡುವುದರ ಮೂಲಕ ವಿದ್ಯಾರ್ಥಿಗಳಿಗೆ ಈ ಯೋಜನೆಯು ಸದುಪಯೋಗವಾಗಬೇಕು. ತಾಲೂಕಿನ ವ್ಯಾಪ್ತಿಯಲ್ಲಿ ಉದ್ಯೋಗ ಮೇಳ ಕೈಗೊಂಡು ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕಿಸಿ ಕೊಡುವಲ್ಲಿ ಸಹಕರಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಅನ್ನಭಾಗ್ಯ: ನ್ಯಾಯಬೆಲೆ ಅಂಗಡಿಗಳಿಗೆ 15ರಿಂದ 20 ದಿನಗಳೊಳಗಾಗಿ ಅಕ್ಕಿ ಬರುವ ರೀತಿಯಲ್ಲಿ ನೋಡಿಕೊಳ್ಳಬೇಕು. ನ್ಯಾಯಬೆಲೆ ಅಂಗಡಿಗಳಲ್ಲಿ ಹೆಚ್ಚಿನ ಹಣ ಪಡೆಯುತ್ತಿದ್ದಾರೆ ಎಂಬ ದೂರು ಕೇಳಿಬರುತ್ತಿದ್ದು, ಈ ಬಗ್ಗೆ ಗಮನ ಹರಿಸಿ ಇಂಥ ಪ್ರಕರಣಗಳು ಆಗದಂತೆ ತಡೆಗಟ್ಟಲು ಅಧ್ಯಕ್ಷರು ಸೂಚಿಸಿದರು.

ಗೃಹಲಕ್ಷ್ಮಿ : ಏಪ್ರಿಲ್ ತಿಂಗಳ ಹಣವು ಫಲಾನುಭವಿಗಳ ಖಾತೆಗೆ ಜಮೆಯಾಗಿದ್ದು, ಅದರಲ್ಲಿ ಪೂರ್ತಿಯಾಗಿ ಎಲ್ಲಾ ಫಲಾನುಭವಿಗಳಿಗೆ ಜಮೆಯಾಗಿದೆ ಈ ಬಗ್ಗೆ ರಾಜ್ಯ ತಂಡದ ಗಮನಕ್ಕೆ ತರಲಾಗಿದ್ದು ಕೆಲ ತಾಂತ್ರಿಕ ಸಮಸ್ಯೆಗಳಿಂದ ಹಾಗೂ ಮರಣ ಹೊಂದಿದ ಫಲಾನುಭವಿಗಳಿಗೂ ಸಹ ಹಣ ಜಮೆಯಾಗುತ್ತಿರುವುದು ಕಂಡು ಬಂದಿದ್ದು ಮುಂದಿನ ದಿನಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ಉತ್ತರಿಸಿದರು.

ಗೃಹಜ್ಯೋತಿ: ಮಳೆಗಾಲ ಪ್ರಾರಂಭವಾಗಿದ್ದು, ತಾಲೂಕಿನ ಕೆಲವು ಕಡೆ ಕಬ್ಬಿಣದ ಕಂಬ)ಗಳನ್ನು ಬದಲಾಯಿಸಲು ಸೆಸ್ಕ್ ಅಧಿಕಾರಿಗಳಿಗೆ ಸೂಚಿಸಲಾಯಿತು. ಸಮಿತಿ ಸದಸ್ಯರಿದ್ದರು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಅಂಗಿಕಾರನ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವೆಲ್‌ಕಮ್ ಟು ದಿ ಜಂಗಲ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬಲರಾಮ(ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾನ್ ಸಿಟಿ (ತ)	4 ಪ್ರದರ್ಶನಗಳು
ಸಂಗಂ	
ವೆಲ್‌ಕಮ್ ಟು ದಿ ಜಂಗಲ್ (ಹಿ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ) + ಒಕ್ಕಡು (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರೈತರ ಮಕ್ಕಳಿಗೆ ಹೆಣ್ಣು ಕೊಡಿ (ಕ) + ಕಾಲಘಟ್ಟ (ಕ)	2+2 ಪ್ರದರ್ಶನಗಳು

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ ಬಸವ ಬಳಗ ಸೇವಾ ಟ್ರಸ್ಟ್‌ನಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳಿಸಿರುವ ಬೋಗಾದಿ ಪಪಂ ವ್ಯಾಪ್ತಿಯ ವೀರಶೈವ-ಲಿಂಗಾಯತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ ಮೊ: 9449007032 ನ್ನು ಸಂಪರ್ಕಿಸಿ.


ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ
NADAPRABHU KEMPEGOWDA FOUNDATION
ಬೆಂಗಳೂರು ನಿರ್ಮಾತೃ
ನಾಡಪ್ರಭು ಕೆಂಪೇಗೌಡರ ಜನ್ಮದಿನೋತ್ಸವ
ಕರುನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ ಪುರಸ್ಕಾರ ಸನ್ಮಾನಿತರು
ಶ್ರೀ ಎ.ಸಿ ಲಕ್ಷ್ಮಣ್
ಶ್ರೀ ವಿಕ್ರಂ ಮುತ್ತಣ್ಣ
ಶ್ರೀ ಪ್ರೇಮ ಗಣೇಶ್
ಶ್ರೀ ಧರ್ಮೇಂದ್ರ ಕುಮಾರ್
ಶ್ರೀ ಪಿ. ಪ್ರಶಾಂತ್‌ಗೌಡ
ಶ್ರೀ ಚೇತನ್. ಹೆಚ್.ಕೆ
ಶ್ರೀ ವೇದರಾಜ್
ಶ್ರೀ ಹೇಮಂತ್ ಅಪ್ಪಾಜಿಗೌಡ
9880922566
ಶುಭಕೋರುವವರು : ಅಶ್ವತ್ ನಾರಾಯಣ್ ಅಭಿಮಾನಿಗಳ ಬಳಗ ಮೈಸೂರು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

'ಮಿತ್ರ'ನ ಮಿಣುಕು | ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 27 ಶನಿವಾರ 2026

ಪುಟಗಳು: VIII

ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ

ಮೈಸೂರು ಪೊಲೀಸರಿಂದ ವಿಶೇಷ ಜಾಗೃತಿ ಜಾಥಾ

- ಚಿತ್ರನಟ ವಿನಯ್ ರಾಘವೇಂದ್ರ ರಾಜ್‌ಕುಮಾರ್ ಹಸಿರು ನಿಶಾನೆ
- ವಿದ್ಯಾರ್ಥಿಗಳು, ಪೊಲೀಸರು ಸೇರಿ ಸಾವಿರಾರು ಮಂದಿ ಭಾಗಿ



'ಅಂತರರಾಷ್ಟೀಯ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಸಾಗಾಟ ವಿರೋಧಿ ದಿನ'ದ ಅಂಗವಾಗಿ ಮೈಸೂರು ನಗರ ಪೊಲೀಸರು ಆಯೋಜಿಸಿದ್ದ ಜಾಗೃತಿ ಜಾಥಾಗೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಚಲನಚಿತ್ರ ನಟ ವಿನಯ್ ರಾಘವೇಂದ್ರ ರಾಜ್‌ಕುಮಾರ್ ಚಾಲನೆ ನೀಡಿದರು.


ಜಾಥಾದಲ್ಲಿ ಸಾಗಿದ ಶಾಲಾ ಕಾಲೇಜು ವಿದ್ಯಾರ್ಥಿಗಳು, ಪೊಲೀಸರನ್ನು ಕಾಣಬಹುದು.

ಮೈಸೂರು, ಜೂ.26(ಬಿಎಲ್‌ಯು)– ಅಂತರರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ಶುಕ್ರವಾರ ಪೊಲೀಸ್ ಇಲಾಖೆ ವತಿಯಿಂದ ಜಾಗೃತಿ ಜಾಥಾ ನಡೆಸಲಾಯಿತು.

'ಸೇ ನೋ ಟು ಡ್ರಗ್ಸ್(Say No to Drugs)' ಘೋಷ ವಾಕ್ಯದೊಂದಿಗೆ ಆಯೋಜಿಸಿದ್ದ 'ಅಂತರಾಷ್ಟೀಯ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಸಾಗಾಟ ವಿರೋಧಿ ದಿನ'ದ ಜಾಥಾಕ್ಕೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಚಲನ ಚಿತ್ರ ನಟ ವಿನಯ್ ರಾಘವೇಂದ್ರ ರಾಜ್ ಕುಮಾರ್ ಹಾಗೂ ವೃತ್ತಿ ತರಬೇತುದಾರರಾದ ಡಾ. ಶಂಕರ್ ಬೆಳ್ಳೂರು ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ವಿನಯ್, ಹೆಚ್ಚು ಯುವಕ–ಯುವತಿಯರು ಮಾದಕ ವಸ್ತು ಸೇವನೆಗೆ ದಾಸರಾಗುತ್ತಿರುವುದು ಅಪಾಯಕಾರಿ ಸಂಗತಿ. ಡ್ರಗ್ಸ್ ಸೇವನೆಯಿಂದಾಗುವ ದುಷ್ಪರಿಣಾಮಗಳು, ದುರಂತಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಪೊಲೀಸರು ಜಾಥಾ ಹಮ್ಮಿಕೊಂಡಿದ್ದಾರೆ. ಮಾದಕ ವಸ್ತು ಜಾಲದ ವಿರುದ್ಧ ಕಾನೂನು ಕ್ರಮದ ಜೊತೆಗೆ ಈ ರೀತಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯವಶ್ಯ. ಮಾದಕ ವಸ್ತು ಸೇವನೆಯಿಂದ ಆ ವ್ಯಕ್ತಿಗೆ ಮಾತ್ರವಲ್ಲ, ಅವನ ಕುಟುಂಬ ಹಾಗೂ ಸಮಾಜಕ್ಕೂ ಮಾರಕ ಎಂಬುದನ್ನು ಅರಿತುಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ವೇಳೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಸುಂದರ್ ರಾಜ್, ಡಾ.ಹರ್ಷ ಪ್ರಿಯಂವದ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಜಾಥಾದಲ್ಲಿ ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ನರ್ಸಿಂಗ್ ವಿದ್ಯಾರ್ಥಿಗಳು, ಸಂಚಾರಿ ಪೊಲೀಸರು, ಮಹಿಳಾ ಪೊಲೀಸರು, ಕಮಾಂಡೊಗಳು, ಸಿಎಆರ್ ಸೇರಿದಂತೆ ಪೊಲೀಸ್ ಇಲಾಖೆಯ ವಿವಿಧ ತಂಡಗಳು ಪಾಲ್ಗೊಂಡು, ಜೀವ–ಜೀವನವನ್ನು ಹಾಳು ಮಾಡುವ ಮಾದಕ ವಸ್ತುಗಳಿಂದ ದೂರ ಇರುವಂತೆ ಅರಿವು ಮೂಡಿಸಿದರು. 'ವ್ಯಸನದಿಂದ ದೂರವಿರಿ, ಜೀವನವನ್ನು ಆನಂದಿಸಿ', 'ನಶೆ ತ್ಯಜಿಸಿ ಯಶಸ್ವಿ ದಾರಿ ಹಿಡಿಯಿರಿ', 'ಉತ್ತಮ ಭವಿಷ್ಯದ ಕನಸಿಗಿಂತ ಮಿಗಿಲಾದ ನಶೆ ಇನ್ನೊಂದಿಲ್ಲ', 'ಡ್ರಗ್ಸ್ ಎಂಬ ವಿಷ ಇನ್ನೇಕೆ', 'ಡ್ರಗ್ಸ್ ನಿಮ್ಮ ಬದುಕನ್ನು ಕೊಲ್ಲುತ್ತದೆ', 'ಡ್ರಗ್ಸ್ ಉಜ್ವಲ ಭವಿಷ್ಯವನ್ನು ಹಾಳು ಮಾಡುತ್ತದೆ', 'ಡ್ರಗ್ಸ್‌ನೊಂದಿಗೆ ಒಡನಾಟ, ಅದುವೆ ಜೀವನದ ಕೊನೆಯಾಟ', 'ಡ್ರಗ್ಸ್ ಬಗ್ಗೆ ಎಚ್ಚೆತ್ತುಕೊಳ್ಳೋಣ, ಮಾದಕ ವ್ಯಸನವನ್ನು ತಡೆಯೋಣ', 'ಮಾದಕ ವಸ್ತುಗಳ ವಿರುದ್ಧ ಕರ್ನಾಟಕ' ಸೇರಿದಂತೆ ಪರಿಣಾಮಕಾರಿ ಘೋಷಣಾ ಫಲಕಗಳನ್ನು ಹಿಡಿದು ಸಾರ್ವಜನಿಕರ ಗಮನ ಸೆಳೆದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಹೊರಟ ಜಾಗೃತಿ ಜಾಥಾ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದ ಆಸ್ಪತ್ರೆ ವೃತ್ತ, ಇರ್ವಿನ್ ರಸ್ತೆ, ನೆಹರು ವೃತ್ತ, ಅಶೋಕ ರಸ್ತೆ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿಯೇ ಮುಕ್ತಾಯಗೊಂಡಿತು.

ಬಾಮೈದನ ಮೇಲಿನ ಇಡಿ ದಾಳಿ ನನಗೆ ಅಚ್ಚರಿ ತಂದಿದೆ

ಸಚಿವ ಸತೀಶ್ ಜಾರಕಿಹೊಳಿ ಪ್ರತಿಕ್ರಿಯೆ



ಬೆಳಗಾವಿ: ಬಾಮೈದನ ಮೇಲಿನ ಜಾರಿ ನಿರ್ದೇಶನಾಲಯದ ದಾಳಿ ನನಗೆ ಅಚ್ಚರಿ ತಂದಿದೆ ಎಂದು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿ ಹೊಳಿ ಹೇಳಿದ್ದಾರೆ.

ವೈ ಮಂಜುನಾಥ್ ಅವರ ಮೇಲಿನ ಇಡಿ ದಾಳಿಗೆ ಪ್ರತಿಕ್ರಿಯಿ ಸಿದ ಅವರು, ಲೋಕಾಯುಕ್ತದಲ್ಲಿ ಅವರ ಮೇಲಿರುವ ಕೇಸ್ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಹಿಂದೆ ಹೈಕೋರ್ಟ್ ಒಂದು ಹಳೆಯ ಕೇಸ್ ಅನ್ನು ರದ್ದು ಮಾಡಿತ್ತು. ಹೀಗಿರುವಾಗ ಭ್ರಷ್ಟಾಚಾರದ ಆರೋಪದ ಮೇಲೆ ಇಡಿ ದಾಳಿ ಮಾಡಿರುವುದು ನನಗೂ ಅಚ್ಚರಿ ಮೂಡಿಸಿದೆ ಎಂದರು.

ಭ್ರಷ್ಟಾಚಾರದ ತನಿಖೆ ನಡೆಸಲು ರಾಜ್ಯ ಸರ್ಕಾರ ಹಾಗೂ ಎಸಿಬಿ/ಲೋಕಾಯುಕ್ತಗಳಿವೆ. ಕೇಂದ್ರ ಸರ್ಕಾರದ ಕೈಯಲ್ಲಿದ್ದರೆ ಸಿಬಿಐನವರು ತನಿಖೆ ಮಾಡಬೇಕಿತ್ತು. ಆದರೆ ಇಡಿ ದಾಳಿ ಮಾಡಿರುವುದರ ಹಿಂದೆ ರಾಜಕೀಯ ಪ್ರೇರಿತ ಸಂಚು ಇದೆಯೇ ಎಂಬುದನ್ನು ಕಾದು ನೋಡಬೇಕಿದೆ. ತನಿಖೆ ಯಾವ ದಿಕ್ಕಿನಲ್ಲಿ ಹೋಗುತ್ತದೆ ಎಂಬುದರ ಮೇಲೆ ಮುಂದಿನ ದಿನಗಳಲ್ಲಿ ಸ್ವರೂಪ ಮತ್ತು ಪರಿಣಾಮ ಗೊತ್ತಾಗಲಿದೆ ಎಂದು ಹೇಳಿದರು.

ನನ್ನ ಪ್ರಭಾವದಿಂದ ಆಸ್ತಿ ಮಾಡಿಲ್ಲ: ಸತೀಶ್ ಜಾರಕಿಹೊಳಿ ಅವರ ಸಂಬಂಧಿ ಎಂಬ ಕಾರಣಕ್ಕೇ ದಾಳಿ ಮಾಡಲಾಗಿದೆಯೇ. ಮತ್ತು ಸಚಿವರ ಪ್ರಭಾವದಿಂದಲೇ ಇಷ್ಟೊಂದು ಆಸ್ತಿ ಸಂಪಾದಿಸಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಆತ ಎಲ್ಲೇ ಇದ್ದರೂ ಒಬ್ಬ ಅಧಿಕಾರಿಯಷ್ಟೇ. ಅವರ ಇಲಾಖೆಯಲ್ಲಿ ನಮ್ಮ ಪ್ರಭಾವ ಏನೂ ಇರುವುದಿಲ್ಲ, ಅದು ಸೀಮಿತ ಪೋಸ್ಟ್, ಇನ್ನು ಬಾವಲಿ ಚೆಕ್ ಪೋಸ್ಟ್ ಹತ್ತಿರ ಇರುವ ರೆಸಾರ್ಟ್ ಮಂಜುನಾಥ್ ಹೆಸರಿನಲ್ಲಿ ಇಲ್ಲ, ಅದು ಅವರ ಬ್ರದರ್ಸ್ ಹೆಸರಿನಲ್ಲಿದೆ. ಕಳೆದ 30 ವರ್ಷಗಳಿಂದ ಅವರ ಕುಟುಂಬದವರು ರೆಸಾರ್ಟ್ ವ್ಯವಹಾರದಲ್ಲಿದ್ದಾರೆ. ದಾಳಿಯಾಗಿ ಮೂರು ದಿನಗಳಾಗಿದ್ದು, ಇಡಿಯವರು ಕೇಳುವ ಪ್ರಶ್ನೆಗಳ ಆಧಾರದ ಮೇಲೆ ಉತ್ತರ ನೀಡಲು ಸಮಯ ಬೇಕಾಗುತ್ತದೆ.

ಭ್ರಷ್ಟಾಚಾರ ಎಲ್ಲ ಕಡೆಯೂ ಇದೆ, ಅದು ಕೇವಲ ಒಂದೇ ಇಲಾಖೆಗೆ ಸೀಮಿತವಾಗಿಲ್ಲ. ಎಲ್ಲಿ ಅಧಿಕಾರಿಗಳು ಸಿಕ್ಕಿಬೀಳುತ್ತಾರೋ ಅಲ್ಲಿ ಭ್ರಷ್ಟಾಚಾರ ಹೊರಗಡೆ ಬರುತ್ತದೆ ಎಂದು ತಿಳಿಸಿದರು. ಕಾಂಗ್ರೆಸ್ ನಾಯಕರಿಗೆ ಇಡಿ ದಾಳಿಯ ಆತಂಕವಿದೆಯೇ ಎಂಬ ಪ್ರಶ್ನೆಗೆ, ಖಂಡಿತವಾಗಿಯೂ ಆತಂಕ ಇದ್ದೇ ಇದೆ. 2028ರ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿರುವುದರಿಂದ ಇಂತಹ ದಾಳಿಗಳು ಹೊರಗಡೆ ಬರುತ್ತವೆ ಎಂದು ಮಾರ್ಮಿಕವಾಗಿ ನುಡಿದರು.

ರಂಗಕಲೆ ಸಂಘಟನೆಗಳಿಗೆ ಅನುದಾನ ಹೆಚ್ಚಳಕ್ಕೆ ಆಗ್ರಹ

ಹಿರಿಯ ರಂಗಕರ್ಮಿ ಎನ್.ಎಸ್.ಗೋಪಿನಾಥ್ ಆಗ್ರಹ


ಕರ್ನಾಟಕ ಏಕೀಕರಣ ಹೋರಾಟಗಾರ ಡಾ.ಸಿದ್ಧನಾಥ ಬಳ್ಳಾರಿ ಸ್ಮರಣಾರ್ಥ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಮೈಸೂರು, ಜೂ.26(ಎಸ್‌ಪಿಎನ್)– ರಂಗಕಲೆ ಸಂಘಟನೆಗಳ ಆರ್ಥಿಕ ಪರಿಸ್ಥಿತಿ ಶೋಚನೀಯವಾಗಿದ್ದು, ಹಾಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಿಂದ ನೀಡುತ್ತಿರುವ ಅನುದಾನ ಹೆಚ್ಚಿಸುವಂತೆ ಹಿರಿಯ ರಂಗಕರ್ಮಿ ಎನ್.ಎಸ್.ಗೋಪಿನಾಥ್ ಆಗ್ರಹಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಕರ್ನಾಟಕ ಏಕೀಕರಣ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಕರ್ನಾಟಕ ಏಕೀಕರಣ ಹೋರಾಟಗಾರ ಡಾ.ಸಿದ್ಧನಾಥ ಬಳ್ಳಾರಿ ಅವರ ಸ್ಮರಣಾರ್ಥ ಡಾ.ಸುಜಾತ ಅಕ್ಕಿಯವರ ಏಕವ್ಯಕ್ತಿ ಪ್ರದರ್ಶನ ನಾಟಕೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ರಂಗಕಲೆ ಸಂಘಟನೆಗೆ ಪ್ರಸ್ತುತ ನೀಡುತ್ತಿರುವ 25 ಸಾವಿರ ರೂ. ಅನುದಾನವನ್ನು 50 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ನಾಟಕ ನೋಡಲು ಪ್ರೇಕ್ಷಕರು ಬರುತ್ತಿಲ್ಲ. ಟಿಕೆಟ್‌ನಿಂದಲೂ ವರಮಾನ ಬರುತ್ತಿಲ್ಲ. ಹೀಗಾದರೆ ನಾಟಕ ಪ್ರದರ್ಶನ ಮಾಡುವುದು ಹೇಗೆ? ಎಂದು ಪ್ರಶ್ನಿಸಿದ ಅವರು, ರಂಗಕಲೆ ಉಳಿವಿಗೆ ಹವ್ಯಾಸಿ ಕಲಾವಿದರ ಕೊಡುಗೆ ಅಪಾರ. ವಿವಿಧ ಕಾಲೇಜು ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ, ಅವರಿಗೆ 45 ದಿನಗಳ ಕಾಲ ರಂಗ ತಾಲೀಮು ನೀಡಿ, ಅವರನ್ನು ಕಲಾವಿದರನ್ನಾಗಿ ರೂಪಿಸುತ್ತಾರೆ. ಈ ಪ್ರಕ್ರಿಯೆಗೆ ಆರ್ಥಿಕ ಸಂಪನ್ಮೂಲ ಕೊರತೆಯಿದೆ ಎಂದರು.

ಹವ್ಯಾಸಿ ಕಲಾವಿದರು ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅಂತಹ ಕಲಾವಿದರಿಗೆ ಸರ್ಕಾರದಿಂದ ಸೂಕ್ತ ಪ್ರೋತ್ಸಾಹ ಮತ್ತು ಆರ್ಥಿಕ ನೆರವು ಅಗತ್ಯ. ಯುವಕರನ್ನು ಕಲಾವಿದರನ್ನಾಗಿ ರೂಪಿಸುವುದು ಸಮುದಾಯ ಒಳಗೊಳ್ಳುವಿಕೆ. ಇದರೊಂದಿಗೆ ಹೊಸ ಚೈತನ್ಯ ತುಂಬುತ್ತಾರೆ. ಆದರೆ, ಅಂತಹ ಹವ್ಯಾಸಿ ಕಲಾವಿದರನ್ನು ನಿರ್ಲಕ್ಷ್ಯ ಮಾಡುತ್ತಿರುವುದು ಬೇಸರದ ಸಂಗತಿ ಎಂದರು.

ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರಂಗಚಟುವಟಿಕೆಗಳು ಕಡಿಮೆಯಾಗಿವೆ. ಆರ್ಥಿಕ ಶಕ್ತಿ ಕೊರತೆಯಿಂದ ನಾಟಕ ಪ್ರದರ್ಶನ ಆಯೋಜನೆಯೂ ಕಷ್ಟಕರವಾಗುತ್ತಿದೆ ರಂಗಭೂಮಿಗೆ ಸಂಬಂಧಿಸಿದ ಸಂಘಟನೆಗಳಿಗೂ ಸಹ ನಿಷ್ಕ್ರೀಯವಾಗುತ್ತಿದೆ. ಮತ್ತೊಂದೆಡೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹ ಕಲಾವಿದರನ್ನು ನಿರ್ಲಕ್ಷಿಸುತ್ತಿದೆ ಎಂದು ದೂರಿದರು.

ಈ ವೇಳೆ ಲೇಖಕಿ ಡಾ.ಸುಜಾತ ಅಕ್ಕಿ, ಸಹ ನಿರ್ದೇಶನ ಅರಸೀಕೆರೆ ಯೋಗಾನಂದ, ಉಪಸ್ಥಿತರಿದ್ದರು.ಬಳಿಕ ಕಲಾವಿದೆ ಹರಿಣಾಕ್ಷಿರಾವ್ ಅಭಿನಯದ ಅಹಲ್ಯೆ ಏಕವ್ಯಕ್ತಿ ಪ್ರದರ್ಶನಗೊಂಡಿತು.

ವಾರ್ಷಿಕ ಮಹಾಸಭೆ

ಮೈಸೂರು, ಜೂ. 26– ರೈಲ್ವೆ ಪಿಂಚಣಿದಾರರ ಕಲ್ಯಾಣ ಸಂಘದ 30ನೇ ವಾರ್ಷಿಕ ಮಹಾಸಭೆಯು ಜೂ. 28 ರಂದು ಬೆಳಗ್ಗೆ 10.30ಕ್ಕೆ ರೈಲ್ವೆ ಕಲ್ಯಾಣ ಮಂಟಪ, ಒಂಟಿಕೊಪ್ಪಲು ಇಲ್ಲಿ ನಡೆಯಲಿದೆ. ಸಂಘದ ಎಲ್ಲಾ ಸದಸ್ಯರು ಸಂಘದಿಂದ ನೀಡಲಾಗಿರುವ ನೋಂದಣಿ ಪುಸ್ತಕದೊಂದಿಗೆ ಸಭೆಗೆ ಹಾಜರಾಗಬೇಕಾಗಿ ಕೋರಲಾಗಿದೆ.

ಚಾಮರಾಜ ಕೇತ್ರದಲ್ಲಿ ವಿದ್ಯಾವಂತರೇ ಹೆಚ್ಚಿದ್ದಾರೆ; ಎಸ್‌ಐಆರ್ ಕುರಿತು ಆತಂಕ ಬೇಡ

ಶಾಸಕ ಕೆ.ಹರೀಶ್ ಗೌಡ ಅಭಿಮತ


ಚಾಮರಾಜ ಕ್ಷೇತ್ರದ ಎಸ್‌ಐಆರ್ ಜಾಗೃತಾ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

ಮೈಸೂರು, ಜೂ.26(ಎಸ್‌ಪಿಎನ್)– ಚಾಮರಾಜ ಕ್ಷೇತ್ರ ವಿದ್ಯಾವಂತರೇ ಹೆಚ್ಚಾಗಿ ರುವ ಕ್ಷೇತ್ರ. ಇಲ್ಲಿ ಎಸ್‌ಐಆರ್ ಕುರಿತು ಯಾವುದೇ ಆತಂಕ ಬೇಡ ಎಂದು ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಇಂದಿರಾ ಕಾಂಗ್ರೆಸ್ ಭವನದಲ್ಲಿ ಚಾಮರಾಜ ಕ್ಷೇತ್ರದ ಎಸ್‌ಐಆರ್ ಜಾಗೃತಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೇರೆಬೇರೆ ರಾಜ್ಯದಲ್ಲಿ ಬಿಜೆಪಿ ಕುತಂತ್ರ ಮಾಡಿ, ಆಯೋಗದ ಮೂಲಕ ಪರಿಷ್ಕರಣೆ ನೆಪದಲ್ಲಿ ಮತದಾರರ ಪಟ್ಟಿಯಲ್ಲಿನ ಹೆಸರನ್ನು ಡೀಲಿಟ್ ಮಾಡಿಸುತ್ತಿದೆ. ಆದರೆ, ಪಕ್ಕದ ರಾಜ್ಯ ಕೇರಳಂನಲ್ಲಿ ಎಸ್‌ಐಆರ್ ಮಾಡಿದರೂ ಅಲ್ಲಿನ ಮತದಾರರು ಬಿಜೆಪಿಯನ್ನು ತಿರಸ್ಕರಿಸಿದರು. ಅದರಂತೆ ಕರ್ನಾಟಕ ಮತದಾರರು ಮುಂದಿನ ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸಬೇಕು ಎಂದು ಮನವಿ ಮಾಡಿದರು.

ಕೇರಳಂನ ಕಾಂಗ್ರೆಸ್ ಕಾರ್ಯಕರ್ತರು ಎಸ್‌ಐಆರ್ ಕುರಿತು ಪ್ರಚಾರ ಮಾಡಿದಂತೆ ಇಲ್ಲಿನ ಕಾರ್ಯಕರ್ತರು ನಮ್ಮ ಸರ್ಕಾರದ ಸಾಧನೆ, ಪಂಚ ಗ್ಯಾರಂಟಿ ಕುರಿತು ಮತದಾರರಿಗೆ ಮಾಹಿತಿ ಹಾಗೂ ಎಸ್‌ಐಆರ್ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಿದಾಗ ಮಾತ್ರ ಬಿಜೆಪಿಯವರ ಕುತಂತ್ರ ಇಲ್ಲಿ ನಡೆಯುವುದಿಲ್ಲ. ಅಲ್ಲದೆ, ಚಾಮರಾಜ ಕ್ಷೇತ್ರದ ಬಿಎಲ್‌ಎಗಳು ವಿದ್ಯಾವಂತರೇ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಎಸ್‌ಐಎಸ್ ಕುರಿತು ಯಾವುದೇ ಆತಂಕ ಬೇಡ ಎಂದರು. ಕೆಪಿಸಿಸಿ ವಕ್ತಾರ ರಘು ದೊಡ್ಡೇರಿ ಮಾತನಾಡಿ. ಜೂ.30ರಿಂದ ನಡೆಯುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಯಲ್ಲಿ ಕಾಂಗ್ರೆಸ್ ಪಕ್ಷದ ಬಿಎಲ್‌ಎ 2 ರವರ ಜವಾಬ್ದಾರಿ ಬಹಳ ಪ್ರಮುಖ. ಬಿಎಲ್‌ಓ ಪ್ರತಿಯೊಂದು ಮನೆ ಬಳಿ ಬಂದಾಗ ಮತದಾರರ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಚುನಾವಣಾ ಆಯೋಗ ಜಾರಿಗೆ ತಂದಿರುವ 11 ದಾಖಲೆಗಳಲ್ಲಿ ಒಂದು ದಾಖಲಾತಿ ತೋರಬೇಕು. ಈ ಕುರಿತು ಎಚ್ಚರಿಕೆ ವಹಿಸುವಂತೆ ಬಿಎಲ್‌ಎಗಳಿಗೆ ಸಲಹೆ ನೀಡಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ರವಿಮಂಚೇಗೌಡನ ಕೊಪ್ಪಲು, ಈಶ್ವರ ಚಕ್ಕಡಿ, ಮಹಿಳಾ ಅಧ್ಯಕ್ಷರಾದ ಪುಷ್ಪಲತಾ ಚಿಕ್ಕಣ್ಣ ಮತ್ತು ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಪುಷ್ಪಲತಾ ಜಗನ್ನಾಥ್, ಟಿ.ಬಿ.ಚಿಕ್ಕಣ್ಣ ಪಕ್ಷದ ಹಿರಿಯ ಮುಖಂಡರಾದ ಲೋಕೇಶ್ ರಾವ್, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯರಾದ ಶಿವಮಾದು, ಪೈಲ್ವಾನ್ ಶ್ರೀನಿವಾಸ್, ರಾಜೇಶ್ವರಿ ಪುಟ್ಟಸ್ವಾಮಿ, ಓಬಿಸಿ ನಗರ ಕಾಂಗ್ರೆಸ್ ಅಧ್ಯಕ್ಷ ಎನ್.ಆರ್. ನಾಗೇಶ್, ಎಸ್‌ಸಿ ವಿಭಾಗದ ನಗರ ಕಾಂಗ್ರೆಸ್ ಅಧ್ಯಕ್ಷ ರಮೇಶ್, ನಗರ ಪಾಲಿಕೆ ಮಾಜಿ ಸದಸ್ಯ ಪ್ರಕಾಶ್, ಕರ್ನಾಟಕ ರಾಜ್ಯ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ, ಮಹಿಳಾ ಮುಖಂಡರಾದ ಚಂದ್ರಕಲಾ, ಮಾಯ ಉಪಸ್ಥಿತರಿದ್ದರು.

ಸರಕು ಸಾಗಣೆ ವಾಹನಗಳು ಅಗತ್ಯ ದಾಖಲೆ ಇಲ್ಲದೆ ರಾಜ್ಯದ ಚೆಕ್‌ಪೋಸ್ಟ್ ದಾಟಬಾರದು

- ಸಿಎಂ ಡಿ.ಕೆ. ಶಿವಕುಮಾರ್ ಕಟ್ಟಾದೇಶ
- ವಾಣಿಜ್ಯ ಇಲಾಖೆ ಪ್ರಗತಿ ಪರಿಶೀಲನೆ ವೇಳೆ ತೆರಿಗೆ ಸೋರಿಕೆಯಾಗದಂತೆ ಎಚ್ಚರ ವಹಿಸಲು ಸೂಚನೆ


ವಿಧಾನಸೌಧದಲ್ಲಿ ಶುಕ್ರವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಣಿಜ್ಯ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಬೆಂಗಳೂರು, ಜೂ.26(ಕೆಎಂಶಿ)– ಸರಕು ಸಾಗಣೆ ವಾಹನಗಳು ಅಗತ್ಯ ದಾಖಲೆಗಳಿಲ್ಲದೆ ಚೆಕ್ ಪೋಸ್ಟ್ ಮತ್ತು ರಾಜ್ಯದ ಗಡಿ ದಾಟಬಾರದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಕಟ್ಟಾದೇಶ ಮಾಡಿದ್ದಾರೆ.

ವಾಣಿಜ್ಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ, ತೆರಿಗೆ ಸೋರಿಕೆಗೆ ಅವಕಾಶ ನೀಡಬಾರದು, ಇದರಲ್ಲಿ ರಾಜೀ ಅಥವಾ ನಿರ್ಲಕ್ಷ್ಯಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ತಿಳಿಸಿದರು. ನಮ್ಮ ಬಳಿ ಸುಮಾರು 12 ಲಕ್ಷ ತೆರಿಗೆದಾ ರರ ಮಾಹಿತಿ ಇದೆ. ತಂತ್ರಜ್ಞಾನ ಮತ್ತು ಡೇಟಾ ಅನಾಲಿಟಿಕ್ಸ್ ಮೂಲಕ ಅವರನ್ನು 360 ಡಿಗ್ರಿ ದೃಷ್ಟಿ ಕೋನದಲ್ಲಿ ವಿಶ್ಲೇಷಿಸುವ ಸಾಮರ್ಥ್ಯ ನಿಮಗಿದೆ.

ಈ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡರೆ, ನಿಮಗೆ ನೀಡಿರುವ ಗುರಿ ಸಾಧಿಸುವುದಷ್ಟೇ ಅಲ್ಲ, ಅದನ್ನು ಮೀರಿಸುವ ಸಂಪನ್ಮೂಲ ಕ್ರೋಡೀಕರಣವಾಗುತ್ತದೆ.

ನಮ್ಮ ಉದ್ದೇಶ ಯಾರಿಗೂ ಅನಗತ್ಯ ತೊಂದರೆ ನೀಡುವುದಲ್ಲ. ಪ್ರಾಮಾಣಿಕ ತೆರಿಗೆದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ತೆರಿಗೆ ಪಾವತಿಸುವ ಪ್ರತಿಯೊಬ್ಬ ನಾಗರಿಕನನ್ನು ಘನತೆ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು.

ಜೊತೆಗೆ ಇಲಾಖೆ ಸಿಬ್ಬಂದಿಯನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಬುದ್ಧಿವಂತಿಕೆಯಿಂದ ಕಾರ್ಯ ನಿರ್ವಹಿಸಿದರೆ ಗುರಿ ಮೀರಿದ ಸಾಧನೆ ಸಾಧ್ಯ ಎಂದಿದ್ದಾರೆ. ತೆರಿಗೆ ಸೋರಿಕೆಯನ್ನು ಸಂಪೂರ್ಣ ತಡೆಯುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು, ಮುಂದಿನ ಪರಿಶೀಲನಾ ಸಭೆ ನಡೆಯುವ ವೇಳೆಗೆ, ಇಂದು ನಾನು ನೀಡಿರುವ ಪ್ರತಿಯೊಂದು ಸೂಚನೆ ಜಾರಿಯಾಗಿರಬೇಕು, ಮುಂದಿನ ಸಭೆಯಲ್ಲಿ ನಾನು ಸ್ವತಃ ಅನೇಕ ನೈಜ ಉದಾಹರಣೆ ಗಳೊಂದಿಗೆ ನಿಮ್ಮ ಕಾರ್ಯಕ್ಷಮತೆ ಪರಿಶೀಲಿಸುತ್ತೇನೆ.

ರಾಜ್ಯದ ಎಲ್ಲ ವಲಯಗಳಿಂದಲೂ ನನಗೆ ನಿರಂತರ ಮಾಹಿತಿ ಬರುತ್ತದೆ. ಚಿಕ್ಕಪೇಟೆಯಿಂದ ಗಾಂಧಿನಗರದವರೆಗೆ, ಗಡಿ ಜಿಲ್ಲೆಗಳಿಂದ ರಾಜ್ಯದ ಎಲ್ಲ ಭಾಗಗಳಲ್ಲೂ ನನ್ನದೇ ಆದ ಸಂಪರ್ಕಗಳಿವೆ.

ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಯಾವುದೇ ಲೋಪ ಅಥವಾ ನಿರ್ಲಕ್ಷ್ಯ ನಡೆದರೂ ನನ್ನ ಗಮನಕ್ಕೆ ಬರುತ್ತದೆ. ನನಗೆ ಬರುತ್ತಿರುವ ಮಾಹಿತಿಯೂ ನಿಮ್ಮ ಕಾರ್ಯಕ್ಷಮತೆ ವರದಿಯೂ ಒಂದಕ್ಕೊಂದು ಹೊಂದಿಕೆಯಾಗಬೇಕು.

ಪಕ್ಕದ ರಾಜ್ಯಗಳ ವಾಣಿಜ್ಯ ತೆರಿಗೆ ಇಲಾಖೆ ಮತ್ತು ಜಾರಿ ಸಂಸ್ಥೆಗಳೊಂದಿಗೆ ಉತ್ತಮ ಸಮನ್ವಯ ಸಾಧಿಸಿ, ಮಾಹಿತಿ ಹಂಚಿಕೆ ಮತ್ತು ಜಂಟಿ ಕಾರ್ಯಾಚರಣೆ ಮೂಲಕ ತೆರಿಗೆ ಸೋರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಬೇಕು.

ಮತ್ತೊಮ್ಮೆ ಸ್ಪಷ್ಟಪಡಿಸುವುದೇನೆಂದರೆ, ಸೂಕ್ತ ಲೆಕ್ಕಪತ್ರ, ದಾಖಲೆ ಮತ್ತು ಸಂಪೂರ್ಣ ಹೊಣೆಗಾರಿಕೆ ಇಲ್ಲದೆ ಒಂದೇ ಒಂದು ಸರಕು ಸಾಗಣೆ ವಾಹನವೂ ಚೆಕ್ ಪೋಸ್ಟ್ ಅಥವಾ ರಾಜ್ಯದ ಗಡಿ ದಾಟಬಾರದು, ಇದು ಇಲಾಖೆಯ ಕಾರ್ಯವೈಖರಿಯ ಮೂಲ ತತ್ವವಾಗಬೇಕು.

ಎಲ್ಲಾ ಜಂಟಿ ಆಯುಕ್ತರು ಆಯಾ ವಿಭಾಗಗಳಿಗೆ ಹಂಚಿಕೆ ಮಾಡಲಾದ ತೆರಿಗೆ ಸಂಗ್ರಹಣಾ ಗುರಿ ಸಾಧಿಸಿ ತೋರಿಸಿ, ಸಮಯಕ್ಕೆ ಸರಿಯಾಗಿ ತೆರಿಗೆ ರಿಟರ್ನ್ ಸಲ್ಲಿಸುವುದು ಹಾಗೂ ಸಲ್ಲಿಸದಿರುವುದನ್ನು ಗುರುತಿಸಿ ನಿಗದಿತ ಅವಧಿಯೊಳಗೆ ರಿಟರ್ನ್ ಸಲ್ಲಿಸುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಕಾನೂನು ಮೀರಿ, ಶೋಷಣೆ ಮಾಡಲು ಹೇಳುತ್ತಿಲ್ಲ, ಪ್ರಾಮಾಣಿಕ ತೆರಿಗೆದಾರರಿಗೆ ತೊಂದರೆ ಆಗಬಾರದು, ಅವರ ಸುಲಿಗೆ ಮಾಡಬಾರದು.

ಇಲಾಖಾ ಅಧಿಕಾರಿಗಳ ತೊಂದರೆಗಳು ಏನೇ ಇದ್ದರೂ ತಿಳಿಸಿ, ಅವು ನೈಜವಾಗಿದ್ದರೆ ನಿವಾರಿಸೋಣ. ಪ್ರಾಮಾಣಿಕತೆ, ನಿಷ್ಠೆ, ಶ್ರಮಕ್ಕೆ ನನ್ನ ಬಳಿ ಗೌರವ, ಬೆಲೆ ಇದೆ. ಪ್ರಾಮಾಣಿಕತೆ ಇಲ್ಲದಿದ್ದರೆ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುವೆ. ಎಲ್ಲಾ ಹಂತಗಳ ಅಧಿಕಾರಿಗಳು ತೆರಿಗೆದಾರರ ನೈಜ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಬೇಕು.

ನನ್ನ ಸಾರ್ವಜನಿಕ ಜೀವನಕ್ಕೆ ಸುಮಾರು 38 ವರ್ಷಗಳ ಅನುಭವವಿದೆ. ಈ ಅವಧಿಯಲ್ಲಿ ಹಲವು ಪ್ರಮುಖ ಖಾತೆಗಳನ್ನೂ ನಿರ್ವಹಿಸಿದ್ದೇನೆ. ಈಗಿನ ಹಣಕಾಸು ಮತ್ತು ವಾಣಿಜ್ಯ ತೆರಿಗೆ ಇಲಾಖೆ ಕಾರ್ಯವೈಖರಿ ಇನ್ನಷ್ಟು ಆಳವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಕೇಳುವುದಕ್ಕೂ, ಕಲಿಯುವುದಕ್ಕೂ ನಾನು ಸದಾ ಸಿದ್ಧನಿದ್ದೇನೆ. ನಿರಂತರ ಕಲಿಕೆಯೇ ಉತ್ತಮ ಆಡಳಿತದ ಮೂಲ ಎಂದು ನಂಬಿದ್ದೇನೆ.

ಮುಂದಿನ ಸಭೆ ವೇಳೆಗೆ ಇಂದಿನ ವರದಿಗಿಂತ ಉತ್ತಮ ಕಾರ್ಯಕ್ಷಮತೆ ವರದಿಯನ್ನು ನಿಮ್ಮಿಂದ ನಿರೀಕ್ಷಿಸುತ್ತೇನೆ. ಇಂದು ರಜೆ ದಿನವಾಗಿದ್ದರೂ ಸಭೆಗೆ ಆಗಮಿಸಿ, ಇಲಾಖೆಯ ಅಭಿವೃದ್ಧಿಗೆ ಬದ್ಧತೆಯಿಂದ ಪಾಲ್ಗೊಂಡಿರುವ ನಿಮ್ಮೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

ಕರ್ನಾಟಕದ ಅಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲ ಸಂಗ್ರಹಿಸುವ ಮಹತ್ವದ ಜವಾಬ್ದಾರಿಯನ್ನು ನಾವೆಲ್ಲರೂ ಸೇರಿ ಯಶಸ್ವಿಯಾಗಿಸೋಣ.

ರಾಜ್ಯ ಜಿಎಸ್‌ಟಿ ಸಂಗ್ರಹದಲ್ಲಿ ಉತ್ತಮ ಪ್ರಗತಿ ಸಾಧಿಸಿದೆ, ಶೇ.9ರಷ್ಟು ಪ್ರಗತಿ ಆಗಿದೆ, ಇದು ರಾಷ್ಟ್ರೀಯ ಸರಾಸರಿಗಿಂತ ಉತ್ತಮ ಸಾಧನೆಯಾಗಿದೆ.

ಗುಜರಾತ್, ತಮಿಳುನಾಡು, ಹರಿಯಾಣ ರಾಜ್ಯಗಳಿಗಿಂತ ಹೆಚ್ಚು ಪ್ರಗತಿ ರಾಜ್ಯದಲ್ಲಿ ಆಗಿರುವುದು ಸಮಾಧಾನದ ಸಂಗತಿ. ನಕಲಿ ರಶೀದಿ ಮತ್ತು ಬೋಗಸ್ ಕಂಪನಿ ಗಳನ್ನು ಪತ್ತೆ ಹಚ್ಚಿ 166 ಕೋಟಿ ರೂ. ಸಂಗ್ರಹಿಸಿದ್ದೇವೆ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವ ಪ್ರಮಾಣ ಹೆಚ್ಚಬೇಕು.

ತೆರಿಗೆದಾರರು ಕಚೇರಿಗಳಿಗೆ ಅಲೆದಾಡುವ ಅಗತ್ಯವಿಲ್ಲದಂತೆ, ಸಲಹೆ ಮತ್ತು ಸಹಕಾರ ನೀಡುವ, ಅವರ ಎಲ್ಲಾ ತೆರಿಗೆ ಸಂಬಂಧಿತ ಗೊಂದಲಗಳನ್ನು ಆನ್‌ಲೈನ್‌ನಲ್ಲಿಯೇ ಪರಿಹರಿಸುವ ನಾಗರಿಕ ಸ್ನೇಹಿ ವ್ಯವಸ್ಥೆ ಜಾರಿಗೆ ತಂದಿದ್ದೇವೆ.

ತೆರಿಗೆದಾರರಿಗೆ ಸಲಹೆ, ಸಹಕಾರ ಮತ್ತು ತೆರಿಗೆ ಸಂಬಂಧಿತ ಗೊಂದಲಗಳ ತ್ವರಿತ ಪರಿಹಾರವನ್ನು ಆನ್‌ಲೈನ್‌ನಲ್ಲಿಯೇ ಒದಗಿಸುವ ವ್ಯವಸ್ಥೆ ರೂಪಿಸಿದ್ದೇವೆ. ಮೈಸೂರು ವಿಭಾಗದಲ್ಲಿ ಕಾರ್ಯಕ್ಷಮತೆ ಕುಸಿತ ಆಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ, ಇದಕ್ಕೆ ನೆಪಗಳು, ಕಾರಣಗಳನ್ನು ಕೊಡು ವುದು ಸರಿಯಲ್ಲ, ಫಲಿತಾಂಶ ಮುಖ್ಯ, ಏನೇ ತಾಂತ್ರಿಕ ತೊಂದರೆಗಳಿದ್ದರೂ ಬಗೆಹರಿಸಿಕೊಂಡು ಉತ್ತಮ ಕಾರ್ಯಕ್ಷಮತೆ ನಿರೀಕ್ಷಿಸುತ್ತೇನೆ.

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಘೋಷಿಸುವಂತೆ ಆಗ್ರಹಿಸಿ ವಾಟಾಳ್ ಪ್ರತಿಭಟನೆ

ಹಾರ್ಡಿಂಜ್ ವೃತ್ತದಲ್ಲಿ ಈಡುಗಾಯಿ ಒಡೆದ ವಾಟಾಳ್



ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನಗರದ ಹಾರ್ಡಿಂಜ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.26(ಜಿಎ)–ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂದು ಅಧಿಕೃತವಾಗಿ ಘೋಷಣೆ ಮಾಡಬೇಕು ಎಂದು ಆಗ್ರಹಿಸಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನಗರದ ಹಾರ್ಡಿಂಜ್ ವೃತ್ತದಲ್ಲಿ ಈಡುಗಾಯಿ ಒಡೆದು ಪ್ರತಿಭಟನೆ ನಡೆಸಿದರು.

ಎಂಇಎಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ ಅವರು, ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು ರದ್ದುಪಡಿಸಬೇಕು. ಗಡಿ ಭಾಗದಲ್ಲಿ ಕನ್ನಡ ಉಳಿಯಬೇಕು. ಇದಕ್ಕಾಗಿ ಜು.15ರೊಳಗೆ ಬೆಳಗಾವಿ ಮಹಾನಗರ ಪಾಲಿಕೆಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ನೀಡಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಪ್ರತಿಕ್ರಿಯಿಸಿ, ಉಪ ನಗರ ನಿರ್ಮಾಣಕ್ಕೆ ನನ್ನ ವಿರೋಧವಿದೆ. ಬಿಡದಿ ರಣರಂಗ ಆಗಿದೆ. ಅಲ್ಲಿ ಟೌನ್‌ಶಿಪ್ ಆಗಬೇಕೆಂದು ಕುಮಾರಸ್ವಾಮಿ ಅವರೇ ನಿರ್ಧರಿಸಿದ್ದರು. ಅದನ್ನು ನಾನಾ ಕಾರಣಗಳಿಂದ ಕೈಬಿಟ್ಟಿದ್ದರು. ಸಿದ್ದರಾಮಯ್ಯ ಅದರ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ, ಈಗ ಡಿ.ಕೆ.ಶಿವಕುಮಾರ್ ಮಾಡಲೇಬೇಕು ಎಂದು ಹಠಕ್ಕೆ ಬಿದ್ದಿದ್ದಾರೆ ಎಂದರು.

ಅಲ್ಲಿ ಉಪ ನಗರ ಮಾಡೋದು ಬೇಡ. ಉಪನಗರ ಮಾಡಿದರೆ ಅದೊಂದು ರಿಯಲ್ ಎಸ್ಟೇಟ್ ದಂದೆ ಆಗುತ್ತದೆ. ರೈತರು ಕಣ್ಣೀರು ಹಾಕುತ್ತಿದ್ದಾರೆ. ರೈತರನ್ನ ಇಬ್ಭಾಗ ಮಾಡುವ ಕೆಲಸವನ್ನು ಸಿಎಂ ಮಾಡುತ್ತಿದ್ದಾರೆ. ಜನ ದುಡ್ಡಿನ ಆಸೆಗೆ ಬೀಳುತ್ತಿದ್ದಾರೆ. ಸಿಎಂ ಆದವರು ಸವಾಲಿನ ಜಿದ್ದಾಜಿದ್ದಿ ಎಂದು ತೊಡೆ ತಟ್ಟಬಾರದು. ಬೀದಿಲಿ ಕಚ್ಚಾಡುವ ಬದಲು ಕೂತು ಮಾತನಾಡಿ. ಪರಸ್ಪರ ವೈಯಕ್ತಿಕ ಪ್ರತಿಷ್ಠೆಯನ್ನು ರಾಜ್ಯದ ಜನ ನೋಡುತ್ತಿದ್ದಾರೆ. ಪಾಳೇಗಾರ ಸಂಸ್ಕೃತಿ ತೋರುತ್ತಾ, ಪರಸ್ಪರ ತೊಡೆ ತಟ್ಟಿ ನಿಂತಿದ್ದಾರೆ. ಕೂತು ಬಗೆಹರಿಸಿಕೊಳ್ಳದೆ ಇಡೀ ರಾಜ್ಯಕ್ಕೆ ಅಪಮಾನ ಮಾಡುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕೆ ರೈತರ ಜೀವನದ ಜೊತೆ ಆಟ ಆಡಬೇಡಿ. ಶಾಸಕರ ಸುಳಿದು ಚರ್ಚೆ ಮಾಡಿ ನಿರ್ಧಾರ ಕೈಗೊಳ್ಳಿ ಎಂದು ಆಗ್ರಹಿಸಿದರು.

ದಕ್ಷಿಣ ಕನ್ನಡಕ್ಕೆ ಮಾತ್ರ ಕಂಬಳ ಸೀಮಿತ ಆಗಲಿ

ಕಂಬಳ ದಕ್ಷಿಣ ಕನ್ನಡದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯಾಗಿದ್ದು, ಅಲ್ಲಿಯೇ ನಡೆಯಬೇಕು. ಮೈಸೂರು, ಬೆಂಗಳೂರು ಹಾಗೂ ಚಾಮರಾಜನಗರದಲ್ಲಿ ಕಂಬಳ ಆಯೋಜಿಸಬಾರದು. ನಾನು ಕಂಬಳ ವಿರೋಧಿಯಲ್ಲ, ಆದರೆ ಅದರ ಮೂಲ ಸಂಪ್ರದಾಯ ಉಳಿಸಬೇಕು. ಪ್ರಾಣಿಗಳಿಗೆ ಹಿಂಸೆ ಆಗುತ್ತದೆ ಎನ್ನುವ ಕಾರಣಕ್ಕೆ ದಕ್ಷಿಣ ಕನ್ನಡಕ್ಕೆ ಮಾತ್ರ ಕಂಬಳ ಸೀಮಿತ ಆಗಲಿ. ಡಿ.ಕೆ.ಶಿವಕುಮಾರ್ ಬೇಕಿದ್ದರೆ ದೊಡ್ಡ ಆಲಹಳ್ಳಿಯಲ್ಲಿ ಕಂಬಳ ಮಾಡಲಿ ಆದರೆ, ಮೈಸೂರಿನಲ್ಲಿ ಆಯೋಜಿಸಬಾರದು.

-ವಾಟಾಳ್ ನಾಗರಾಜ್, ಕನ್ನಡಪರ ಹೋರಾಟಗಾರ

ಸಮಾಜವನ್ನು ತಿದ್ದುವ ಸಾಹಿತ್ಯ ಹೆಚ್ಚು ಸೃಜಿಸಲಿ

●ಚಲನಚಿತ್ರ ನಿರ್ದೇಶಕ ಎಸ್.ನಾರಾಯಣ್ ಆಶಯ ●ಗುರುಗಳ ಗೌರವಾರ್ಥ ಕವನ ಸಂಕಲನ 'ವಿಪ್ರಚಂದ್ರ' ಬಿಡುಗಡೆ

ಮೈಸೂರು, ಜೂ.26(ಎಂಕೆ)– ಸಮಾಜವನ್ನು ತಿದ್ದುವ, ಸರಿದಾರಿಗೆ ತರುವ ಸಾಹಿತ್ಯ ಹೆಚ್ಚೆಚ್ಚು ಬರಬೇಕು ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಎಸ್.ನಾರಾಯಣ್ ಹೇಳಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ ಹಿರಿಯ ವಿದ್ಯಾರ್ಥಿಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯುವ ಲೇಖಕ ರಾಹುಲ್ ಕುಂಬರಹಳ್ಳಿ ರಚಿತ 'ವಿಪ್ರಚಂದ್ರ' ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಹಾಲ್ಗಡಲಲ್ಲಿ ತೇಲುವ ದೋಣಿಯಂತೆ' ಪೆನ್ನು ಹಿಡಿದರೆ ಅದಕ್ಕೆ ಬರೆಯಲು ಇಷ್ಟವಾಗಬೇಕು ಎಂದರು.

ಬರವಣಿಗೆ ಎಂಬುದು ಅಷ್ಟು ಸುಲಭ ಸಾಧ್ಯವಿಲ್ಲ. ಇದಕ್ಕೆ ಸಾಕಷ್ಟು ಶ್ರದ್ಧೆ, ಸಮಯ ಬೇಕು. ಪುಸ್ತಕಗಳು ಓದುಗರಿಗೆ ಒಳ್ಳೆಯ ಅನುಭವ ನೀಡುವಂತಿರಬೇಕು. ಈ ನಿಟ್ಟಿನಲ್ಲಿ ಬರವಣಿಗೆ ಮೈಗೂಡಿಸಿಕೊಳ್ಳುತ್ತಿರುವ ರಾಹುಲ್ ಕುಂಬರಹಳ್ಳಿ, ಗುರುಗಳು ಮತ್ತು ತಂದೆ– ತಾಯಿಯನ್ನು ನೆನಪಿಸಿಕೊಳ್ಳದ ಕಾಲಘಟ್ಟದಲ್ಲೂ ತಮ್ಮ ಗುರುಗಳಾದ ವಿಜಯ್‌ಕುಮಾರ್, ಪ್ರಸನ್ನಕುಮಾರ್ ಹಾಗೂ ಚಂದ್ರಶೇಖರ್ ಅವರ ಗೌರವಾರ್ಥವಾಗಿ ಕವನ ಸಂಕಲನಕ್ಕೆ 'ವಿಪ್ರಚಂದ್ರ' ಎಂಬ ಶೀರ್ಷಿಕೆ ಇಟ್ಟಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಲೇಖಕ ರಾಹುಲ್ ಕುಂಬರಹಳ್ಳಿ ರಚಿತ 'ವಿಪ್ರಚಂದ್ರ' ಕವನ ಸಂಕಲನವನ್ನು ಖ್ಯಾತ ಚಲನಚಿತ್ರ ನಿರ್ದೇಶಕ ಎಸ್.ನಾರಾಯಣ್ ಶುಕ್ರವಾರ ಬಿಡುಗಡೆ ಮಾಡಿದರು. ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಿವೃತ್ತ ಪ್ರಾಧ್ಯಾಪಕ ಎ.ಎಂ.ಶಿವಸ್ವಾಮಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಮೈಸೂರು ವಿವಿ ಆಡಳಿತಾಧಿಕಾರಿ ಪ್ರೊ.ಎಸ್.ಟಿ. ರಾಮಚಂದ್ರ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಗತಿಪರ ಚಿಂತಕಿ ಸವಿತಾ ಪ. ಮಲ್ಲೇಶ್ ಮತ್ತಿತರರಿದ್ದರು.

ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ದೇಶದಲ್ಲಿ ಕಂಡುಬರುವ ಕ್ಷೋಭೆಗಳಿಗೆ ಉತ್ತರ ನೀಡುವ ಕ್ರಾಂತಿಕಾರಿಕ ಸಾಹಿತ್ಯ ಇಂದಿನ ಅಗತ್ಯವಾಗಿದೆ. 1969 ರಲ್ಲಿ ಅಮೆರಿಕಾದಲ್ಲಿನ ಎರಡು ಪುಟಗಳ ಪುಟ್ಟ ಪತ್ರಿಕೆಯ ವರದಿಯಿಂದ ಅಲ್ಲಿನ ಅಧ್ಯಕ್ಷರೇ ರಾಜೀನಾಮೆ ನೀಡಬೇಕಾಗಿ ಬಂತು. ಅದೇ ರೀತಿ ರಾಜ್ಯದಲ್ಲಿ 1983 ರಲ್ಲಿ ನವಲಗುಂದ ಮತ್ತು ನರಗುಂದದಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ಬಗ್ಗೆ ಮಾಡಿದ ವರದಿಯಿಂದಾಗಿ ಅಂದಿನ ಸರ್ಕಾರವೇ ಉರುಳಿ ಹೋಯಿತು. ಈ ರೀತಿ ಜನರನ್ನು ಜಾಗೃತಗೊಳಿಸುವ, ಜನರಿಗೆ ಸತ್ಯ ತಿಳಿಸುವ ಸಾಹಿತ್ಯ ಬೇಕು ಎಂದರು.

ರಾಷ್ಟ್ರಕವಿ ಕುವೆಂಪು ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಜೊತೆ ಜೊತೆಯಾಗಿಟ್ಟು ಕಾರ್ಯಕ್ರಮಕ್ಕೆ ಚಾಲನೆ ನೀಡಿರುವುದು ಅರ್ಥಪೂರ್ಣವಾಗಿದೆ. ಏಕೆಂದರೆ ಈ ಇಬ್ಬರು ಮಹನೀಯರ ಕ್ಷೇತ್ರಗಳು ಭಿನ್ನವಾದರೂ ಅವರ ಆಶಯಗಳು ಒಂದೇ ಆಗಿವೆ ಎಂದು ಹೇಳಿದರು.

ಕೃತಿ ಕುರಿತು ನಿವೃತ್ತ ಪ್ರಾಧ್ಯಾಪಕ ಎ.ಎಂ.ಶಿವಸ್ವಾಮಿ ಮಾತನಾಡಿ, ಸಾಹಿತ್ಯ ಎಂಬುದು ಸ್ವ–ಅನುಭವ. ಕವಿಗಳ ಭಾವನೆಗಳ ಪ್ರಕಟಣೆ. ಹೀಗಾಗಿ ಕಾವ್ಯಗಳನ್ನು ಓದಿ ಅನುಭವಿಸಬೇಕು.

> 80ರ ದಶಕಕ್ಕಿಂತ ಮುಂಚೆ ರಾಜಕಾರಣಿಗಳು ಸಾಕಷ್ಟು ಓದಿಕೊಂಡವರು ಇದ್ದರು. ಇದರಿಂದ ರಾಜಕಾರಣ ಸರಿ ದಾರಿಯಲ್ಲಿ ಸಾಗುತ್ತಿತ್ತು. ಆಡಳಿತ ಕೂಡ ಉತ್ತಮವಾಗಿರುತ್ತಿತ್ತು. ಆದರೆ ಈಗ ಪರಿಸ್ಥಿತಿ ಭಿನ್ನವಾಗಿದೆ.
> – ಡಾ.ಬಿ.ಜೆ.ವಿಜಯ್ ಕುಮಾರ್, ಅಧ್ಯಕ್ಷ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ

ಸಾಹಿತ್ಯದಲ್ಲಿ ಸಮಾನತೆಯ ಸಂದೇಶಗಳು ಅಡಕಗೊಂಡಿರಬೇಕು. ರಾಹುಲ್ ಕುಂಬರಹಳ್ಳಿ ಅವರ ಕವನ ಸಂಕಲನದಲ್ಲಿ ಜಾತಿ ವಿನಾಶ, ಸಮಾನತೆಯ ಆಶಯ, ಸಮಸಮಾಜ ನಿರ್ಮಾಣದ ತುಡಿತದೊಳಗಿನ ಚೈತನ್ಯ ಕಂಡು ಬರುತ್ತದೆ ಎಂದು ಶ್ಲಾಘಿಸಿದರು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿವಿ ಆಡಳಿತಾಧಿಕಾರಿ ಪ್ರೊ.ಎಸ್.ಟಿ. ರಾಮಚಂದ್ರ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಗತಿಪರ ಚಿಂತಕಿ ಸವಿತಾ ಪ. ಮಲ್ಲೇಶ್, ಸಿ.ರಂಗಯ್ಯ, ಸಿ.ರಂಗರಾಮು, ರಂಗಸ್ವಾಮಿ, ಶೈಲಜಾ, ಶಾಲಿನಿ, ನಾಗೇಶ್ ಕಂದೇಗಾಲ ಮತ್ತಿತರರಿದ್ದರು.

ನಾಳೆ ಮೈಸೂರಲ್ಲಿ ರಾಜ್ಯಮಟ್ಟದ ತೃತೀಯ ಯೋಗ ಸಮ್ಮೇಳನ

ಮೈಸೂರು, ಜೂ.26(ಜಿಎ)–ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟದಿಂದ ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಜೂ.28 ರಂದು ಬೆಳಿಗ್ಗೆ 9.30ಕ್ಕೆ ರಾಜ್ಯಮಟ್ಟದ ತೃತೀಯ ಯೋಗ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪತಂಜಲಿ ಯೋಗ ಶಾಲೆ ಸಂಸ್ಥಾಪಕ ಬಿ.ಎನ್.ಎಸ್. ಅಯ್ಯಂಗಾರ್ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸುವರು. ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದ ಸಾನ್ನಿಧ್ಯದಲ್ಲಿ ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕಾರ್ಯಕ್ರಮ ಉದ್ಘಾಟಿಸುವರು. ವೇದ ವಿಜ್ಞಾನ ಶೋಧ ಸಂಸ್ಥಾನಂ ಅಧ್ಯಕ್ಷ ಪ್ರೊ.ರಾಮಚಂದ್ರ ಜಿ.ಭಟ್ ಅಧ್ಯಕ್ಷತೆ ವಹಿಸುವರು ಎಂದರು.

ಸಂಸ್ಕೃತ ವಿದುಷಿ ಕೆ.ಲೀಲಾ ಪ್ರಕಾಶ್ ಅವರ ಸಂಸ್ಕಾರ ವಾಹಿನಿ ಕೃತಿಯನ್ನು ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆ ಮಾಡುವರು. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಯೋಗಸಂಹಿತಾ ಸವಿಸಂಚಿಕೆ ಬಿಡುಗಡೆ ಮಾಡುವರು . ವಿವಿಧ ವಿಚಾರಗೋಷ್ಠಿಗಳು ನಡೆಯಲಿವೆ. ಸಂಜೆ 5.30ಕ್ಕೆ ಬೇಬಿಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಮಾರೋಪ ನಡೆಯಲಿದೆ. ಯೋಗ ಸಾಧಕರಿಗೆ ಸನ್ಮಾನ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆಯೋಜಕ ಸಮಿತಿ ಕಾರ್ಯದರ್ಶಿ ಎನ್.ಅನಂತ, ಉಪಾಧ್ಯಕ್ಷರಾದ ಬಿ.ಪಿ.ಮೂರ್ತಿ, ಟಿ.ಜಲೇಂದ್ರ ಕುಮಾರ್, ಯೋಗ ಕುಮಾರ್, ಎನ್. ಪುಷ್ಪಪತಿ, ಮಾದೇ ಗೌಡ, ಸಂಚಾಲಕಿ ಎಚ್.ಎನ್.ಶೈಲಜಾ ಉಪಸ್ಥಿತರಿದ್ದರು.

ಜೂ.29ರಿಂದ ಮೈಸೂರಲ್ಲಿ ಜಗನ್ನಾಥ ರಥಯಾತ್ರೆ, ವಾರ್ಷಿಕ ಕಾರ್ಯಕ್ರಮ



ಮೈಸೂರು, ಜೂ.26(ಜಿಎ)–ಮೈಸೂರಿನ ಜಗನ್ನಾಥ ಸಾಂಸ್ಕೃತಿಕ ಮತ್ತು ಕಲ್ಯಾಣ ಟ್ರಸ್ಟ್‌ನಿಂದ ವಿದ್ಯಾರಣ್ಯಪುರಂನ ಜಗನ್ನಾಥ ದೇವಸ್ಥಾನದಲ್ಲಿ ಜೂ.29ರಿಂದ ಆ.4ರವರೆಗೆ ಜಗನ್ನಾಥ ರಥಯಾತ್ರೆ ಮತ್ತು ವಾರ್ಷಿಕ ಕಾರ್ಯಕ್ರಮ ನಡೆಯಲಿದೆ ಎಂದು ಟ್ರಸ್ಟಿ ಘನಶ್ಯಾಮ ಪ್ರಧಾನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.16ರಂದು ಮಧ್ಯಾಹ್ನ 1.30ಕ್ಕೆ ವಿದ್ಯಾರಣ್ಯಪುರಂ ಮುಖ್ಯ ರಸ್ತೆಯಲ್ಲಿ ರಥಯಾತ್ರೆ ಪ್ರಾರಂಭಗೊಳ್ಳಲಿದೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಗೋಶಾಲ ಮ್ಯಾನೇಜಿಂಗ್ ಟ್ರಸ್ಟಿ ವಿಶಾಲ್ ಶರ್ಮ ಪಾಲ್ಗೊಳ್ಳುವರು. ವಿಶೇಷ ದಿನಗಳ ಕಾರ್ಯಕ್ರಮದ ಮಾಹಿತಿಗೆ 63601 83121 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದೇವಸ್ಥಾನ ಪ್ರಮುಖ ಜಿ.ಎಂ.ಗೋಪಾಲಕೃಷ್ಣ, ಟ್ರಸ್ಟಿ ಶ್ರೀಕಾಂತ್ ಉಪಸ್ಥಿತರಿದ್ದರು.

ಸೇಂಟ್ ಫಿಲೋಮಿನಾ ಕಾಲೇಜಲ್ಲಿ ಯೋಗ ದಿನಾಚರಣೆ



ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜು ಆವರಣದಲ್ಲಿ ನಡೆದ ಯೋಗ ದಿನಾಚರಣೆಯಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು ಯೋಗಾಭ್ಯಾಸ ಮಾಡಿದರು.

ಮೈಸೂರು, ಜೂ.26– ನಗರದ ಸೇಂಟ್ ಫಿಲೋಮಿನಾ ಕಾಲೇಜು (ಸ್ವಾಯತ್ತ)ದ ಆಂತರಿಕ ಗುಣಮಟ್ಟ ಭರವಸೆ ಘಟಕ(ಐಕ್ಯೂಎಸಿ), ಎಂಬಿಎ ಹಾಗೂ ಎಂಸಿಎ ವಿಭಾಗಗಳ ಸಹಯೋಗದಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಕಳೆದ ಭಾನುವಾರ ಕಾಲೇಜಿನ ಸಭಾಂಗಣದಲ್ಲಿ ಆಚರಿಸಲಾಯಿತು.

ಮೈಸೂರಿನ ಯೋಗದರ್ಶನಂ ಸಂಸ್ಥೆಯ ಯೋಗ ತರಬೇತುದಾರರಾದ ಕೆ.ಎಸ್. ಶಿಲ್ಪಾ ಅವರು ವಿವಿಧ ಯೋಗಾಸನಗಳು, ಪ್ರಾಣಾಯಾಮ ಹಾಗೂ ವಿಶ್ರಾಂತಿ ವ್ಯಾಯಾಮಗಳ ಪ್ರಾಯೋಗಿಕ ಪ್ರದರ್ಶನ ನೀಡಿದರು. ಈ ಮೂಲಕ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೆ ಸಮಗ್ರ ಆರೋಗ್ಯ ಮತ್ತು ಆರೋಗ್ಯಕರ ಜೀವನ ಶೈಲಿಯ ಬಗ್ಗೆ ಜಾಗೃತಿ ಮೂಡಿಸಿದರು. ಯೋಗಾಭ್ಯಾಸವು ಒತ್ತಡ ನಿರ್ವಹಣೆ, ಏಕಾಗ್ರತೆ ವೃದ್ಧಿ, ದೇಹದ ನಮ್ಯತೆ ಹೆಚ್ಚಳ ಹಾಗೂ ಒಟ್ಟಾರೆ ಆರೋಗ್ಯ ಸುಧಾರಣೆಗೆ ಹೇಗೆ ನೆರವಾಗುತ್ತದೆ ಎಂಬುದನ್ನು ವಿವರಿಸಿದರು.

ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿವಿಧ ಯೋಗಾಸನಗಳನ್ನು ಅಭ್ಯಾಸ ಮಾಡಿದರು. ಡಾ.ವಿ. ದೀಪಾ ಕಾರ್ಯಕ್ರಮದ ಸಂಯೋಜಕರಾಗಿ, ವಿ.ಯು.ರೀನಾ ಮೋಲ್ ಸಂಘಟನಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. ಐಕ್ಯೂಎಸಿ ಸಂಯೋಜಕರಾದ ಎ.ಥಾಮಸ್ ಗುಣಶೀಲನ್ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಕಡೆಯಲ್ಲಿ ಯೋಗವನ್ನು ಜೀವನ ಶೈಲಿಯ ಅವಿಭಾಜ್ಯ ಭಾಗವಾಗಿ ಅಳವಡಿಸಿಕೊಳ್ಳುವ ಮೂಲಕ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಕಾಯ್ದುಕೊಳ್ಳುವ ಸಂಕಲ್ಪ ಮಾಡಲಾಯಿತು.

ಜು.10ರವರೆಗೆ ಸಂಚಾರ ದಂಡದಲ್ಲಿ ಶೇ.50ರಷ್ಟು ರಿಯಾಯಿತಿ

ಮೈಸೂರು,ಜೂ.26– ಸಾರಿಗೆ ಇಲಾಖೆಯಲ್ಲಿ 1991–92 ರಿಂದ 2021–22 ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಡಿ.ಎಸ್.ಎ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಸರ್ಕಾರ ಆದೇಶ ಹೊರಡಿಸಿದ್ದು, ಸಾರ್ವಜನಿಕರು ಜೂನ್ 21 ರಿಂದ ಜುಲೈ 10 ರವರೆಗೆ ಮಾತ್ರ ದಂಡ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಜೂ.29 ಮೈಸೂರು ವಲಯ ಸಾಂಸ್ಕೃತಿಕ ಸಂಘಟಕರ ಸಮಾವೇಶ

ಮೈಸೂರು, ಜೂ.26(ಜಿಎ)–ಕರ್ನಾಟಕ ರಂಗ ಪರಿಷತ್ತು ಕೇಂದ್ರ ಸಮಿತಿಯಿಂದ ನಗರದ ಕಿರು ರಂಗಮಂದಿರದಲ್ಲಿ ಜೂನ್ 29ರಂದು ಬೆಳಿಗ್ಗೆ 10.30ಕ್ಕೆ ಮೈಸೂರು ವಲಯ ಸಾಂಸ್ಕೃತಿಕ ಸಂಘಟಕರ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಚಲನ ಮೈಸೂರು ತಂಡದ ದೀಪಕ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್ ಗೌಡ ಸಮಾವೇಶ ಉದ್ಘಾಟಿಸುವರು. ಅಭಿಯಂತರರು ತಂಡದ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು ಅಧ್ಯಕ್ಷತೆ ವಹಿಸುವರು. ರಂಗಕರ್ಮಿ ರಾಜಶೇಖರ ಕದಂಬ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಕಾವಾ ಆಡಳಿತಾಧಿಕಾರಿ ನಿರ್ಮಲ ಮಠಪತಿ, ನೃತ್ಯಗಿರಿ ಸಂಸ್ಥಾಪಕಿ ಕೃಪಾ ಪಡ್ಕೆ ಉಪಸ್ಥಿತರಿರುವರು ಎಂದರು.

ನಟನ ಮೈಸೂರು ಸಂಸ್ಥೆಯ ಸ್ಥಾಪಕ ನಟ ಮಂಡ್ಯ ರಮೇಶ್ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ನೀತಿ ಅನುಷ್ಠಾನ: ಸಾಂಸ್ಕೃತಿಕ ಸಂಘ– ಸಂಸ್ಥೆಗಳ ಪಾತ್ರ ಕುರಿತು ವಿಚಾರಗೋಷ್ಠಿ ನಡೆಯಲಿದೆ. ಲೇಖಕ ಬರಗೂರು ರಾಮಚಂದ್ರಪ್ಪ ಸಮಿತಿ ಸಿದ್ಧಪಡಿಸಿದ ಸಾಂಸ್ಕೃತಿಕ ನೀತಿಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಬೇಕು ಎನ್ನುವುದು ನಮ್ಮ ಮುಖ್ಯ ಉದ್ದೇಶ ಎಂದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಂಗ ಪರಿಷತ್ತಿನ ಸಂಚಾಲಕ ಸಂಸಾ ಸುರೇಶ್, ರಾಜಶೇಖರ್ ಕದಂಬ, ಸುರೇಶ್ ಬಾಬು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

27.06.2026 ಶನಿವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಶ್ರೀರಾಮ ಮಂದಿರ :** ನೂತನ ನವಗ್ರಹ ಹಾಗೂ ಪಂಚಮುಖಿ ಆಂಜನೇಯಸ್ವಾಮಿ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮ, ಬೆಳಿಗ್ಗೆ 5.30ರಿಂದ 6.15ರೊಳಗೆ ಸಲ್ಲುವ ಶುಭ ಮಿಥುನ ಲಗ್ನ ಪುಷ್ಕರಾಂಶದಲ್ಲಿ ಕಳಾಕರ್ಷಣ ಹೋಮಾದಿಗಳು, 11 ಗಂಟೆಗೆ ಪೂರ್ಣಾಹುತಿ, ವಿಗ್ರಹಗಳಿಗೆ ಕುಂಬಾಭಿಷೇಕ, ಮಧ್ಯಾಹ್ನ 12.30ಕ್ಕೆ ಅಭಿಜಿನ್ ಮುಹೂರ್ತದಲ್ಲಿ ಮಹಾಮಂಗಳಾರತಿ, ಪ್ರತಿಷ್ಠಿತ ದೇವರ ದರ್ಶನ ಭಾಗ್ಯ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮ ಮಂದಿರ, ಗೋಕುಲಂ ಮೊದಲನೇ ಹಂತ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ನೋವು, ಸ್ಪಾಂಡಿಲೋಸಿಸ್, ಭುಜನೋವು, ಬೆನ್ನು ನೋವಿಗೆ ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.
- **ಅಪೋಲೋ ಆಸ್ಪತ್ರೆಗಳು ಡಿನ್ ಕ್ರಿಕೆಟ್ ಲೀಗ್ (ಸೀಸನ್ 7) :** ಪುರುಷರ ಚಾಂಪಿಯನ್‌ಶಿಪ್ ಸುತ್ತು ಮತ್ತು ಮಹಿಳಾ ಲೀಗ್ ಉದ್ಘಾಟನೆ, ಉದ್ಘಾಟನೆ : ಸೆಲೆಬ್ರಿಟಿ ಕ್ರಿಕೆಟ್ ಲೀಗ್‌ನ ರಾಜೀವ್ ಹನು, ಜೆ.ಕೆ.ಟೈರ್ಸ್ ಉಪಾಧ್ಯಕ್ಷ ವಿ. ಈಶ್ವರರಾವ್, ರೆ. ಡಾ. ಲೂರ್ದು ಪ್ರಸಾದ್ ಜೋಸೆಫ್, ಸುಚಿತ್ರ ರಾಯ್ರೋತ್, ಅಪೋಲೋ ಆಸ್ಪತ್ರೆ ಹಿರಿಯ ಉಪಾಧ್ಯಕ್ಷ ಎನ್.ಜಿ. ಭಾರತೀಶ ರೆಡ್ಡಿ, ಡಾ. ಎಂ.ಡಿ. ರಶ್ಮಿ, ಬಿ.ಎಂ. ಗೌತಮ್, ಕಿಶನ್ ನಟರಾಜ್, ಶಶಿಕುಮಾರ್, ಸ್ಥಳ: ಸೇಂಟ್ ಫಿಲೋಮಿನಾ ಕಾಲೇಜು ಮೈದಾನ, ಬೆಳಗ್ಗೆ 9.30ಕ್ಕೆ.
- **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಗರುಡಗಂಭ (ದೀಪಸ್ತಂಭ) ಪ್ರತಿಷ್ಠಾಪನಾ ಕಾರ್ಯಕ್ರಮ, ಬೆಳಗ್ಗೆ 6.30 ರಿಂದ ಪಂಚಗವ್ಯ ಸ್ನಾಪನೆ, ಕಳಶರಾಧನೆ, ನ್ಯಾಸಹೋಮ, ಪೂರ್ಣಾವತಿ, ಗರುಡಗಂಭ ಪ್ರತಿಷ್ಠಾಪನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ಹನುಮಂತನಗರ, ಬನ್ನಿಮಂಟಪ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಭಗಂದರ (ಫಿಸ್ತೂಲ), ಚರ್ಮದ ಕಾಯಿಲೆ, ಮೂಗು ಸೋರುವಿಕೆ, ಕಟ್ಟಿದ ಮೂಗು, ಸೀನುವುದು, ಗಂಟಲು ನೋವು, ತಲೆ ನೋವು ಸಮಸ್ಯೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ :** ರಕ್ತದಾನ ಮತ್ತು ಅಂಗಾಂಗ ದಾನ, ಪ್ರತಿಜ್ಞಾ ವಿಧಿ ಸ್ವೀಕಾರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ :** ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಅತಿಥಿಗಳು : ಕಸಾಪ ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಕುಲಸಚಿವ ಪ್ರೊ. ಸಿ.ಎಸ್. ಆನಂದಕುಮಾರ್, ಹಣಕಾಸು ಅಧಿಕಾರಿ ಪ್ರೊ. ಎಸ್. ನಿರಂಜನ್‌ರಾಜ್, ಡೀನ್ ಡಾ. ಎನ್. ಆನಂದಗೌಡ, ಸ್ಥಳ: ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10ಕ್ಕೆ.
- **ಕೈಗಾರಿಕೆ ಇಲಾಖೆ, ಎಂಎಸ್‌ಎಂಇ ಇಲಾಖೆ ಕೈಗಾರಿಕಾ ಸಂಸ್ಥೆಗಳು :** ವಿಶ್ವ ಎಂಎಸ್‌ಎಂಇ ದಿನಾಚರಣೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಪ್ರಗತಿಯ ಅವಲೋಕನ, ಸವಾಲು ಸಮಸ್ಯೆಗಳ ಪರಿಹಾರ ಚಿಂತನ ಮಂಥನ, ಸ್ಥಳ: ಮೈಸೂರು ಕೈಗಾರಿಕೆಗಳ ಸಂಘದ ಆವರಣ, ಬೆಳಗ್ಗೆ 10ಕ್ಕೆ.
- **ಸ್ವಸ್ತಿ ಅರ್ಥೋ ಅಂಡ್ ಇಎನ್‌ಟಿ ಕ್ಲಿನಿಕ್ :** ಮೂಳೆ ಖನಿಜ ಸಾಂದ್ರತೆ ಮತ್ತು ವೈದ್ಯರ ಸಮಾಲೋಚನೆ, ಸ್ಥಳ: ಕ್ಲಿನಿಕ್ ಆವರಣ, ಶ್ರೀ ಕರುಮಾರಮ್ಮ ದೇವಸ್ಥಾನದ ಬಳಿ, ವಿದ್ಯಾರಣ್ಯಪುರಂ, ಬೆಳಗ್ಗೆ 10 ರಿಂದ.
- **ಮೈಸೂರಿನ ಬಿಲ್ಡರ್ ಅಸೋಸೋಯೇಷನ್ ಆಫ್ ಇಂಡಿಯಾ, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ :** ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಗ್ರೀನ್–2026 ಪರಿಸರ ಸ್ನೇಹಿ ಪದಾರ್ಥಗಳ ವಸ್ತು ಪ್ರದರ್ಶನ, ಉದ್ಘಾಟನೆ : ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಶ್ರೀಮತಿ ಉಷಾಕುಮಾರಿ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 11 ರಿಂದ.
- **ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಶ್ರೀ ಕೆಂಪೇಗೌಡ ಜಯಂತ್ಯೋತ್ಸವ ಸಮಿತಿ :** ನಾಡಪ್ರಭು ಶ್ರೀ ಕೆಂಪೇಗೌಡರ 517 ನೇ ಜಯಂತಿ, ಬೆಳಗ್ಗೆ 9 ಗಂಟೆಗೆ ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕರ್ನಾಟಕ ಕಲಾಮಂದಿರ ದವರೆಗೆ ಮೆರವಣಿಗೆ, ಸಾನ್ನಿಧ್ಯ : ಶ್ರೀ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಉದ್ಘಾಟನೆ : ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಉಪಸ್ಥಿತರು : ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಹೆಚ್.ಡಿ. ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎನ್.ರಂಗಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಟಿ.ಎಸ್. ಶ್ರೀವತ್ಸ, ಜಿ.ಡಿ. ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಕೆ.ವೆಂಕಟೇಶ್, ಡಾ. ಹೆಚ್.ಸಿ ಮಹದೇವಪ್ಪ, ವಿಧಾನ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕೆ. ಶಿವಕುಮಾರ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಕರ್ನಾಟಕ ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತ ಹಾಗೂ ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ಯಾರಿಜಾನ್, ಸ್ಥಳ: ಕಲಾಮಂದಿರ, ಮಧ್ಯಾಹ್ನ 12ಕ್ಕೆ.
- **ವಿಶ್ವಮೈತ್ರಿ ಬುದ್ಧ ವಿಹಾರ :** ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಭೇಟಿ, ಸ್ಥಳ: ವಿಶ್ವ ಮೈತ್ರಿ ಬುದ್ಧ ವಿಹಾರ, ಬಲ್ಲಾಳ್ ಸರ್ಕಲ್, ಮಧ್ಯಾಹ್ನ 3ಕ್ಕೆ.
- **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 938, ಕಥೆ ಹೇಳುವವರು: ಶ್ರೀಮತಿ ಹೊನ್ನಮ್ಮ, ಬಿಐಇಆರ್‌ಟಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಛೇರಿ, ಉತ್ತರ ವಲಯ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಸಂಘದ ಕಚೇರಿ ಆವರಣ, ಸಂಜೆ 5.30ಕ್ಕೆ.
- **ಕರ್ನಾಟಕ ಏಕೀಕರಣ ಟ್ರಸ್ಟ್ :** ಕರ್ನಾಟಕ ಏಕೀಕರಣ ಹೋರಾಟಗಾರರಾದ ಡಾ. ಸಿದ್ಧನಾಥ ಬಳ್ಳಾರಿ ಸ್ಮರಣಾರ್ಥ ಡಾ. ಸುಜಾತ ಅಕ್ಕಿಯವರ ಮೂರು ಏಕವ್ಯಕ್ತಿ ಪ್ರದರ್ಶನ ನಾಟಕೋತ್ಸವ, ಡಾ. ಬಿ.ಎಸ್. ದಿವ್ಯಾ ಅವರಿಂದ ಅಕ್ಕ ನಾಗಲೆ ಏಕವ್ಯಕ್ತಿ ನಾಟಕ ಪ್ರದರ್ಶನ, ನಿರ್ದೇಶನ : ಡಾ. ಸುಜಾತ ಅಕ್ಕಿ, ಸಹ ನಿರ್ದೇಶನ : ಅರಸೀಕೆರೆ ಯೋಗಾನಂದ ರಂಗಾಯಣ, ಸ್ಥಳ: ಕಿರುರಂಗ ಮಂದಿರ ಆವರಣ, ಸಂಜೆ 6ಕ್ಕೆ.
- **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ವಿದುಷಿ ರಮಣಿ ಶಂಕರ್ ಅವರಿಂದ ಗಾಯನ, ವಿದ್ವಾನ್ ಕೆ. ಮಹತೀ–ಪಿಟೀಲು, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಜಯನಗರ ಶ್ರೀರಾಮಮಂದಿರ, ಸಂಜೆ 6 ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಅವರಿಂದ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.
- **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ :** 'ಹಕ್ಕಿ ಮತ್ತು ಅವಳು' ವಿಶಿಷ್ಟ ಏಕವ್ಯಕ್ತಿ ಕಾವ್ಯಾಭಿನಯ ರಂಗಪ್ರಯೋಗ, ಪರಿಕಲ್ಪನೆ, ವಿನ್ಯಾಸ ಹಾಗೂ ನಿರ್ದೇಶನ : ಖ್ಯಾತ ರಂಗಕರ್ಮಿ ಡಾ. ಶ್ರೀಪಾದ ಭಟ್, ಸ್ಥಳ: ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಹಾರ್ಡ್ವಿಕ್ ಶಾಲಾ ಆವರಣ, ಸಂಜೆ 6ಕ್ಕೆ.
- **ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ನೆನಪಿನಂಗಳ ಸಂವಾದ–6, ಅತಿಥಿಗಳು : ಕಂಸಾಳೆ ಮತ್ತು ಜನಪದ ತಜ್ಞ ಯು.ಎಸ್. ರಾಮಣ್ಣ, ಸ್ಥಳ: ಶ್ರೀರಂಗ, ರಂಗಾಯಣ ಆವರಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ – ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಯೋಗದ ಜಗತ್ತು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಂಬೆ ಜಯಶ್ರೀ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಹೆಚ್.ಡಿ. ಕೋಟೆ ಕೆ. ದೇವರಾಜು ಮತ್ತು ಸಂಗಡಿಗರಿಂದ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, ಮಕ್ಕಳ ಸಾಹಿತ್ಯರಂಗ–ಮಕ್ಕಳ ಪತ್ರಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ–ಬಿ.ಜಿ. ಕವಿತಾ ಮತ್ತು ಚಿನ್ಮಯಿ ಕೆ.ಎಸ್., 4.00 ನಾಟಕ–ತಾಯಿ, ರಚನೆ–ಹೆಚ್. ಎಸ್. ಮೋಹನ್, ನಿರ್ಮಾಣ–ಉಮೇಶ್ ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ : ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಾವಯವ ಬೇಸಾಯದ ಪ್ರಾಮುಖ್ಯತೆ. ಈ ಕುರಿತು ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ನವಲೂರು ಪಂಚಾಯಿತಿ ಸೂರಹಳ್ಳಿ ಗ್ರಾಮದ ಎಸ್.ಜಿ. ಸುಬ್ಬಣ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಎನ್. ಕೇಶವ ಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪ್ರಭಾತ್ ಮುಖೋಪಾಧ್ಯಾಯ್– ಸಂತೂರ್ ವಾದನ

ಲಲಿತ ಮಹಲ್ ನಗರದಲ್ಲಿ ಕೆಂಪೇಗೌಡರ ವೃತ್ತ ಅಲಂಕಾರ



ಮೈಸೂರು, ಜೂ.26(ಎಂಕೆ)– ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವದ ಅಂಗವಾಗಿ ಮೈಸೂರು–ಟಿ.ನರಸೀಪುರ ಜಂಕ್ಷನ್(ಲಲಿತಮಹಲ್ ನಗರ) ನಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನೊಳಗೊಂಡ ವೃತ್ತವನ್ನು ಒಕ್ಕಲಿಗರ ಸಂಘ ಮೈಸೂರು ಪೂರ್ವ ವಲಯದ ವತಿಯಿಂದ ಅಭಿವೃದ್ಧಿಪಡಿಸಲಾಗಿದೆ.

ಮೈಸೂರು ಮಹಾನಗರ ಪಾಲಿಕೆಗೆ ಅನುಮತಿ ಕೋರಿ ಸಂಘದ ವತಿಯಿಂದ ಪತ್ರ ಬರೆಯಲಾಗಿದ್ದು, ವೃತ್ತದ ಅಭಿವೃದ್ಧಿ ಕಾಮಗಾರಿಗಳನ್ನು ಭರದಿಂದ ನಡೆಸಲಾಗಿದೆ. ಪ್ರತಿಮೆ ಸುತ್ತಲೂ ಗಿಡಗಳ ಪಾಟ್‌ಗಳನ್ನಿಟ್ಟು ಅಲಂಕರಿಸಲಾಗಿದೆ. ಅಲ್ಲದೆ ಪ್ರತಿಮೆ ಮಾಲಾರ್ಪಣೆ ಮಾಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಿ, ಹೂ ಹಾಗೂ ವಿದ್ಯುತ್ ದೀಪಾಲಂಕಾರದಿಂದ ಸಿಂಗರಿಸಲಾಗಿದೆ.

ಈ ಹಿಂದೆ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ್ದೆ ವಿವಾದವಾಗಿತ್ತು. ಆದ್ದರಿಂದ ಮತ್ಯಾವುದೇ ವಿವಾದಕ್ಕೆ ಅವಕಾಶ ನೀಡದಂತೆ ನಗರಪಾಲಿಕೆ ಹಾಗೂ ಪೊಲೀಸರ ಗಮನಕ್ಕೆ ತಂದು ಸಂಘದಿಂದಲೇ ವೃತ್ತವನ್ನು ಅಭಿವೃದ್ಧಿ ಮಾಡಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಪ್ರತಾಪ್ (ಶಂಕಿ ಗೌಡ) 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕಳೆದ ಮೂರು ವರ್ಷದಿಂದ ವೃತ್ತದಲ್ಲಿ ಆಲನಹಳ್ಳಿ ಹಾಗೂ ಸುತ್ತಮುತ್ತಲಿನ ಬಡಾವಣೆಯಲ್ಲಿನ ಒಕ್ಕಲಿಗ ಸೇರಿದಂತೆ ಹಲವು ಸಮುದಾಯಗಳು ಸೇರಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಈ ವರ್ಷವೂ ವಿಜೃಂಭಣೆಯಿಂದ ಜಯಂತ್ಯೋತ್ಸವ ಆಚರಿಸಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ಜೂ.26– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026–27ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ 10ನೇ ತರಗತಿ, SSLC ನಂತರದ PUC, Diploma, ITI, Degree, Engineering, Nursing, B.Ed, Post Graduation ಹಾಗೂ ಇತರೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಜನವರಿ 31, 2027 ರೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಮೊದಲು Aadhaar Seeding, College Details, Course Details ಮತ್ತು NSP OTR Validation ನೊಂದಿಗೆ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು ಡಾ.ಬಾಬು ಜಗಜೀವನರಾಂ ಭವನಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ, ಬಡಾವಣೆ ಪಡುವಾರಹಳ್ಳಿ ಮೈಸೂರು–12, ದೂರವಾಣಿ ಸಂಖ್ಯೆ–0821–2520910/ ಮೊ.ಸಂ. 8880421982 ನ್ನು ಸಂಪರ್ಕಿಸಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶುಭಹಾರೈಕೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕೆಎಸ್‌ಒಯು)ದ ನೂತನ ಕುಲಪತಿಯಾಗಿ ನೇಮಕಗೊಂಡ ಮೈಸೂರು ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಜ್ಞಾನಪ್ರಕಾಶ್ ಅವರನ್ನು ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಭೇಟಿಯಾಗಿ ಶ್ರೀ ಸ್ವಾಮಿಯ ಪ್ರಸಾದ ನೀಡಿ ಶುಭಹಾರೈಸಿದರು.

ಮೈಸೂರಿನಲ್ಲಿ ಪ್ಯಾನಿಕ್ ಬಟನ್, ವಿಎಲ್‌ಟಿಡಿ ದುಬಾರಿ ಬೆಲೆಗೆ ಮಾರಾಟ

ಕಡಿವಾಣ ಹಾಕದ ಸರ್ಕಾರದ ವಿರುದ್ಧ ವಾಹನ ಮಾಲೀಕರ ಆಕ್ರೋಶ

- ●ಈ ಸಾಧನ ಅಳವಡಿಸದಿದ್ದರೆ ಎಫ್‌ಸಿ, ನ್ಯಾಷನಲ್ ಪರ್ಮಿಟ್ ಇಲ್ಲ
- ●ದುಬಾರಿ ಬೆಲೆ ಕೊಟ್ಟು ಖರೀದಿ ಅನಿವಾರ್ಯ ಪರಿಸ್ಥಿತಿ
- ●ಆದರೂ ಕಾರ್ಯ ನಿರ್ವಹಿಸದ ಸಾಧನ
- ●ಸರ್ಕಾರದ ನಿಯಮ ಪಾಲನೆಗೆ ಮಾತ್ರ ಅಳವಡಿಕೆ

ಮೈಸೂರು, ಜೂ.26(ಬಿಎಲ್‌ಯು)– ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಸುಪ್ರೀಂಕೋರ್ಟ್ ಸಾರ್ವಜನಿಕ ಸೇವಾ ವಾಹನಗಳಿಗೆ ಎಮರ್ಜೆನ್ಸಿ ಪ್ಯಾನಿಕ್ ಬಟನ್ ಹಾಗೂ ಸಾರ್ವಜನಿಕ ಸಾರಿಗೆ ಮತ್ತು ವಾಣಿಜ್ಯ ವಾಹನಗಳಿಗೆ ವೆಹಿಕಲ್ ಲೋಕೇಷನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿಡಿ) ಅಳವಡಿಕೆಯನ್ನು ಕಡ್ಡಾಯಗೊಳಿಸಿದೆ. ಆದರೆ ಈ ಸಾಧನವನ್ನು ದುಬಾರಿ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಅಲ್ಲದೆ ಇದು ಕಾರ್ಯ ನಿರ್ವಹಿಸುತ್ತಿಲ್ಲ ಎಂದು ವಾಹನ ಚಾಲಕರು ಹಾಗೂ ಮಾರಾಟಗಾರರು ಗಂಭೀರ ಆರೋಪ ಮಾಡಿದ್ದಾರೆ.

ದೆಹಲಿಯಲ್ಲಿ ನಿರ್ಭಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ನಂತರ ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಕೇಂದ್ರ ಸರ್ಕಾರ ನಿರ್ಭಯ ಯೋಜನೆಯಡಿ ಸಾರ್ವಜನಿಕ ಸೇವಾ ವಾಹನಗಳಿಗೆ ಎಮರ್ಜೆನ್ಸಿ ಪ್ಯಾನಿಕ್ ಬಟನ್ ಹಾಗೂ ವೆಹಿಕಲ್ ಲೋಕೇಷನ್ ಟ್ರ್ಯಾಕಿಂಗ್ ಡಿವೈಸ್ ಅಳವಡಿಕೆಯನ್ನು ಕಡ್ಡಾಯಗೊಳಿಸಿದೆ.

ಮೋಟಾರ್ ಕ್ಯಾಬ್, ಮ್ಯಾಕ್ಸಿ ಕ್ಯಾಬ್ ಎಫ್‌ಸಿ ಪಡೆಯಲು ಹಾಗೂ ಪ್ಯಾಸೆಂಜರ್ ಬಸ್ ಹಾಗೂ ಗೂಡ್ಸ್ ವೆಹಿಕಲ್‌ಗಳು ನ್ಯಾಷನಲ್ ಪರ್ಮಿಟ್ ಪಡೆಯಲು ಈ ಸಾಧನವನ್ನು ಕಡ್ಡಾಯವಾಗಿ ಅಳವಡಿಸಿರಬೇಕು. ಇಲ್ಲವೆಂದರೆ ಎಫ್‌ಸಿ ಹಾಗೂ ನ್ಯಾಷನಲ್ ಪರ್ಮಿಟ್ ಅನ್ನು ಆರ್‌ಟಿಒ ನೀಡುವುದಿಲ್ಲ.

ಸರ್ಕಾರದಿಂದ ಅನುಮೋದಿತ ಮಾರಾಟಗಾರರಿಂದ ಈ ಸಾಧನಗಳನ್ನು ಖರೀದಿಸಬೇಕು. ಅನಧಿಕೃತ ಮಾರಾಟಗಾರರಿಂದ ಅಳವಡಿಸಿಕೊಂಡ ಸಾಧನ ಕಾನೂನಾತ್ಮಕವಾಗಿ ಮಾನ್ಯ ಮಾಡುವುದಿಲ್ಲ ಎಂದು ಸರ್ಕಾರ ಎಚ್ಚರಿಸಿದೆ.

ಇದರಿಂದ ಪ್ರತಿಯೊಂದು ವಾಹನಕ್ಕೂ ಅನಿವಾರ್ಯವಾಗಿ ಈ ಸಾಧನಗಳನ್ನು ಅಳವಡಿಸಿಕೊಳ್ಳಬೇಕಿದೆ. ಆದರೆ ಸರ್ಕಾರ ನಿಗದಿ ಮಾಡಿರುವುದಕ್ಕಿಂತ ದುಬಾರಿ ಬೆಲೆಗೆ ಈ ಸಾಧನಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ವಾಹನ ಚಾಲಕರು ಹಾಗೂ ಮಾಲೀಕರು ಆರೋಪ ಮಾಡುತ್ತಿದ್ದಾರೆ.

ಎಫ್ ಸಿ ಹಾಗೂ ನ್ಯಾಷನಲ್ ಪರ್ಮಿಟ್ ಪಡೆಯಲು ವಾಹನ ಮಾಲೀಕರು ದುಬಾರಿ ಬೆಲೆ ಕೊಟ್ಟು ಈ ಸಾಧನ ಅಳವಡಿಸಿಕೊಳ್ಳುತ್ತಿದ್ದಾರೆ. ಲಕ್ಷಾಂತರ ವಾಹನಗಳಿಗೆ ಇದನ್ನು ಅಳವಡಿಸುತ್ತಿರುವುದರಿಂದ ಇದೊಂದು ಹಗಲು ದರೋಡೆಯಾಗಿದೆ. ಈ ಬಗ್ಗೆ ಆರ್‌ಟಿಒ ದವರಿಗೆ ದೂರು ನೀಡಿದರೆ ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದೇಳಿ ಕೈತೊಳೆದುಕೊಳ್ಳುತ್ತಿದ್ದಾರೆ ಎಂದು ವಾಹನ ಮಾಲೀಕರು ಆರೋಪಿಸುತ್ತಿದ್ದಾರೆ.

ಪ್ಯಾನಿಕ್ ಬಟನ್ ಹಾಗೂ ವಿಎಲ್‌ಟಿಡಿಯನ್ನು ನಿಗದಿತ ಬೆಲೆಗೆ ಮಾರಾಟ ಮಾಡಲು ಸರ್ಕಾರದಿಂದ ಮಾರಾಟಗಾರರಿಗೆ ಇಂತಿಷ್ಟು ಲಾಭವೆಂದು ನಿಗದಿ ಮಾಡಲಾಗಿದೆ. ಆಗ ಮಾರಾಟಗಾರರು ಈ ಲಾಭದ ಜೊತೆಗೆ ಹೆಚ್ಚು ಬೆಲೆ ನಿಗದಿ ಮಾಡಿ ಮತ್ತಷ್ಟು ಲಾಭ ಮಾಡುತ್ತಿದ್ದಾರೆ.

ಹೆಚ್ಚು ಬೆಲೆ ಕೊಟ್ಟು ಈ ಸಾಧನ ಅಳವಡಿಸಿದರೆ ಅದು ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ಎಫ್ ಸಿ ಹಾಗೂ ಪರ್ಮಿಟ್ ಪಡೆಯಲು ಮಾತ್ರ ಇದನ್ನು ಖರೀದಿಸಬೇಕಾಗಿದೆ. ಈ ಕಾರಣದಿಂದ ಈ ಸಾಧನ ವಾಹನಗಳಲ್ಲಿ ನಾಮಕಾವಸ್ತೆಗೆ ಇದೆ ಎಂದು ವಾಹನ ಮಾಲೀಕರು ಆಪಾದಿಸಿದ್ದಾರೆ.



ಪ್ಯಾನಿಕ್ ಬಟನ್ ವಿಎಲ್‌ಟಿಡಿ

ಹಗಲು ದರೋಡೆಗೆ ಕಡಿವಾಣವಿಲ್ಲ



ನ್ಯಾಷನಲ್ ಪರ್ಮಿಟ್ ಪಡೆಯಬೇಕಾದ ಕಾರಣ ಅನಿವಾರ್ಯವಾಗಿ ಹೆಚ್ಚು ಹಣ ಕೊಟ್ಟು ಮೊನ್ನೆ ವಿಎಲ್‌ಟಿಡಿ ಅಳವಡಿಸಿದ್ದೇವೆ. ಗೂಡ್ಸ್ ವಾಹನಕ್ಕೆ ಸರ್ಕಾರ 7,549 ರೂಪಾಯಿ ನಿಗದಿ ಮಾಡಿದ್ದರೆ ಮಾರಾಟಗಾರರು ನಮ್ಮಿಂದ 9 ಸಾವಿರ ರೂಪಾಯಿ ಪಡೆದಿದ್ದಾರೆ. ದುಬಾರಿ ಬೆಲೆ ಕೊಡದಿದ್ದರೆ ವಿಎಲ್‌ಟಿಡಿ ಅಳವಡಿಸುವುದಿಲ್ಲ ಎನ್ನುತ್ತಾರೆ. ಎರಡೂವರೆ ಸಾವಿರ ಉಳಿಸಲು ವಾದ ಮಾಡುತ್ತಾ ಕುಳಿತರೆ ನಮ್ಮ ಲಾರಿ ಚಾಲನೆಗೊಳದೆ ನಿಂತರೆ ಹೆಚ್ಚು ನಷ್ಟವಾಗುತ್ತದೆ. ಆದ ಕಾರಣ ಹೆಚ್ಚು ಬೆಲೆ ಕೊಟ್ಟು ವಿಎಲ್‌ಟಿಡಿ ಖರೀದಿ ಮಾಡಿದ್ದೇವೆ. ಇದು ಹಗಲು ದರೋಡೆ. ಇದಕ್ಕೆ ಕಡಿವಾಣ ಹಾಕುವವರು ಯಾರೂ ಇಲ್ಲ.

– ಪ್ರಶಾಂತ್ ಪೆರೇರಾ, ಜಂಟಿ ಕಾರ್ಯದರ್ಶಿ, ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘ

ಸರ್ಕಾರ ನಿಗದಿ ಮಾಡಿರುವ ಅಧಿಕೃತ ದರವಿದು

ಎಮರ್ಜೆನ್ಸಿ ಬಟನ್ ಹಾಗೂ ವಿಎಲ್‌ಟಿಡಿ ಮಾರಾಟ ಮಾಡಲು ರಾಜ್ಯ ಸರ್ಕಾರ 12 ಕಂಪನಿಗಳಿಗೆ ಅನುಮೋದನೆ ನೀಡಿದೆ. ಅಲ್ಲದೆ ಇದರ ಅಧಿಕೃತ ಬೆಲೆಯನ್ನು ಕೂಡ ನಿಗದಿ ಮಾಡಿದೆ.

- ●ಕ್ಯಾಬ್ ನ 4 ಆಸನಕ್ಕೆ 8,199 ಮತ್ತು 6 ಆಸನಕ್ಕೆ 8,849
- ●ಮ್ಯಾಕ್ಸಿ ಕ್ಯಾಬ್ 7 ಆಸನಕ್ಕೆ 8,849, 12 ಆಸನಕ್ಕೆ 9,174
- ●ಪ್ಯಾಸೆಂಜರ್ ಬಸ್ 21 ಆಸನಕ್ಕೆ 9,499, 50 ಆಸನಕ್ಕೆ 11,124
- ●ಗೂಡ್ಸ್ ವಾಹನದ ವಿಎಲ್‌ಟಿಡಿಗೆ 7,549

ಆದರೆ ಮಾರಾಟಗಾರರು ಸರ್ಕಾರ ನಿಗದಿ ಮಾಡಿದ ದರಕ್ಕಿಂತ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿದ್ದು, ವಾಹನ ಮಾಲೀಕರು ಇದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಧಿಕ ಬೆಲೆಗೆ ಮಾರಾಟ ಮಾಡುವವರ ವಿರುದ್ಧ ಕ್ರಮ ಖಚಿತ

"ಎಮರ್ಜೆನ್ಸಿ ಬಟನ್ ಹಾಗೂ ವಿಎಲ್‌ಟಿಡಿಯನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಕರ್ನಾಟಕದಲ್ಲಿ 2024ಕ್ಕೆ ಈ ಸಾಧನ ಅಳವಡಿಕೆ ಕಡ್ಡಾಯಗೊಳಿಸಲಾಯಿತು. ಈತನಕ 2.72 ಲಕ್ಷ ವಾಹನಗಳು ಈ ಸಾಧನ ಅಳವಡಿಸಿಕೊಂಡಿವೆ. ಇನ್ನು 6 ಲಕ್ಷ ವಾಹನಗಳು ಇದನ್ನು ಅಳವಡಿಸಿಕೊಳ್ಳಬೇಕಿದೆ.

ತಮ್ಮ ವಾಹನದ ಚಲನವಲನ ಜಿಪಿಎಸ್ ಮೂಲಕ ಸರ್ಕಾರಕ್ಕೆ ತಿಳಿಯಬಾರದೆಂದು ಸುಮಾರು 12 ಸಾವಿರ ವಾಹನಗಳ ಚಾಲಕರು, ಮಾಲೀಕರು ಎಮರ್ಜೆನ್ಸಿ ಬಟನ್ ಹಾಗೂ ವಿಎಲ್‌ಟಿಡಿ ವೈಯರ್ ಅನ್ನು ಕತ್ತರಿಸಿ ನಿಷ್ಕ್ರಿಯಗೊಳಿಸಿದ್ದಾರೆ. ಇದನ್ನು ಪತ್ತೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ.

ಇನ್ನು ಚಾಲನೆಯಲ್ಲಿರುವ ಎಮರ್ಜೆನ್ಸಿ ಬಟನ್‌ಗಳಿಂದ ದಿನಕ್ಕೆ ಕನಿಷ್ಟ 800 ದೂರುಗಳು ನಮ್ಮ ಕಂಟ್ರೋಲ್ ರೂಂಗೆ ಬರುತ್ತದೆ. ಹೀಗೆ ಬಂದ ದೂರುಗಳ ಬಗ್ಗೆ ನಮ್ಮ ಕಂಟ್ರೋಲ್ ರೂಂನವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಶಾಲಾ ವಾಹನಗಳಲ್ಲಿ ಮಕ್ಕಳು ಆಟವಾಡಲು ಪ್ಯಾನಿಕ್ ಬಟನ್ ಒತ್ತುತ್ತಾರೆ. ಕೆಲವರು ಪರೀಕ್ಷೆ ಮಾಡಲೆಂದು ಒತ್ತುತ್ತಾರೆ. ಆದರೆ ಹೀಗೆ ಪ್ಯಾನಿಕ್ ಬಟನ್ ಒತ್ತಿ ಬಂದ ದೂರುಗಳಲ್ಲಿ ಸುಮಾರು 60 ದೂರುಗಳು ನೈಜವಾಗಿದ್ದು, ಪೊಲೀಸರ ಮೂಲಕ ಸಂಕಷ್ಟದಲ್ಲಿ ಇದ್ದವರನ್ನು ರಕ್ಷಿಸಲಾಗಿದೆ. ಇದರಿಂದ ಎಮರ್ಜೆನ್ಸಿ ಬಟನ್ ಹಾಗೂ ವಿಎಲ್‌ಟಿಡಿ ಸಕ್ರಿಯವಾಗಿಲ್ಲ ಎಂಬುದು ಸುಳ್ಳು.

- ಮಲ್ಲಿಕಾರ್ಜುನ ಚಿಂದುಲ, ಹೆಚ್ಚುವರಿ ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು.

ಸಿಎಂ ಸ್ಥಾನಕ್ಕೆ ರಾಜೀನಾಮೆ ಬಳಿಕ ಮೊದಲ ಬಾರಿಗೆ ಇಂದು ಮೈಸೂರಿಗೆ ಸಿದ್ದರಾಮಯ್ಯ



ಮೈಸೂರು, ಜೂ.26(ಬಿಎಲ್‌ಯು)– ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಇದೇ ಮೊದಲ ಬಾರಿಗೆ ಸಿದ್ದ ರಾಮಯ್ಯ ಅವರು ನಾಳೆ (ಜೂನ್ 27) ಮೈಸೂರಿಗೆ ಆಗಮಿಸುತ್ತಿದ್ದು, ಎರಡು ದಿನ ಇಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ನಾಳೆ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನಿಂದ ಕಾರಿನಲ್ಲಿ ಹೊರಡುವ ಸಿದ್ದರಾಮಯ್ಯ, ಸಂಜೆ 5 ಗಂಟೆಗೆ ಮೈಸೂರು ತಲುಪುವರು. ತರುವಾಯ ಮೈಸೂರಿನ ಕೆಂಪಯ್ಯನಹುಂಡಿ ಗ್ರಾಮಕ್ಕೆ ಭೇಟಿ ನೀಡಿ ಸಂಜೆ 6.30 ಕ್ಕೆ ನಗರಕ್ಕೆ ವಾಪಾಸ್ಸಾಗಿ ಟಿ.ಕೆ.ಬಡಾವಣೆಯ ನಿವಾಸದಲ್ಲಿ ವಾಸ್ತವ್ಯ ಹೂಡುವರು.

ನಾಡಿದ್ದು ಅಂದರೆ ಭಾನುವಾರ ಬೆಳಿಗ್ಗೆ 11 ಗಂಟೆಗೆ ಕಾಂಗ್ರೆಸ್ ವತಿಯಿಂದ ಆಯೋಜಿಸಿರುವ ಎಸ್‌ಐಆರ್ ಕುರಿತ ಸಮಾವೇಶದಲ್ಲಿ ಪಾಲ್ಗೊಳ್ಳುವರು. ಭಾನುವಾರ ಕೂಡ ಸಿದ್ದರಾಮಯ್ಯ ಮೈಸೂರಿನಲ್ಲೇ ತಂಗುವರು.

ಜೂನ್ 29, ಅಂದರೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ರಸ್ತೆ ಮೂಲಕ ಮೈಸೂರಿನಿಂದ ಬೆಂಗಳೂರಿಗೆ ತೆರಳುವರು.

ಸಿದ್ದರಾಮಯ್ಯ ಅವರು ಮೇ 28 ರಂದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಜೂನ್ 3 ರಂದು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

ಕಳೆದ 30 ದಿನದಲ್ಲಿ ಸಿದ್ದರಾಮಯ್ಯ ಅವರು ದೆಹಲಿ, ನಂತರ ಕೇರಳದ ರೆಸಾರ್ಟ್‌ನಲ್ಲಿ ವಿಶ್ರಾಂತಿ ಬಿಟ್ಟರೆ ಮತ್ತೆಲ್ಲಿಗೂ ಭೇಟಿ ನೀಡಿದ್ದಿಲ್ಲ.

ಮೈಸೂರಿಗೆ 3 ವರ್ಷದ ನಂತರ ಮೊದಲ ಬಾರಿಗೆ ಕಾರಿನಲ್ಲಿ ಪ್ರಯಾಣ

ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ, ಮೂರು ವರ್ಷವೂ ಮೈಸೂರಿಗೆ ಭೇಟಿ ನೀಡುವಾಗ ವಿಶೇಷ ವಿಮಾನ ಇಲ್ಲವೇ ಹೆಲಿಕಾಪ್ಟರ್‌ನಲ್ಲಿ ಆಗಮಿಸುತ್ತಿದ್ದರು. ಮೂರು ವರ್ಷದ ನಂತರ ಇದೇ ಮೊದಲ ಬಾರಿಗೆ ಕಾರಿನಲ್ಲಿ ಮೈಸೂರಿಗೆ ಆಗಮಿಸುತ್ತಿದ್ದಾರೆ. ಸಿದ್ದರಾಮಯ್ಯ, ರಾಜಧಾನಿ ಬೆಂಗಳೂರಿನಿಂದ ಮೈಸೂರು ಸೇರಿದಂತೆ ಎಲ್ಲಿಗೇ ಹೋಗಬೇಕಾದರೂ ವಿಶೇಷ ವಿಮಾನ ಅಥವಾ ಹೆಲಿಕಾಪ್ಟರ್ ಬಳಸುತ್ತಿದ್ದರು. ಸದ್ಯ ಕಾರಿನಲ್ಲಿ ಹೋದ ಉದಾಹರಣೆಗಳಿಲ್ಲ.

ಹೀಗೆ ನಿರಂತರ ವಿಶೇಷ ವಿಮಾನ ಬಳಕೆಯಿಂದ ಸರ್ಕಾರಕ್ಕೆ 38 ಕೋಟಿ ವೆಚ್ಚವಾಗಿದೆ ಎಂದು ವಿರೋಧ ಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಆರೋಪ ಮಾಡಿದ್ದವು.

ಬಸ್ ಪಾಸ್ ಹಣ ಮರುಪಾವತಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ

●ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಮಾಹಿತಿ ●ಇದಕ್ಕಾಗಿ ಕೌಂಟರ್‌ಗಳಿಗೆ ಅಲೆಯುವ ಅಗತ್ಯವಿಲ್ಲ; ಅರ್ಜಿ ಸಲ್ಲಿಸಿದ ವಾರದಲ್ಲಿ ಬ್ಯಾಂಕ್ ಖಾತೆಗೆ ಹಣ

ಮೈಸೂರು,ಜೂ.26(ಎಂಟಿವೈ)– ಶುಲ್ಕ ಪಾವತಿಸಿ ಬಸ್‌ಪಾಸ್ ಪಡೆದಿದ್ದ ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ, ಆನ್‌ಲೈನ್ ಮೂಲಕ ಹಣ ಹಿಂಪಡೆದುಕೊಳ್ಳುವಂತೆ ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ತಿಳಿಸಿದ್ದಾರೆ.

ಸಾರಿಗೆ ಸಂಸ್ಥೆ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡಲಾಗುತ್ತಿದೆ. ಆದರೆ, ಇದಕ್ಕೂ ಮುನ್ನ ಶುಲ್ಕ ಪಾವತಿಸಿ ಬಸ್‌ಪಾಸ್ ಪಡೆದಿದ್ದ ವಿದ್ಯಾರ್ಥಿಗಳಿಂದ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸ್ವೀಕರಿಸಿ, ಅವರ ಬ್ಯಾಂಕ್ ಖಾತೆಗಳಿಗೆ ಹಣ ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಸೇವಾಸಿಂಧು ಪೋರ್ಟಲ್ ಮೂಲಕ ಮೇ 29ರಿಂದ ಶುಲ್ಕ ಪಾವತಿಸಿ, ಬಸ್‌ಪಾಸ್ ಪಡೆದಿರುವ ವಿದ್ಯಾರ್ಥಿಗಳು, ಸರ್ಕಾರದ ಸೇವಾಸಿಂಧು ಪೋರ್ಟಲ್‌ನಲ್ಲಿ ಒದಗಿಸಿರುವ ಲಿಂಕ್‌ನಲ್ಲಿ ಮೊಬೈಲ್ ಸಂಖ್ಯೆ, ಓಟಿಪಿ ನಮೂದಿಸಿ(ಸೇವಾಸಿಂಧು ಪೋರ್ಟಲ್ ಐಡಿ https://sevasindhuservices.karnataka.gov.in/buspassservices/) ಅರ್ಜಿ ಸಲ್ಲಿಸಿ, ಆಧಾರ್ ಆಧಾರಿತ ಇ–ಕೆವೈಸಿ ಪೂರ್ಣಗೊಳಿಸಬೇಕು. ಈ ವೇಳೆ ವಿದ್ಯಾರ್ಥಿಗಳು ತಮ್ಮ ಅಥವಾ ತಮ್ಮ ಪೋಷಕರ ಬ್ಯಾಂಕ್ ಖಾತೆ ವಿವರಗಳನ್ನು ತಂತ್ರಾಂಶದಲ್ಲಿ ನಮೂದಿಸಿದರೆ ಅರ್ಜಿ ಸಲ್ಲಿಸಿದ 7 ದಿನಗಳೊಳಗೆ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೆಫ್ಟ್/ಆರ್‌ಟಿಜಿಎಸ್ ಮೂಲಕ ಪಾಸ್ ಮೊತ್ತ ಮರು ಪಾವತಿಯಾಗುತ್ತದೆ. ಕೂಡಲೇ ವಿದ್ಯಾರ್ಥಿಗಳಿಗೆ ಎಸ್‌ಎಂಎಸ್ ಕೂಡ ರವಾನೆಯಾಗುತ್ತದೆ. ಹಣ ಮರುಪಾವತಿ ಸಂಬಂಧ ವಿದ್ಯಾರ್ಥಿಗಳು ಯಾವುದೇ ಕೌಂಟರ್‌ಗೆ ಭೇಟಿ ನೀಡುವ ಅವಶ್ಯಕತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನಿಮ್ಮನ್ನು ವಿದ್ಯಾವಂತರನ್ನಾಗಿಸಲು ಪರಿಶ್ರಮಪಡುವ ತಂದೆ–ತಾಯಿಗೆ ಗೌರವ ತರುವ ಕೆಲಸ ಮಾಡಿ

●ಮಕ್ಕಳಿಗೆ ಶಾಸಕ ಜಿ.ಟಿ.ದೇವೇಗೌಡ ಕಿವಿಮಾತು ●ನಾಯಕರ ಸಂಘದಿಂದ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು ತಾಲೂಕು ನಾಯಕರ ಸಂಘದ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ದಾವಣಗೆರೆ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಮಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶಾಸಕ ಜಿ.ಟಿ.ದೇವೇಗೌಡ, ಸಂಸದ ಕುಮಾರ ನಾಯಕ್, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷ ಅಪ್ಪಣ್ಣ, ಮಾಜಿ ಮೇಯರ್ ಶಿವಕುಮಾರ್ ಮತ್ತಿತರರಿದ್ದರು

ಮೈಸೂರು, ಜೂ.26(ಎಂಕೆ)– ಕೂಲಿ ಕೆಲಸ ಮಾಡಿ, ಕಷ್ಟಪಟ್ಟು ಮಕ್ಕಳನ್ನು ಓದಿಸಿ ಅವರನ್ನು ಪ್ರತಿಭಾವಂತರನ್ನಾಗಿ ಮಾಡುವ ತಂದೆ–ತಾಯಿಯೇ ದೇವರುಗಳು. ಅಂತಹ ದೇವರುಗಳಿಗೆ ಗೌರವ ತರುವ ಕೆಲಸವನ್ನು ಮಕ್ಕಳು ಮಾಡಬೇಕು ಎಂದು ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ತಾಲೂಕು ನಾಯಕರ ಸಂಘದ ವತಿಯಿಂದ ಆಯೋಜಿಸಿದ್ದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಗೌರವ ಸಮರ್ಪಣೆ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಮಕ್ಕಳನ್ನು ಪ್ರತಿಭಾವಂತರನ್ನಾಗಿ ಮಾಡುವ ತಂದೆ–ತಾಯಿಯನ್ನು ಗೌರವದಿಂದ ಕಾಣಬೇಕು ಎಂದು ತಿಳಿಸಿದರು.

ಯಾರೊಬ್ಬರೂ ಕೂಡ ಶಿಕ್ಷಣದಿಂದ ವಂಚಿತರಾಗಬಾರದು. ವಿದ್ಯಾವಂತರಾದರೆ ಜಿಲ್ಲಾಧಿಕಾರಿಗಳು ಆಗಬಹುದು, ಲೋಕಸಭಾ ಸದಸ್ಯರು ಸೇರಿದಂತೆ ಎಲ್ಲಾ ಅಧಿಕಾರಗಳನ್ನು ಪಡೆದುಕೊಳ್ಳಲು ಶಿಕ್ಷಣ ಅವಶ್ಯವಾಗಿದೆ. ಶಿಕ್ಷಣದ ಜೊತೆ ಜೊತೆಗೆ ಕಲೆ, ಸಾಹಿತ್ಯ, ಕ್ರೀಡೆ, ವೃತ್ತಿಪರ ಕೌಶಲ್ಯಗಳನ್ನು ಕಲಿತು ಆರ್ಥಿಕ ಮತ್ತು ಸಾಮಾಜಿಕವಾಗಿ ಎತ್ತರದ ಸ್ಥಾನಕ್ಕೆ ಬೆಳೆಯಬೇಕು. ಪ್ರೀತಿ–ವಿಶ್ವಾಸದಿಂದ ನಾವೆಲ್ಲರೂ ಒಂದೇ ಎಂಬ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ಮಕ್ಕಳು ತಮ್ಮ ಕುಟುಂಬ, ಶಾಲೆ, ಸಮಾಜ ಮತ್ತು ಹುಟ್ಟಿರುವ ಗ್ರಾಮಕ್ಕೂ ಕೀರ್ತಿ ತಂದಿದ್ದೀರಿ. ಅದರಂತೆ ಪ್ರತಿಭಾನ್ವಿತ ಮಕ್ಕಳನ್ನು ಗುರ್ತಿಸಿ ಪ್ರೋತ್ಸಾಹಿಸುವುದು ಸಂಘ–ಸಂಸ್ಥೆಗಳ ಮುಖ್ಯ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಲೇಖನಿಯ ಶಕ್ತಿ ಅರಿಯಿರಿ: ಕಾರ್ಯಕ್ರಮ ಉದ್ಘಾಟಿಸಿದ ಮೈಸೂರು ಮಾಜಿ ಜಿಲ್ಲಾಧಿಕಾರಿಯೂ ಆದ ಲೋಕಸಭಾ ಸದಸ್ಯ ಕುಮಾರ ನಾಯಕ್ ಮಾತನಾಡಿ, ವಿದ್ಯಾರ್ಥಿಗಳು ಅಧಿಕಾರವನ್ನು ನೀಡುವ ಲೇಖನಿಯ ಶಕ್ತಿಯನ್ನು ಅರಿತುಕೊಳ್ಳಬೇಕು ಹಾಗೂ ಅದನ್ನು ಪಡೆದುಕೊಳ್ಳಲು ಶ್ರಮಿಸಬೇಕು. ನಾನೂ ಕೂಡ ಐಎಎಸ್ ಅಧಿಕಾರಿ ಆಗಿದ್ದರಿಂದಲೇ ನನಗೆ ಲೇಖನಿಯ ಶಕ್ತಿ ಅರಿವಾಗಿದ್ದು, ಎಲ್ಲರಿಗೂ ಸಹಾಯ ಮಾಡಲು ಸಾಧ್ಯವಾಗಿದ್ದು. ಆದ್ದರಿಂದ ವಿದ್ಯಾರ್ಥಿಗಳು ಈ ಅವಕಾಶವನ್ನು ಪಡೆಯಬೇಕಾದರೆ ದೃಢಸಂಕಲ್ಪ ಮಾಡಿ ಅಧ್ಯಯನಶೀಲರಾಗಬೇಕೆಂದು ಸಲಹೆ ನೀಡಿದರು.

ಸಂಘಟಿತರಾಗಬೇಕು: ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷ ಅಪ್ಪಣ್ಣ ಮಾತನಾಡಿ, ವಾಲ್ಮೀಕಿ ಜಯಂತಿಯಿಂದ ನಾಯಕ ಸಮುದಾಯದ ಸಂಘಟನೆಯ ನೈಜ ಚಿತ್ರಣ ದೊರೆಯಿತು. ಆ ಸಂದರ್ಭದಲ್ಲಿ ಒಗ್ಗಟ್ಟು, ಹಕ್ಕಿಗಾಗಿ ಹೋರಾಟ ಮಾಡುವ ಮನೋಭಾವದ ಕೊರತೆಯ ಅರಿವಾಯಿತು. ಸಮುದಾಯ ಮತ್ತಷ್ಟು ಗಟ್ಟಿಗೊಳ್ಳಲು ಎಲ್ಲರೂ ಸಂಘಟಿತರಾಗಬೇಕಿದೆ ಎಂದು ಕರೆ ನೀಡಿದರು.

ತರಬೇತಿ ಕೇಂದ್ರವಾಗಬೇಕು: ಮಾಜಿ ಮೇಯರ್ ಶಿವಕುಮಾರ್ ಮಾತನಾಡಿ, ಜಿಲ್ಲಾ ನಾಯಕರ ಸಂಘ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಸಮಾಜದ ವಿದ್ಯಾರ್ಥಿಗಳಿಗಾಗಿ ತರಬೇತಿ ಕೇಂದ್ರವನ್ನು ಆರಂಭಿಸಬೇಕು. ಎಪಿಜೆ ಅಬ್ದುಲ್ ಕಲಾಂ ಅವರು ಹೇಳಿದಂತೆ ನಿದ್ರೆ ಬಾರಲು ಬಿಡದಂತಹ ಕನಸ್ಸನ್ನು ಕಾಣಬೇಕು. ಅದರ ಸಾಕಾರಕ್ಕಾಗಿ ಅವಿರತವಾಗಿ ಶ್ರಮಿಸಬೇಕು ಎಂದರು.

ದಾವಣಗೆರೆ ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಮಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಮೈಸೂರು–ಚಾಮರಾಜನಗರ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಾಲಿಕೆ ಮಾಜಿ ಸದಸ್ಯ ಲೋಕೇಶ್ (ಪಿಯಾ), ಕರಾಮುವಿವಿ ಮನೋವಿಜ್ಞಾನ ವಿಭಾಗದ ಡಾ.ಹೊಸಕೋಟೆ ಮಂಜುನಾಥ್, ಮೈಸೂರು ತಾಲೂಕು ನಾಯಕರ ಸಂಘದ ಅಧ್ಯಕ್ಷ ಉದ್ಬೂರು ಎನ್.ಮಹದೇವಸ್ವಾಮಿ, ಮುಖಂಡರಾದ ಕ್ಯಾತಮಾರನಹಳ್ಳಿ ವೆಂಕಟೇಶ, ಚಾಮುಂಡಿ ಬೆಟ್ಟದ ಶಂಭಣ್ಣ, ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರಸ್ವಾಮಿ, ಪದಾಧಿಕಾರಿಗಳಾದ ಎನ್. ಮಹದೇವಸ್ವಾಮಿ, ಜಯಪುರ ಜವರನಾಯಕ, ರಮ್ಮನಹಳ್ಳಿ ವೆಂಕಟಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಸೇನಾ ಪಡೆಯಿಂದ ನಾಡ ಪ್ರಭು ಕೆಂಪೇಗೌಡರ ಜಯಂತ್ಯೋತ್ಸವ



ಕರ್ನಾಟಕ ಸೇನಾ ಪಡೆ ವತಿಯಿಂದ ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವವನ್ನು ಶುಕ್ರವಾರ ಅದ್ಧೂರಿಯಾಗಿ ಆಚರಿಸಲಾಯಿತು.

ಮೈಸೂರು, ಜೂ.26(ಎಂಕೆ)– ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕರ್ನಾಟಕ ಸೇನಾ ಪಡೆ ವತಿಯಿಂದ ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವ ಆಚರಿಸಲಾಯಿತು.

ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್ ಮಾತನಾಡಿ, ನಾಡಿಗೆ ಕೆಂಪೇಗೌಡರ ಕೊಡುಗೆ ಅಪಾರ. ಆಗಿನ ಕಾಲದಲ್ಲಿಯೇ ಎಲ್ಲಾ ವರ್ಗದ ಜನರಿಗೂ ಅವರವರ ಕುಲ ಕಸುಬುಗಳ ಆಧಾರದ ಮೇಲೆ ಬಳೆಪೇಟೆ, ಕಾಟನ್‌ಪೇಟೆ, ಚಿಕ್ಕಪೇಟೆ, ದೊಡ್ಡಪೇಟೆ, ಅಕ್ಕಿಪೇಟೆ, ಮುಸ್ಲಿಮರಿಗೆ ಸುಲ್ತಾನ್ ಪೇಟೆ ಈ ರೀತಿ ಎಲ್ಲಾ ಸಮುದಾಯವರಿಗೂ ಸುಮಾರು 64 ಕ್ಕೂ ಹೆಚ್ಚು ಪೇಟೆಗಳನ್ನು ನಿರ್ಮಿಸಿ ಕೊಟ್ಟ ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಬಡವರ ಪರವಾಗಿ ಕೆಲಸ ಮಾಡಬೇಕು ಎಂದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮಾತನಾಡಿ, ಅತ್ಯಂತ ಕ್ರಿಯಾಶೀಲ ಮತ್ತು ಜನಪರ ಕಾಳಜಿ ಹೊಂದಿದ್ದ ನಾಡಪ್ರಭು ಕೆಂಪೇಗೌಡರು. ಎಲ್ಲಾ ವರ್ಗದವರನ್ನು ಸಮನಾಗಿ ಕಂಡು ಬೆಂಗಳೂರು ಸುತ್ತಮುತ್ತ ಸಾವಿರಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದ್ದಾರೆ. ಇಂತಹ ಮಹನೀಯರನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಎಂದರು.

ಬಳಿಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ ಸಿಹಿ ವಿತರಣೆ ಮಾಡಿದರು. ಹಿರಿಯ ಸಮಾಜ ಸೇವಕ ಡಾ.ರಘುರಾಂ ಕೆ ವಾಜಪೇಯಿ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಲಕ್ಷ್ಮೀದೇವಿ, ಲತ ರಂಗನಾಥ, ಮಂಜುಳಾ, ಚೇತನ್, ಹನುಮಂತಯ್ಯ, ನೇಹಾ, ಬೋಗಾದಿ ಸಿದ್ದೇಗೌಡ, ಮಾಚಾಕ್ಷಿ ಕೃಷ್ಣಪ್ಪ ಶಿವಲಿಂಗಯ್ಯ, ಸುಶೀಲ ನಂಜಪ್ಪ, ದರ್ಶನ್ ಗೌಡ, ಪ್ರದೀಪ್, ಕೃಷ್ಣೇಗೌಡ, ಕುಮಾರ್, ದರ್ಶನ್ ಗೌಡ, ನಂದಕುಮಾರ್, ಗಣೇಶ್ ಪ್ರಸಾದ್, ಪ್ರಭಾಕರ ಉಪಸ್ಥಿತರಿದ್ದರು.

ಆರ್‌ಬಿಐನಿಂದ ಅಂತರರಾಷ್ಟ್ರೀಯ ಎಂಎಸ್‌ಎಂಇ ದಿನಾಚರಣೆ ಜಾಗೃತಿ ಅಭಿಯಾನ

ಮೈಸೂರಿನಲ್ಲಿ ಭಿತ್ತಿಪತ್ರ ಬಿಡುಗಡೆ



ಮೈಸೂರು, ಜೂ. 26– ಸಣ್ಣ ಪ್ರಮಾಣದ ಉದ್ಯಮಿಗಳಿಗೆ ಉತ್ತೇಜನ ನೀಡುವ ಮತ್ತು ಅವರನ್ನು ಸಬಲೀಕರಿಸುವ ಪ್ರಮುಖ ಉದ್ದೇಶದಿಂದ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂತರರಾಷ್ಟ್ರೀಯ ಎಂಎಸ್‌ಎಂಇ ದಿನಾಚರಣೆಯ ಅಂಗವಾಗಿ ವ್ಯಾಪಕ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದೆ. ಇದರ ಅಂಗವಾಗಿ, ಮೈಸೂರಿನ ಜಿಲ್ಲಾಧಿಕಾರಿಗಳು, ಮೈಸೂರಿನ ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ (LDM) ಅವರೊಂದಿಗೆ ಸೇರಿ ಆರ್‌ಬಿಐ ಸಿದ್ಧಪಡಿಸಿರುವ ವಿಶೇಷ ಜಾಗೃತಿ ಭಿತ್ತಿಪತ್ರವನ್ನು (ಪೋಸ್ಟರ್) ಮೈಸೂರಿನಲ್ಲಿ ಅಧಿಕೃತವಾಗಿ ಬಿಡುಗಡೆ ಮಾಡಿದರು.

ಆರ್‌ಬಿಐ ಮೂಲಕ ಸಂಯೋಜಿಸಲ್ಪಟ್ಟ ಈ ಉಪಕ್ರಮವು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (MSME) ಅಗತ್ಯ ಆರ್ಥಿಕ ಜ್ಞಾನವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಗ್ರಾಹಕರು, ತರಬೇತುದಾರರು ಮತ್ತು ಉದ್ಯಮಿಗಳಿಗೆ ಹೆಚ್ಚಿನ ಮಾಹಿತಿ ತಲುಪಿಸುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಸದಸ್ಯ ಬ್ಯಾಂಕುಗಳು, ಎಂಎಸ್‌ಎಂಇ ವಿಶೇಷ ಶಾಖೆಗಳು, ಹಣಕಾಸು ಸಾಕ್ಷರತಾ ಕೇಂದ್ರಗಳು ಹಾಗೂ ರುಡ್‌ಸೆಟಿ/ಆರ್‌ಸೆಟಿ ಕೇಂದ್ರಗಳ ಪ್ರಮುಖ ಸ್ಥಳಗಳಲ್ಲಿ ಈ ಭಿತ್ತಿಪತ್ರಗಳನ್ನು ಪ್ರದರ್ಶಿಸುವಂತೆ ಆರ್‌ಬಿಐ ಸೂಚಿಸಿದೆ. ಇದರೊಂದಿಗೆ, ಹಣಕಾಸು ಸಾಕ್ಷರತಾ ಶಿಬಿರಗಳು, ಗ್ರಾಹಕರ ಸಭೆಗಳು ಮತ್ತು ಡಿಜಿಟಲ್ ವೇದಿಕೆಗಳ ಮೂಲಕ ಈ ಪ್ರಮುಖ ಮಾಹಿತಿಯನ್ನು ತಳಮಟ್ಟದವರೆಗೆ ತಲುಪಿಸಿ, ಎಂಎಸ್‌ಎಂಇ ವಲಯದ ಸುಸ್ಥಿರ ಬೆಳವಣಿಗೆಗೆ ಶ್ರಮಿಸುವಂತೆ ಬ್ಯಾಂಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ರೈತರಿಗೆ ಅನ್ಯಾಯ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ

ಕೆ.ಆರ್.ನಗರ, ಜೂ.26– ಕಳೆದ 3 ವರ್ಷದಿಂದ ರಾಜ್ಯದ ರೈತರ ಪರವಾಗಿ ಈಗಿನ ರಾಜ್ಯ ಕಾಂಗ್ರೆಸ್ ಸರ್ಕಾರ ಧ್ವನಿ ಎತ್ತದೇ ಅನ್ಯಾಯ ಮಾಡಿದೆ ಎಂದು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್. ಡಿ.ಕುಮಾರಸ್ವಾಮಿ ಆರೋಪಿಸಿದರು.

ತಾಲೂಕಿನ ಹೆಬ್ಬಾಳು ಹೋಬಳಿಯ ಮಾರಗೌಡನಹಳ್ಳಿ ಗ್ರಾಮದಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ಕೆಲವು ಭಾಗದಲ್ಲಿ ಅಕಾಲಿಕ ಮಳೆಯಾಗಿ ಬಾಳೆ, ಮಾವು ಬೆಳೆ ಹಾನಿ ಗೊಳಗಾಗಿ ಬೆಳೆ ಬೆಳೆದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಆದರೆ ಸರ್ಕಾರದ ಯಾವೊಬ್ಬ ಮಂತ್ರಿಯೂ ಅತ್ತ ತಿರುಗಿ ನೋಡಿಲ್ಲ ಇದು ಈ ಸರ್ಕಾರದ ಸಾಧನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ರಾಜ್ಯದ ಜನರ ಸಮಸ್ಯೆಗಳ ಬಗ್ಗೆ ಸೌಜನ್ಯಕ್ಕಾದರೂ ಚಿಂತನೆ ಮಾಡುತ್ತಿಲ್ಲ. ಮತ ನೀಡಿದ ಜನರ ಬಗ್ಗೆ ಭಯ, ಭಕ್ತಿ ಕೂಡ ಇಲ್ಲದಂತಾಗಿದೆ. ಹೀಗಾಗಿ ನಾನು ರೈತರ ಧ್ವನಿಯಾಗಿ ಸದಾ ನಿಂತಿದ್ದೇನೆ ಎಂದು ತಿಳಿಸಿದರು.

ಮಂಡ್ಯ ಲೋಕಸಭಾ ಕ್ಷೇತ್ರ ಸೇರಿದಂತೆ ಹಲವು ಭಾಗದ ಜನರು, ಯುವಕರು ಉದ್ಯೋಗಕ್ಕಾಗಿ ನಮ್ಮ ಕಚೇರಿಗೆ ಬರುತ್ತಿದ್ದಾರೆ. ಎಲ್ಲರನ್ನೂ ಭೇಟಿ ಮಾಡುವ ಅವಕಾಶವನ್ನು ದೇವರು ನಿಮ್ಮಗಳ ಆಶೀರ್ವಾದಿಂದ ಕರುಣಿಸಿದ್ದಾನೆ ಎಂದರು.

ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ ಸೇರಿದಂತೆ ಈ ಭಾಗದಲ್ಲಿ ತಂಬಾಕು ಬೆಳೆಗಾರರು ಹೆಚ್ಚಾಗಿದ್ದಾರೆ. ತಂಬಾಕು ಬೆಳೆಯುವ ರೈತರಿಗೆ ಕೆಲವೊಮ್ಮೆ ಉತ್ತಮ ಬೆಲೆ ಸಿಕ್ಕರೆ, ಮತ್ತೊಮ್ಮೆ ಬೆಂಬಲ ಬೆಲೆ ಸಿಗದೇ ನಷ್ಟ ಕೂಡ ಅನುಭವಿಸಿದ್ದೀರಿ. ತಂಬಾಕು ಬೆಳೆಗೆ ಉತ್ತಮ ಬೆಲೆ ನೀಡುವಂತೆ ಈಗಾಗಲೇ ಕೇಂದ್ರದ ವಾಣಿಜ್ಯ ಸಚಿವರನ್ನು ಭೇಟಿ ಮಾಡಿ ಚರ್ಚಿಸಲಾಗಿದ್ದು, ಐಟಿಸಿ ಕಂಪನಿ ಜೊತೆ ಚರ್ಚೆ ಮಾಡಿ ಮಾತನಾಡಿದ್ದೇನೆ ಎಂದು ತಿಳಿಸಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ಮಾರಗೌಡನಹಳ್ಳಿ ಸೇರಿದಂತೆ ಈ ಭಾಗದ ಜನರಿಗೆ ಅನುಕೂಲವಾಗುವ ಹಿನ್ನೆಲೆಯಲ್ಲಿ ಪೆಟ್ರೋಲ್ ಬಂಕ್ ಪ್ರಾರಂಭಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್. ಡಿ.ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಭಾರೀ ಗಾತ್ರದ ಹಾರ ಹಾಕಿ ಶಾಲು ಹೊದಿಸಿ, ಅಭಿನಂದಿಸಲಾಯಿತು.

ಈ ಸಂದರ್ಭ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಕೆ.ಮಹದೇವ್, ಅಶ್ವಿನ್ ಕುಮಾರ್, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿಪಂ ಮಾಜಿ ಅಧ್ಯಕ್ಷರಾದ ಸಾ.ರಾ.ನಂದೀಶ್, ಸಿ.ಜೆ. ದ್ವಾರಕೀಶ್, ಜಿಪಂ ಮಾಜಿ ಸದಸ್ಯರಾದ ಮಾದೇಗೌಡ, ಎಂ.ಟಿ.ಕುಮಾರ್, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಮಾದೇಗೌಡ, ತಾಲೂಕು ಜೆಡಿಎಸ್ ಅಧ್ಯಕ್ಷರಾದ ಹಂಪಾಪುರ ಕುಮಾರ್, ಸಾಲಿಗ್ರಾಮ ರಾಜಣ್ಣ, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ದಲಿತ ಮುಖಂಡ ಹನಸೋಗೆ ನಾಗರಾಜ್, ಬಿಪಿಸಿಎಲ್ ವ್ಯವಸ್ಥಾಪಕ ಕನ್ವಲ್ ಜೋತ್ ಸಿಂಗ್, ಹರದನಹಳ್ಳಿ ರಮೇಶ್, ಜೆಡಿಎಸ್ ಮುಖಂಡ ಹೊಸಹಳ್ಳಿ ಪುಟ್ಟರಾಜು, ಸಿದ್ದಾಪುರ ತ್ಯಾಗರಾಜ್, ವಕೀಲ ಯೋಗೇಶ್, ಬಸವಾಪಟ್ಟಣ ಯೋಗೇಶ್, ಜೆಡಿಎಸ್ ತಾಲೂಕು ಬಿಎಲ್‌ಎ ಅಧ್ಯಕ್ಷ ಅಂಕನಹಳ್ಳಿ ತಿಮ್ಮಪ್ಪ, ಜೆಡಿಎಸ್ ಮುಖಂಡರಾದ ಕುಪ್ಪೆ ನವೀನ್, ಬಿ.ರಮೇಶ್ ಸೇರಿದಂತೆ ಅನೇಕರಿದ್ದರು.



ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಕರುಣಾಮಯಿ ವಿಷ್ಣು ಅಭಿಮಾನಿ ಬಳಗದಿಂದ ಮಕ್ಕಳಿಗೆ ಲೇಖನ ಸಾಮಗ್ರಿಗಳ ವಿತರಣೆ



ಮೈಸೂರು, ಜೂ. 26– ಕಂಪ್ಯೂಟರ್ ಯುಗದಲ್ಲಿ ಪ್ರತಿ ವಿದ್ಯಾರ್ಥಿಯು ಆಧುನಿಕ ತಂತ್ರಜ್ಞಾನ ಕಲಿಯುತ್ತಾ ಸಾಗಬೇಕು. ಅದಕ್ಕೆ ಪಾಲಕರು ಪ್ರೋತ್ಸಾಹ ನೀಡಬೇಕು ಎಂದು ನಗರ ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ ಹೇಳಿದರು.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಎನ್ ಟಿ ಎಂ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ವತಿಯಿಂದ ಗುರುವಾರ ಲೇಖನ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಿಗೆ ಹೆಚ್ಚು ಹಾಜರಾತಿ ಆಗುವ ಹಿನ್ನೆಲೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸ್ನೇಹಿತರೆಲ್ಲ ಸೇರಿ ಎನ್‌ಟಿಎಂ ಶಾಲಾ ವಾಹನವನ್ನು ಕೊಡುಗೆ ನೀಡಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಬೇಕು. ಈ ಕಲಿಕಾ ಪರಿಕರಗಳು ಅವರ ಶಿಕ್ಷಣಕ್ಕೆ ನೆರವಾಗಬೇಕು ಎನ್ನುವುದು ನಮ್ಮ ಆಶಯ. ಸಮಾಜಕ್ಕೆ ನಾವು ಸಾಧ್ಯವಾದಷ್ಟು ಕೊಡುಗೆ ನೀಡಬೇಕು. ಪ್ರತಿಯೊಬ್ಬರೂ ಸಮಾಜಮುಖಿ ಚಿಂತನೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಗರ ಪಾಲಿಕೆ ಮಾಜಿ ಸದಸ್ಯ ಎಂ.ಡಿ ಪಾರ್ಥಸಾರಥಿ ಮಾತನಾಡಿ, ಸರ್ಕಾರಿ ಶಾಲೆಗಳ ಬಲವರ್ಧನೆಗೆ ಇದೊಂದು ಅತ್ಯಂತ ಉತ್ತಮ ಬೆಳವಣಿಗೆ. ಇಂತಹ ಶಾಲೆಗಳಿಗೆ ಪ್ರೋತ್ಸಾಹದ ಅವಶ್ಯಕತೆ ತುಂಬಾ ಇದೆ. ಕಡು ಬಡತನದಲ್ಲಿದ್ದು ಕಲಿಯಬೇಕೆಂಬ ಹಂಬಲವಿರುವ ಮಕ್ಕಳಿಗೆ ಇಂತಹ ಆಸರೆ ಸಿಕ್ಕಾಗ ಅದು ನಿಜವಾಗಿಯೂ ಸಾರ್ಥಕತೆ ಪಡೆದುಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್ ಎನ್ ರಾಜೇಶ್, ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ರಮೇಶ್, ರಾಕೇಶ್, ಶಾಲೆಯ ಮುಖ್ಯ ಶಿಕ್ಷಕರಾದ ಶಾಂತಮ್ಮ, ಶಿಕ್ಷಕರದ ಸಮೀನಾ ಪರ್ವೀನ್, ಹಾಗೂ ಇನ್ನಿತರರು ಹಾಜರಿದ್ದರು.

ವಿವಾಹ ಮಹೋತ್ಸವದಲ್ಲಿ ವಚನಸಿರಿ ಕೃತಿ ಬಿಡುಗಡೆ ಸಾವಿರ ಮಂದಿಗೆ ಉಚಿತ ವಚನ ಪುಸ್ತಕ ವಿತರಣೆ



ಮೈಸೂರು, ಜೂ. 26– ಮಳಲಿ ಗ್ರಾಮದ ಪ್ರಮೀಳಾ ಹಾಗೂ ನಾಗರಾಜಮೂರ್ತಿ ಅವರ ಪುತ್ರಿ ಮಾನಸ ಮತ್ತು ಕಟ್ಟಹಳ್ಳಿ ಗ್ರಾಮದ ಮಂಜುಳ ಹಾಗೂ ದೊಡ್ಡರಾಮಪ್ಪ ಅವರ ಪುತ್ರ ಭರತ್ ಕುಮಾರ್ ಅವರ ವಿವಾಹವು ಶ್ರೀ ಸಂಗಮ ಕ್ಷೇತ್ರದಲ್ಲಿ ಶ್ರೀ ಮಹಾದೇವ ತಾತರವರ ಪವಿತ್ರ ಸನ್ನಿಧಿಯಲ್ಲಿ ಸಡಗರ ಸಂಭ್ರಮದಿಂದ ನೆರವೇರಿತು. ವಿವಾಹದ ಆರತಕ್ಷತೆ ಸಮಾರಂಭದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕರಾದ ವಚನ ಕುಮಾರಸ್ವಾಮಿ ಮತ್ತು ರೂಪ ಕುಮಾರಸ್ವಾಮಿ ಅವರ ಸಂಪಾದಕತ್ವದ 'ವಚನಸಿರಿ' ಕೃತಿಯನ್ನು ಸೋಮಳ್ಳಿ ವೀರ ಸಿಂಹಾಸ ಶೀಲಾಮಠದ ಪೂಜ್ಯ ಶ್ರೀ ಸಿದ್ಧಮಲ್ಲಸ್ವಾಮಿಗಳು ಲೋಕಾರ್ಪಣೆ ಮಾಡಿದರು.

ಜಕ್ಕಳ್ಳಿ ಮಠದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ಮತ್ತು ತಳೂರು ದಾಸೋಹ ಮಠದ ಶ್ರೀ ಮಹಾದೇವಸ್ವಾಮಿಗಳು, ಕಾರ್ಯಕ್ರಮದಲ್ಲಿ ಭಾಗವಹಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಿದರು.

ವಿಶೇಷವಾಗಿ, ವಿವಾಹ ಸಮಾರಂಭಕ್ಕೆ ಆಗಮಿಸಿದ್ದ ಸುಮಾರು 1000 ಮಂದಿಗೆ ವಚನ ಸಾಹಿತ್ಯದ ಅರಿವು ಮೂಡಿಸುವ ಉದ್ದೇಶದಿಂದ 'ವಚನಸಿರಿ' ಪುಸ್ತಕವನ್ನು ಉಚಿತವಾಗಿ ವಿತರಿಸಲಾಯಿತು. ಈ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು. ಇದೇ ಸಂದರ್ಭದಲ್ಲಿ ವಚನ ಸಾಹಿತ್ಯದ ಪ್ರಸಾರ ಮತ್ತು ಶರಣ ಸಂಸ್ಕೃತಿಯ ಸೇವೆಯನ್ನು ಗುರುತಿಸಿ ವಚನ ಕುಮಾರಸ್ವಾಮಿ ಹಾಗೂ ರೂಪ ಕುಮಾರಸ್ವಾಮಿ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶಿವರಾಜ್, ಮಹದೇವಸ್ವಾಮಿ, ಗುರುಕಿರಣ್, ಎಚ್.ಡಿ.ಕೋಟೆ ತಾಲೂಕು ಶರಣು ವಿಶ್ವವಚನ ಫೌಂಡೇಷನ್ ಅಧ್ಯಕ್ಷ ಕೆ.ಎಂ. ಮಹೇಶ್, ಕೆಂಡಗಣ್ಣಸ್ವಾಮಿ, ಲೋಕೇಶ್ ಮೂರ್ತಿ ಸೇರಿದಂತೆ ಅನೇಕ ಗಣ್ಯರು, ಬಂಧು–ಬಳಗ ಹಾಗೂ ಭಕ್ತರು ಉಪಸ್ಥಿತರಿದ್ದರು. ವಿವಾಹ ಮಹೋತ್ಸವವು ಧಾರ್ಮಿಕತೆ, ಸಾಹಿತ್ಯ ಸೇವೆ ಮತ್ತು ಶರಣ ಸಂಸ್ಕೃತಿಯ ಸಂದೇಶವನ್ನು ಒಂದೇ ವೇದಿಕೆಯಲ್ಲಿ ಅನಾವರಣಗೊಳಿಸಿದ ವಿಶಿಷ್ಟ ಕಾರ್ಯಕ್ರಮವಾಗಿ ಗಮನ ಸೆಳೆಯಿತು.

ಅಮ್ಮಸಂದ್ರ ಸುರೇಶ್‌ಗೆ ರಾಜ್ಯ ಮಟ್ಟದ ಅತ್ಯುತ್ತಮ ಮಾರುಕಟ್ಟೆ ಅಧಿಕಾರಿ ಪ್ರಶಸ್ತಿ



ಮೈಸೂರು, ಜೂ. 26– ಮೈಸೂರು ಅಂಚೆ ವಿಭಾಗದಲ್ಲಿ ಮಾರುಕಟ್ಟೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಅಮ್ಮಸಂದ್ರ ಸುರೇಶ್ ಅವರಿಗೆ ರಾಜ್ಯ ಮಟ್ಟದ ಅತ್ಯುತ್ತಮ ಮಾರುಕಟ್ಟೆ ಅಧಿಕಾರಿ ಪ್ರಶಸ್ತಿ ಲಭಿಸಿದೆ. ಅವರು ಎರಡು ವಿಭಾಗಗಳಲ್ಲಿ ಪ್ರಶಸ್ತಿಗೆ ಭಾಜನರಾಗಿದ್ದು, 2025–26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಅತೀ ಹೆಚ್ಚು ಗ್ರಾಹಕರನ್ನು ನೋಂದಾಯಿಸಿದ್ದಕ್ಕಾಗಿ ಮತ್ತು ಫಿಲಾಟೆಲಿ ವಿಭಾಗದಲ್ಲಿ ಸಾಧಿಸಿದ ಸಾಧನೆಗಾಗಿ ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಬೆಂಗಳೂರಿನ ಬಸವ ಭವನದಲ್ಲಿ ಕರ್ನಾಟಕ ಅಂಚೆ ವೃತ್ತ ಆಯೋಜಿಸಿದ್ದ 'ಉನ್ನತಿ' ಅಂಚೆ ವೃತ್ತ ಶ್ರೇಷ್ಠತಾ ಪುರಸ್ಕಾರ 2025–26ರ ಸಮಾರಂಭದಲ್ಲಿ ಕರ್ನಾಟಕ ಅಂಚೆ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್ ಪ್ರಶಸ್ತಿಗಳನ್ನು ವಿತರಣೆ ಮಾಡಿದರು. ಸಮಾರಂಭದಲ್ಲಿ ಕರ್ನಾಟಕ ಅಂಚೆ ವೃತ್ತದ ಸ್ಥಾನಿಕ ನಿರ್ದೇಶಕ ಸಂದೇಶ್ ಮಹದೇವಪ್ಪ, ಬೆಂಗಳೂರು ಅಂಚೆ ವಲಯದ ನಿರ್ದೇಶಕರಾದ ಶ್ರೀಮತಿ ತಾರಾ, ದಕ್ಷಿಣ ಕರ್ನಾಟಕ ಅಂಚೆ ವಲಯದ ನಿರ್ದೇಶಕ ವಿಷ್ಣು ಅಂಬರೀಶ್ ಮತ್ತು ಉತ್ತರ ಕರ್ನಾಟಕ ಅಂಚೆ ವಲಯದ ನಿರ್ದೇಶಕ ಶ್ರೀಹರ್ಷ ಉಪಸ್ಥಿತರಿದ್ದರು.

ಅಮ್ಮಸಂದ್ರ ಸುರೇಶ್ ಅವರು ಸತತವಾಗಿ ಮೂರನೇ ವರ್ಷ ಕರ್ನಾಟಕ ಅಂಚೆ ವಲಯದಲ್ಲಿ ಅತ್ಯುತ್ತಮ ಮಾರುಕಟ್ಟೆ ಅಧಿಕಾರಿ ಗೌರವಕ್ಕೆ ಪಾತ್ರರಾಗಿದ್ದಾರೆ. ಇದಕ್ಕಾಗಿ ಅವರನ್ನು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಹೀರ್, ಉಪ ಅಂಚೆ ಅಧೀಕ್ಷಕ ವಿ.ಎಲ್. ನವೀನ್, ಸಹಾಯಕ ಅಧೀಕ್ಷಕ ಮನು ಕುಮಾರ್ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಹೆಮ್ಮಿಗೆಯಲ್ಲಿ ರಸ್ತೆ ನಿರ್ಮಾಣಕ್ಕೆ ಗುದ್ದಲಿ ಪೂಜೆ



ಹುಣಸೂರು, ಜೂ.26– ತಾಲೂಕಿನ ಹೆಮ್ಮಿಗೆ ಹಾಡಿಯಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಮೆಟ್ಲಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದರು.

ಹೆಮ್ಮಿಗೆ ಹಾಡಿಯಲ್ಲಿ 50 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಹಾಗೂ 10 ಲಕ್ಷ ರೂ. ವೆಚ್ಚದ ಮೆಟ್ಲಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹೆಮ್ಮಿಗೆ ಹಾಡಿಯ 50 ಮನೆಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಿರುವುದರಿಂದ ಹಾಡಿ ಅಭಿವೃದ್ಧಿಯತ್ತ ಮಹತ್ವದ ಹೆಜ್ಜೆ ಇರಿಸಿದೆ. ಅಲ್ಲದೇ ರಸ್ತೆ ಸೇರಿದಂತೆ ಇನ್ನಿತರ ಮೂಲ ಸೌಕರ್ಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ಇದರಿಂದ ಹಾಡಿ ನಿವಾಸಿಗಳು ಉತ್ತಮ ಜೀವನ ಮಟ್ಟ ಹೊಂದಲು ಸಹಕಾರಿ ಆಗಲಿದೆ ಎಂದು ತಿಳಿಸಿದರು.

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಪಾಪಣ್ಣ, ತಾಲೂಕು ಜೆಡಿಎಸ್ ಅಧ್ಯಕ್ಷ ಸುರೇಂದ್ರ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಹರವೆ ಶ್ರೀಧರ್, ಗ್ರಾಪಂ ಸದಸ್ಯರು, ಗ್ರಾಮದ ಯಜಮಾನರು, ಹಾಡಿ ನಿವಾಸಿಗಳು ಇದ್ದರು.

ಶೈಲಜಾ ರಾಮಕೃಷ್ಣ ಚಾರಿಟಬಲ್ ಟ್ರಸ್ಟ್‌ನಿಂದ ಕಲಿಕಾ ಸಾಮಗ್ರಿ ವಿತರಣೆ



ಹೆಚ್.ಡಿ.ಕೋಟೆ, ಜೂ. 26– ಮೈಸೂರಿನ ಶೈಲಜಾ ರಾಮಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಜಿಲ್ಲೆಯ ಎಚ್ ಡಿ ಕೋಟೆ ತಾಲೂಕಿನ ನಾಗರಹೊಳೆ ಅರಣ್ಯ ವ್ಯಾಪ್ತಿಯ ಗೋಳೂರು, ಹೊಸೂರು, ಆನೆಮಾಲ, ಬೋಗಾಪುರ ಹಾಗೂ ಕಡೆಗದ್ದೆ ಹಾಡಿಗಳ ಶಾಲೆಗೆ ಟ್ರಸ್ಟ್ ವತಿಯಿಂದ ಹಾಡಿ ಮಕ್ಕಳ ಪ್ರಸ್ತುತ ಶೈಕ್ಷಣಿಕ ವರ್ಷದ ಅನುಕೂಲಕ್ಕಾಗಿ ಕಲಿಕಾ ಸಾಮಗ್ರಿಗಳನ್ನು ಟ್ರಸ್ಟ್ ವತಿಯಿಂದ ವಿತರಿಸಲಾಯಿತು.

ಟ್ರಸ್ಟ್‌ನ ಸಂಸ್ಥಾಪಕಿ ಹಾಗೂ ಅಧ್ಯಕ್ಷರು ಆಗಿದ್ದ ದಿ.ಶೈಲಜಾ ರಾಮಕೃಷ್ಣ ಅವರು ಇತ್ತೀಚೆಗಷ್ಟೇ ಅಗಲಿದ ಹಿನ್ನಲೆ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ವತಿಯಿಂದ ಮೌನ ಆಚರಣೆ ಹಾಗೂ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಅರಣ್ಯ ಭಾಗದ ಡಿ.ಬಿ ಗುಪ್ಪೆ ಪ್ರೌಢ ಶಾಲೆಯಲ್ಲಿ 2025–26 ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಸಂಸ್ಥೆಯ ನೂತನ ಅಧ್ಯಕ್ಷ ಶೇಖರ್ ಆರ್, ಮುಖ್ಯ ಕಾರ್ಯದರ್ಶಿ ಹರೀಶ್ ಕುಮಾರ್, ನಿರ್ದೇಶಕರಾದ ಡಾ. ವಾಸುದೇವ್ ಸಿಂಗ್, ರಾಜೇಶ್ ಬಿ, ಶಿವಪ್ರಸಾದ್, ಕ್ಷೇತ್ರ ಸಂಚಾಲಕ ಗೋವಿಂದರಾಜು, ಸೇರಿದಂತೆ ಶಿಕ್ಷಕ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇಂದು ಎಂಟಿಎ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮೈಸೂರು,ಜೂ.26–ನಗರದ ಸರಸ್ವತಿ ಪುರಂನಲ್ಲಿರುವ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್‌ನ 2025–26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಜೂ. 27 ರಂದು ಸಂಘದ ಕಚೇರಿಯಲ್ಲಿ ಸಂಜೆ 5.30ಕ್ಕೆ ಏರ್ಪಡಿಸಲಾಗಿದೆ. ಸಂಘದ ಎಲ್ಲಾ ಸದಸ್ಯರು ಸಭೆಗೆ ಹಾಜರಾಗಬೇಕೆಂದು ಸಂಘದ ಕಾರ್ಯದರ್ಶಿ ಮಂಜುನಾಥ್ .ಕೆ ಪ್ರತಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

ಜು.6 ರಿಂದ ವಿಶೇಷ ಶಿಕ್ಷಕ ತರಬೇತಿ ಆರಂಭ

ಮೈಸೂರು, ಜೂ.26– ಮೈಸೂರಿನ ಹೆಬ್ಬಾಳ್‌ನಲ್ಲಿರುವ ವಿವೇಕಾನಂದ ಇನ್ಸ್ಟಿಟ್ಯೂಟ್ ಫಾರ್ ಲೀಡರ್ ಶಿಪ್ ಡೆವಲಪ್‌ಮೆಂಟ್ ವತಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ವೃತ್ತಿಯನ್ನು ಬಯಸುವ ಯುವಕರಿಗೆ ಒಂದು ತಿಂಗಳ ವಸತಿ ಸಹಿತ ಕೌಶಾಲ್ಯಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಜು.6 ರಿಂದ ಹಮ್ಮಿಕೊಳ್ಳಲಾಗಿದೆ.

ಈ ತರಬೇತಿಗೆ 18 ರಿಂದ 29 ವರ್ಷ ವಯೋಮಿತಿಯ ಪಿಯುಸಿ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿರುವ ಮೈಸೂರಿನ ಸುತ್ತ ಮುತ್ತಲಿನ ಪ್ರದೇಶದ ಯುವಕರು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊ: 9739017311 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಇಓಗಳನ್ನು ಕರೆದೊಯ್ಯುವಾಗ ಅಪಘಾತದಲ್ಲಿ ಮೃತಪಟ್ಟ ಕಾರು ಚಾಲಕ

ಆನಂದ್ ಕುಟುಂಬಕ್ಕೆ ಶಿಕ್ಷಣ ಇಲಾಖೆ ಉದ್ಯೋಗಿಗಳಿಂದ ಆರ್ಥಿಕ ನೆರವು



ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಇತ್ತೀಚೆಗೆ ನಡೆದ ಅಪಘಾತದಲ್ಲಿ ಮೃತಪಟ್ಟ ಕಾರು ಚಾಲಕ ಆನಂದ್ ಅವರ ಕುಟುಂಬಕ್ಕೆ ಡಿಡಿಪಿಐ ಡಿ.ಉದಯ್‌ಕುಮಾರ್ ನೇತೃತ್ವದ ಶಿಕ್ಷಣಾಧಿಕಾರಿಗಳ ತಂಡ ಸಾಂತ್ವನ ಹೇಳಿ, ಆರ್ಥಿಕ ನೆರವು ನೀಡಿತು.

ಮೈಸೂರು, ಜೂ.26(ಎಂಟಿವೈ)– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಶಿಕ್ಷಣ ಇಲಾಖೆ ಬಿಇಓಗಳು ಪ್ರಯಾಣಿಸುತ್ತಿದ್ದ ತವೇರಾ ಅಪಘಾತಕ್ಕೀಡಾಗಿ ಮೃತಪಟ್ಟ ಚಾಲಕನ ಕುಟುಂಬಕ್ಕೆ ಶಿಕ್ಷಣ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ ಆರ್ಥಿಕ ನೆರವು ನೀಡಿ, ಸಾಂತ್ವನ ಹೇಳಿದರು.

ಮೃತ ಚಾಲಕ ಆನಂದ್ ಅವರ ಗೌರಿಶಂಕರನಗರ ನಿವಾಸಕ್ಕೆ ಡಿಡಿಪಿಐ ಡಿ.ಉದಯಕುಮಾರ್ ಮತ್ತು ಡಯಟ್ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿ ತೆರಳಿ, ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ. ಇದೇ ವೇಳೆ ಆನಂದ್ ಅವರ ಪತ್ನಿ ಚಾಂದಿನಿ ಅವರಿಗೆ ಉದಯಕುಮಾರ್ ಅವರು ವೈಯಕ್ತಿಕವಾಗಿ ನೀಡಿದ 10 ಸಾವಿರ, ಡಯಟ್‌ನ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿ ವರ್ಗದಿಂದ ಬೋಧಕೇತರ ಸಂಘದ ಜಿಲ್ಲಾಧ್ಯಕ್ಷ ರೇವಣ್ಣ ಮತ್ತು ಉಪನ್ಯಾಸಕರಾದ ನಂಜುಂಡ ಆರಾಧ್ಯ ಅವರು ಸಂಗ್ರಹಿಸಿದ್ದ 18 ಸಾವಿರ ರೂ. ಸೇರಿದಂತೆ ಒಟ್ಟು 28 ಸಾವಿರ ರೂ. ನೆರವು ಹಾಗೂ ಅಪಘಾತಕ್ಕೀಡಾದ ತವೇರಾ ಕಾರಿನ ಬೀಗ ಮತ್ತು ಅದರಲ್ಲಿದ್ದ ದಾಖಲಾತಿಗಳನ್ನು ಹಸ್ತಾಂತರಿಸಿದರು. ಅಲ್ಲದೆ, ಆನಂದ್ ಮತ್ತು ಚಾಂದಿನಿ ದಂಪತಿಯ 7 ವರ್ಷದ ಪುತ್ರ ಗಂಧರ್ವನಿಗೆ ಕರ್ನಾಟಕ ಪಬ್ಲಿಕ್ ಶಾಲೆಗೆ ಸೇರಿಸುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹಿರಿಯ ಉಪನ್ಯಾಸಕರಾದ ಕೆ.ವಿ.ಸುರೇಶ್, ಎಪಿಸಿ ಸುರೇಶ್, ವಿಷಯ ಪರಿವೀಕ್ಷಕ ರಾಚಯ್ಯ, ಬೋಧಕೇತರ ಜಿಲ್ಲಾ ಸಂಘದ ಅಧ್ಯಕ್ಷ ರೇವಣ್ಣ, ಉಪನ್ಯಾಸಕರಾದ ಚೆನ್ನಪ್ಪ ನಂಜುಂಡರಾಧ್ಯ, ಗಾಯತ್ರಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಗೌರಿಶಂಕರನಗರದ ನಿವಾಸಿ, ನಿವೃತ್ತ ಪೊಲೀಸ್ ಮಲ್ಲಪ್ಪ ಅವರ ಪುತ್ರ ಆನಂದ್ ಅವರು ಕಳೆದ 15 ವರ್ಷದಿಂದ ಟ್ಯಾಕ್ಸಿ ಓಡಿಸುವ ಮೂಲಕ ಜೀವನ ಕಟ್ಟಿಕೊಂಡಿದ್ದರು. ಜೂ.22ರಂದು ಬೆಳಗ್ಗೆ ಮೈಸೂರಿನಿಂದ ಐವರು ಬಿಇಓ(ಕ್ಷೇತ್ರ ಶಿಕ್ಷಣ ಅಧಿಕಾರಿ)ಗಳನ್ನು ತನ್ನ ತವೇರಾ ಕಾರಿನಲ್ಲಿ(ಕೆಎ–09, ಬಿ–3001) ಬೆಂಗಳೂರಿಗೆ ಕರೆದುಕೊಂಡು ಹೋಗುವಾಗ ಚನ್ನಪಟ್ಟಣದ ಬಳಿ ಟೈರ್ ಸ್ಫೋಟಗೊಂಡು ದುರಂತ ಸಂಭವಿಸಿತು. ಕಾರು ರಸ್ತೆ ವಿಭಜಕದಿಂದಾಚೆಗೆ ಹಾರಿ ಪಕ್ಕದ ಟ್ರ್ಯಾಕ್‌ಗೆ ಉರುಳಿ, ಇದೇ ವೇಳೆ ಬೆಂಗಳೂರಿಂದ ಮೈಸೂರು ಕಡೆಗೆ ಸಾಗುತ್ತಿದ್ದ ಗೂಡ್ಸ್ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ಇದರಿಂದ ಚಾಲಕ ಆನಂದ್ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟು, ಐವರು ಬಿಇಓಗಳು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಇವರಲ್ಲಿ ಬಿಇಓ ರೇವಣ್ಣ ಅವರಿಗೆ ಗಂಭೀರ ಗಾಯವಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಇನ್ನು ಚಿಕಿತ್ಸೆಯಲ್ಲಿದ್ದಾರೆ.

ಮೃತ ಚಾಲಕ ಆನಂದ್ ಅವರ ತಂದೆ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದು, ಅನಾರೋಗ್ಯ ಪೀಡಿತರಾಗಿದ್ದಾರೆ. ಆಸರೆಯಾಗಿದ್ದ ಆನಂದ್ ಅಗಲಿಕೆಯಿಂದ ಇಡೀ ಕುಟುಂಬವೇ ಆಘಾತಕ್ಕೊಳಗಾಗಿದೆ.

ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸವಲತ್ತು ತಲುಪಿಸಿ

ಶಾಸಕ ಡಿ.ರವಿಶಂಕರ್ ಸಲಹೆ



ವಿಕಲಚೇತನರಿಗೆ ತ್ರಿಚಕ್ರ ವಾಹನಗಳನ್ನು ಶಾಸಕ ಡಿ.ರವಿಶಂಕರ್ ವಿತರಿಸಿದರು.

ಕೆ.ಆರ್.ನಗರ, ಜೂ.26– ಸರ್ಕಾರದ ಸವಲತ್ತುಗಳನ್ನು ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಿಸುವುದು ಸರ್ಕಾರಿ ನೌಕರರ ಕರ್ತವ್ಯ. ಅದನ್ನು ಎಲ್ಲರೂ ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ತಾಪಂ ಕಚೇರಿ ಆವರಣದಲ್ಲಿ 20 ಮಂದಿ ವಿಕಲಚೇತನರಿಗೆ ತ್ರಿಚಕ್ರ ವಾಹನ ಹಾಗೂ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿದ ಅವರು, ಸಮಾಜದಲ್ಲಿ ವಿಕಲಚೇತನರು ಸ್ವಾವಲಂಬಿಗಳಾಗಿ ಬದುಕಬೇಕು. ಉದ್ಯೋಗಕ್ಕಾಗಿ ಮತ್ತು ಮತ್ತಿತರ ವ್ಯವಸ್ಥೆಗಳಿಗೆ ಬೇರೆಯವರನ್ನು ಆಶ್ರಯಿಸಬೇಕಾದ ಅನಿವಾರ್ಯತೆ ಇದೆ. ಆ ಕಾರಣಕ್ಕೆ ಅವರ ಬದುಕಿಗೆ ಚೈತನ್ಯ ನೀಡಲು ಮತ್ತು ಉಳಿದವರಿಗಿಂತ ನಾವೇನೂ ಕಡಿಮೆ ಇಲ್ಲ ಎಂದು ಸಾಧಿಸಿ ತೋರಿಸಲು ಸರ್ಕಾರ ತ್ರಿಚಕ್ರ ವಾಹನ ನೀಡುತ್ತಿದೆ. ಇದರ ಸದುಪಯೋಗ ಪಡೆದುಕೊಂಡು ಉತ್ತಮವಾಗಿ ಬದುಕು ಸಾಗಿಸಿ ಎಂದರು.

ಡಿ.ದೇವರಾಜು ಅರಸು ನಿಗಮದಿಂದ 2024–25ನೇ ಸಾಲಿನಲ್ಲಿ ಒಟ್ಟು 30 ಫಲಾನುಭವಿಗಳು ಉಚಿತ ಹೊಲಿಗೆ ಯಂತ್ರ ವಿತರಣೆಗೆ ಆಯ್ಕೆಯಾಗಿದ್ದು, ಇಂದು ಕೇವಲ ನಾಲ್ವರಿಗೆ ಸಾಂಕೇತಿಕವಾಗಿ ನೀಡಲಾಗಿದ್ದು, ಉಳಿದವರಿಗೆ ಇಲಾಖೆ ಅಧಿಕಾರಿಗಳು ವಿತರಣೆ ಮಾಡುತ್ತಾರೆ. ಫಲಾನುಭವಿಗಳು ಸರ್ಕಾರದ ಸವಲತ್ತುಗಳನ್ನು ಅನ್ಯರಿಗೆ ನೀಡದೆ ಸದುಪಯೋಗಪಡಿಸಿಕೊಂಡು ಯೋಜನೆಗಳ ಯಶಸ್ಸಿಗೆ ಸಹಕಾರ ನೀಡಬೇಕು ಎಂದರು.

ಈ ವೇಳೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಂ.ಎಸ್. ಮಹದೇವ್, ಉದಯಶಂಕರ್, ತಾಲೂಕು ವಕ್ಫಾರ ಸೈಯದ್ ಜಾಬೀರ್, ತಾಪಂ ಇಓಗಳಾದ ವಿ.ಪಿ.ಕುಲದೀಪ್, ಎ.ಎನ್.ರವಿ, ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಬಿ.ನಟರಾಜು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸಹಾಯಕ ಅಭಿವೃದ್ಧಿ ಅಧಿಕಾರಿ ಎನ್. ರಂಗಸ್ವಾಮಿ, ವಿಕಲಚೇತನರು ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ತಾಲೂಕು ಸಂಯೋಜಕ ಕೆ.ಎಲ್. ಹೇಮಂತ್ ಕುಮಾರ್, ತಾಪಂ ಮಾಜಿ ಸದಸ್ಯ ಎಲ್.ಎಂ.ಸಣ್ಣಪ್ಪ, ಕಾಂಗ್ರೆಸ್ ಮುಖಂಡರಾದ ಹುಚ್ಚೇಗೌಡ, ವಿ.ಸುರೇಶ್, ಎನ್.ಎಂ.ಶಂಕರಪ್ಪ, ತಿಮ್ಮಶೆಟ್ಟಿ ಹಾಜರಿದ್ದರು.

ಇಂದು, ನಾಳೆ ಮೈಗ್ರೀನ್–2026 ವಸ್ತು ಪ್ರದರ್ಶನ

ಮೈಸೂರು,ಜೂ.26– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ, ಮೈಸೂರಿನ ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ, ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೈಗ್ರೀನ್–2026 ಪರಿಸರ ಸ್ನೇಹಿ ಪದಾರ್ಥಗಳ ವಸ್ತು ಪ್ರದರ್ಶನವನ್ನು ಜೂ.27 ಮತ್ತು 28 ರಂದು ನಾಡದ ನಜರಬಾದ ಬಹದ್ದೂರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಗ್ರೀನ್–2026 ವಸ್ತು ಪ್ರದರ್ಶನವನ್ನು ಜೂನ್ 27 ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಶ್ರೀಮತಿ ಉಷಾಕುಮಾರಿ ಉದ್ಘಾಟಿಸಲಿದ್ದಾರೆ. ಪ್ರದರ್ಶನದಲ್ಲಿ ಪರಿಸರ ಸ್ನೇಹಿ ಕಟ್ಟಡ ನಿರ್ಮಾಣ ಪದಾರ್ಥಗಳು, ನವೀಕರಿಸಿದ ಉತ್ಪನ್ನಗಳು, ಸಾವಯವ ಗೊಬ್ಬರ ತಯಾರಿಕೆ, ಶೌಚಾಲಯ ಶುದ್ಧೀಕರಣ ವಸ್ತುಗಳು ಸೇರಿದಂತೆ ಪರಿಸರ ಸ್ನೇಹಿ ಉತ್ಪನ್ನಗಳ ಪ್ರದರ್ಶನ ಇರಲಿದೆ. ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದ್ದು, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ರ ವರೆಗೆ ಪ್ರದರ್ಶನವು ತೆರೆದಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಹುಟ್ಟುಹಬ್ಬದ ಶುಭಾಶಯ



ನಾಯಕ ಸಮುದಾಯದ ಹೋರಾಟಗಾರರು ಹಾಗೂ ಅಹಿಂದ ನಾಯಕರಾದ ದ್ಯಾವಪ್ಪನಾಯಕ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಶ್ರೀ ಪ್ರಸನ್ನಾನಂದ ಸ್ವಾಮೀಜಿ, ರಾಯಚೂರು ಸಂಸದ ಕುಮಾರ ನಾಯಕ್, ಮುಖಂಡರಾದ ರಾಮಚಂದ್ರು, ಅಪ್ಪಣ್ಣ, ಮಾಜಿ ಮೇಯರ್ ಶಿವಕುಮಾರ್, ಜಗದೀಶ್‌ಮೂರ್ತಿ ಅಭಿನಂದಿಸಿ, ಶುಭಾಶಯ ಕೋರಿದರು.

ಬಿವಿಎ ಸ್ನಾತಕೋತ್ತರ ಪದವಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.26– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು ವತಿಯಿಂದ 2026–27 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ.ವಿ.ಎ. ದೃಶ್ಯಕಲೆಯಲ್ಲಿ ನಾಲ್ಕು ವರ್ಷದ ಎಂಟು ಸೆಮಿಸ್ಟರ್‌ಗಳ ರಾಜ್ಯ ಶಿಕ್ಷಣ ಪದ್ಧತಿ (STATE EDUCATION POLICY) ಪಿ.ಯು.ಸಿ./ ಸಮಾನಾಂತರ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಪದವಿಯಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ (ಅಚ್ಚುಕಲೆ), ಅನ್ವಯಕಲೆ, ಕಲಾ ಇತಿಹಾಸ ಹಾಗೂ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಷಯಗಳಲ್ಲಿ ವಿಶೇಷ ಅಧ್ಯಯನ ಒಳಗೊಂಡಿದ್ದು, ಪ್ರವೇಶಾತಿ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನವನ್ನು ಜುಲೈ 6 ರಂದು ನಡೆಸಲಾಗುತ್ತದೆ. ಆಸಕ್ತ ವಿದ್ಯಾರ್ಥಿಗಳು ಜುಲೈ 4 ರೊಳಗೆ (ದಂಡ ಶುಲ್ಕದೊಂದಿಗೆ) (UUCMS): https://uucms.karnataka.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ದೂರವಾಣಿ ಸಂಖ್ಯೆ 0821–2438931 ನ್ನು ಸಂಪರ್ಕಿಸಬಹುದೆಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆಯಂದು ಹೋಮ ಹವನ

ಮೈಸೂರು,ಜೂ.26– ನಗರದ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಜೂ.29ರಂದು ಮಹಾ ಮೃತ್ಯುಂಜಯ ಹೋಮ ಮತ್ತು ಮೇಷ, ಸಿಂಹ, ವೃಶ್ಚಿಕ, ಕುಂಭ ಹಾಗೂ ಮೀನಾ ರಾಶಿಯವರಿಗೆ ಶನಿ ಮಹಾಶಾಂತಿ, ಗುರು ಶಾಂತಿ, ಕುಜ ಶಾಂತಿ, ರಾಹು ಶಾಂತಿ ಮತ್ತು ಆಯುಷ್ಯಹೋಮ, ವಿದ್ಯಾಪ್ರದ ದಕ್ಷಿಣಾಮೂರ್ತಿ ಹೋಮವನ್ನು ಏರ್ಪಡಿಸಲಾಗಿದ್ದು, ಅಂದು ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12ಕ್ಕೆ ಮಹಾ ಮಂಗಳಾರತಿ ಮತ್ತು ಪೂರ್ಣಾಹುತಿ ಜರುಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಂತರರಾಷ್ಟ್ರೀಯ ಮಾದಕ ದ್ರವ್ಯ ದುರ್ಬಳಕೆ, ಅಕ್ರಮ ಸಾಗಣೆ ವಿರೋಧಿ ದಿನಾಚರಣೆ



ಮೈಸೂರಿನ ಜಯಲಕ್ಷ್ಮೀಪುರಂನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ ಮತ್ತು ಸ್ವಚ್ಛತಾ ಸಮಿತಿ, ಮಹಿಳಾ ಸಬಲೀಕರಣ ಘಟಕ ಹಾಗೂ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಸಂಯುಕ್ತ ಆಶ್ರಯದಲ್ಲಿ ಅಂತರರಾಷ್ಟ್ರೀಯ ಮಾದಕ ದ್ರವ್ಯ ದುರ್ಬಳಕೆ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಡಾ. ಚಂದ್ರಶೇಖರ ಎಚ್.ಎನ್. ಅಧ್ಯಕ್ಷತೆ ವಹಿಸಿದ್ದರು. ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯ ಉಪನಿರೀಕ್ಷಕ ನಾರಾಯಣ್ ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ವೆಂಕಟೇಶ್ ಎಸ್. ಹಾಗೂ ಆರೋಗ್ಯ ಮತ್ತು ಸ್ವಚ್ಛತಾ ಸಮಿತಿ ಮತ್ತು ಮಹಿಳಾ ಸಬಲೀಕರಣ ಘಟಕದ ಸಂಚಾಲಕರಾದ ಕುಮಾರಿ ಶುಚಿ ಎಚ್. ಆರ್. ಉಪಸ್ಥಿತರಿದ್ದರು.

ಜು.2, ಡಾ.ಫ.ಗು ಹಳಕಟ್ಟಿ ಜನ್ಮದಿನಾಚರಣೆ

ಮೈಸೂರು ಜೂ.26– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಡಾ.ಫ.ಗು ಹಳಕಟ್ಟಿ ಅವರ ಜಯಂತ್ಯೋತ್ಸವ ಸಮಿತಿ ವತಿಯಿಂದ ಡಾ.ಫ.ಗು ಹಳಕಟ್ಟಿ ಜನ್ಮದಿನ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಜು.2 ರಂದು ಮಧ್ಯಾಹ್ನ 11.30 ಘಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿರುತ್ತದೆ.

ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಎಸ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್ ಸಿ. ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಹೆಚ್.ಡಿ. ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಎನ್. ರಂಗಸ್ವಾಮಿ, ಕರ್ನಾಟಕ ಕಾವ್ಯ ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಡಾ. ಪುಷ್ಪಾ ಅಮರನಾಥ್ ಆಗಮಿಸಲಿದ್ದಾರೆ.

ಸಮಾರಂಭದ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ., ಟಿ.ಎಸ್. ಶ್ರೀವತ್ಸ, ಜಿ.ಡಿ. ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಕೆ.ವೆಂಕಟೇಶ್, ಡಾ. ಹೆಚ್.ಸಿ ಮಹದೇವಪ್ಪ, ವಿಧಾನ ಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕೆ. ಶಿವಕುಮಾರ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಕರ್ನಾಟಕ ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತ ಹಾಗೂ ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ರಾಂಜಾನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಸಂಕಲ್ಪ ತೊಟ್ಟು ನಾಡು ಕಟ್ಟಿದ ಕೆಂಪೇಗೌಡರು



ಬಾಲಕನಾಗಿದ್ದಾಲೇ ಇಂತಹದೊಂದು ನಗರವನ್ನು ತಾನೂ ನಿರ್ಮಿಸಬೇಕೆಂಬ ಕನಸು ಕಂಡಿದ್ದ ಕನಸುಗಾರ ಕೆಂಪೇಗೌಡ ಈಗ ಅದನ್ನು ಸಾಕಾರಗೊಳಿಸುವತ್ತ ದೃಢ ಸಂಕಲ್ಪದೊಂದಿಗೆ ದೇಶ ಸಂಚಾರ ಮುಗಿಸಿ ಯಲಹಂಕಕ್ಕೆ ವಾಪಸ್ಸಾಗುತ್ತಾರೆ. 1528 ರಲ್ಲಿ ಚೆನ್ನಮಾಂಬೆ ಯೊಡನೆ ವಿವಾಹವಾಗಿ ಯುವರಾಜರಾಗಿ ಪಟ್ಟಾಭಿಷಕ್ತರಾಗುತ್ತಾರೆ. ಆ ನಂತರ 1531ರಲ್ಲಿ ಯಲಹಂಕ ಪ್ರಭುವಾಗಿ ಪಟ್ಟಾಭಿಷಕ್ತರಾಗಿ ರಾಜ್ಯಾಡಳಿತದ ಚುಕ್ಕಾಣಿ ಹಿಡಿಯುತ್ತಾರೆ. ಅಲ್ಲಿಂದ ಆರಂಭವಾಗುತ್ತದೆ ಕೆಂಪೇಗೌಡರ ಸುವರ್ಣ ಯುಗ. ಇದು ಅಂತಿಂಥಾ ಸುವರ್ಣ ಯುಗವಲ್ಲ. ಇಡೀ ಜಗತ್ತೇ ಕೆಂಪೇ ಗೌಡರತ್ತ ಹಾಗೂ ಇವರು ನಿರ್ಮಿಸಿದ ಬೆಂಗಳೂರಿನತ್ತ ತಿರುಗಿ ನೋಡುವಂಥಾ ಮಹದದ್ಭುತ...!

ಕರ್ನಾಟಕದ ಚರಿತ್ರೆಯಲ್ಲಿ ಯಲಹಂಕ ನಾಡಿನ ಇತಿಹಾಸ ಬಹಳ ಅದ್ಭುತವಾದುದು. ಅಷ್ಟೇ ವೈಶಿಷ್ಟ್ಯಪೂರ್ಣವಾದುದು. ಸುವರ್ಣ ಪುಟಗಳಲ್ಲಿ ಬರೆದಿಡುವಷ್ಟು ವರ್ಣರಂಜಿತ ವೈಭವಪೂರ್ಣವಾದುದು. ನಾಡಿನಿಂದಾಚೆಗೂ, ದೇಶದಿಂದಾಚೆಗೂ ಖ್ಯಾತಿ ಹಾಗೂ ಪ್ರಭಾವವುಳ್ಳದ್ದು. ವಿಶೇಷವಾಗಿ ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಯಲ್ಲಿ ಯಲಹಂಕ ನಾಡಿನ ಪ್ರಭುಗಳ ಪಾತ್ರ ಅತ್ಯಂತ ಮಹತ್ತರವಾದದ್ದು.

ವಾಸ್ತವವಾಗಿ ಯಲಹಂಕ ಒಂದು ಸಾಮಾನ್ಯ ಸಾಮಂತ ರಾಜ್ಯ. ಆದರೆ, ಇದು ಕನ್ನಡ ನಾಡಿಗೆ ನೀಡಿದ ಕೊಡುಗೆ ಅಸಾಮಾನ್ಯ. ಯಾವ ಸಾಮ್ರಾಜ್ಯದ ಸಾಮ್ರಾಟರಿಗೂ ಕಮ್ಮಿಯಿಲ್ಲದಂತೆ ಇಲ್ಲಿನ ಪ್ರಭುಗಳು ಆಳ್ವಿಕೆ ನೀಡಿದ್ದಾರೆ. ಇತಿಹಾಸಕಾರರ ಪ್ರಕಾರ ಯಲಹಂಕ ಪ್ರಭುಗಳು ಅರ್ಥಾತ್ ರಾಜರು ಹತ್ತು ಮಂದಿ. ಇವರಲ್ಲಿ ಪ್ರಥಮ ರಾಜನಾದ ದೇವರಸಗೌಡರೇ ನಾಡಪ್ರಭು ಕೆಂಪೇಗೌಡರ ವಂಶಸ್ಥರ ಮೂಲ ಪುರುಷ. ಇವರು ಹೊಯ್ಸಳರ ಸಾಮಂತನಾಗಿ 'ಕುರುವಗೆರೆ' ಎಂಬ ಪ್ರದೇಶದಿಂದ ರಾಜ್ಯಾಡಳಿತ ಮಾಡುತ್ತಿದ್ದರು. ಕ್ರಿ.ಶ. 1200ರ ಶಾಸನವೊಂದು ಇವರ ಬಗ್ಗೆ ಮಾಹಿತಿ ತಿಳಿಸುತ್ತದೆ.

ಚಕ್ರವರ್ತಿಗಳ ಚಕ್ರವರ್ತಿಗಳೆಂದೇ ಗುರುತಿಸಿಕೊಂಡಿದ್ದ ಹೊಯ್ಸಳರ ಸಾಮಂತನಾಗಿದ್ದ ದೇವರಸಗೌಡ ನಂತರದ ದಿನಗಳಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿ 'ಆವತಿ' ಎನ್ನುವ ಊರಿಗೆ ಬಂದು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಆವತಿ, ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿದೆ. ದೇವರಸಗೌಡ ಆವತಿಯನ್ನು ಕೇಂದ್ರಸ್ಥಾನ ಮಾಡಿಕೊಂಡು ಇಲ್ಲಿ ನೆಲೆನಿಂತ ಕಾರಣ ಈ ವಂಶಸ್ಥರನ್ನು 'ಆವತಿ ನಾಡಗೌಡ ಪ್ರಭುಗಳು' ಎಂದೂ ಕರೆಯಲಾಗಿದೆ.

ಎರಡನೇ ರಾಜ ಜಯಗೌಡ ಈತ ದೇವರಸಗೌಡರ ಪುತ್ರ. ಇವರು ತನ್ನ ತಂದೆ ದೇವರಸಗೌಡರ ಹೆಸರಿನಲ್ಲಿ ನಿರ್ಮಿಸಿದ ಹಳ್ಳಿಯೇ 'ದೇವನಹಳ್ಳಿ'. ಇವರು ಆವತಿಯಿಂದ ತನ್ನ ರಾಜಧಾನಿಯನ್ನು ಯಲಹಂಕಕ್ಕೆ ಬದಲಾಯಿಸಿದರು. ಇವರ ನಿಧನದ ನಂತರ ಒಂದನೇ ಭೈರೇಗೌಡ ಆಳ್ವಿಕೆಗೆ ಬಂದರು. ಇವರು ಹೊಯ್ಸಳರೊಡನೆ ಒಳ್ಳೆಯ ಸಂಬಂಧ ಹೊಂದಿದ್ದ ಕಾರಣ ದೊಡ್ಡಬಳ್ಳಾಳನ ನೆನಪಿಗಾಗಿ ದೊಡ್ಡಬಳ್ಳಾಪುರ ಪಟ್ಟಣವನ್ನು ನಿರ್ಮಿಸಿದರು. ಹೊಯ್ಸಳರ ಪಟ್ಟದರಸಿ ಶಾಂತಲಾದೇವಿಯ ಪುತ್ರ ಚಿಕ್ಕಬಳ್ಳಾಳ. ಇವನ ಗೌರವಾರ್ಥ ಒಂದನೇ ಭೈರೇಗೌಡ ಚಿಕ್ಕಬಳ್ಳಾಪುರ ನಿರ್ಮಿಸಿದರು.

ಚಿಕ್ಕಬಳ್ಳಾಪುರದ ನಿರ್ಮಾತೃ ಎಂಬ ಕೀರ್ತಿಗೆ ಭಾಜನರಾಗಿದ್ದ ಒಂದನೇ ಭೈರೇಗೌಡನ ಕಾಲಾನಂತರ ಇಮ್ಮಡಿ ಭೈರೇಗೌಡ ಅಧಿಕಾರದ ಚುಕ್ಕಾಣಿ ಹಿಡಿದ. ಈತನನ್ನು ರಣಭೈರೇಗೌಡ ಎಂದೂ ಕರೆಯಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯ ಕಟ್ಟುವ ಕಾಲದಲ್ಲಿ ಅವರಿಗೆ ಸರ್ವ ರೀತಿಯಲ್ಲಿ ಸಹಕಾರ ನೀಡಿ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ಇವನು ಪ್ರಮುಖ ಪಾತ್ರವಹಿಸಿದ್ದ. ಇಮ್ಮಡಿ ಭೈರೇಗೌಡನ ನಂತರ ಈತನ ಪುತ್ರ ನಂಜಪ್ಪಗೌಡ ಪಟ್ಟಕ್ಕೆ ಬಂದ. ನಂಜಪ್ಪಗೌಡನಿಗೆ ಬಹಳಕಾಲ ಮಕ್ಕಳಿರಲಿಲ್ಲ. ತಮ್ಮ ಕುಲದೇವತೆಯಾದ 'ಕುರುವಗೆರೆ ಕೆಂಪಮ್ಮ'ನಿಗೆ ಹರಕೆ ಕಟ್ಟಿಕೊಂಡಿದ್ದರಿಂದ ದೇವಿಯ ಆಶೀರ್ವಾದದ ಫಲವಾಗಿ ಕೆಂಪನಂಜೇಗೌಡ ಜನಿಸಿದ. ಈತನೇ ನಾಡಪ್ರಭು ಕೆಂಪೇಗೌಡರ ತಂದೆ.

ಕೆಂಪನಂಜೇಗೌಡ ಮತ್ತು ಲಿಂಗಮಾಂಬೆ ದಂಪತಿಗೆ ನಾಲ್ಕು ಮಂದಿ ಗಂಡು ಮಕ್ಕಳು. ಅವರಲ್ಲಿ ಹಿರಿಮಗನೇ ನಾಡಪ್ರಭುವಾದ ಕೆಂಪೇಗೌಡ. ಇವರು 1510ರಲ್ಲಿ ಜನಿಸಿದರು. ಇವರ ಒಡಹುಟ್ಟಿದವರು ವೀರೇಗೌಡ, ಬಸವೇಗೌಡ ಹಾಗೂ ಕೆಂಪಸೋಮೇಗೌಡ. ಇವರುಗಳ ತಂದೆ ಕೆಂಪನಂಜೇಗೌಡ ವಿಜಯನಗರ ಸಾಮ್ರಾಜ್ಯಕ್ಕೆ ಅತ್ಯಂತ ನಿಷ್ಠನಾಗಿದ್ದರಿಂದ ಕೃಷ್ಣದೇವರಾಯ ಇವನನ್ನು ಹಾಗೂ ಇವನ ಆಡಳಿತದ ಕಾರ್ಯ ಶೈಲಿಯನ್ನು ಬಹಳ ಮೆಚ್ಚಿಕೊಂಡಿದ್ದ. ಇದು ನಾಡಪ್ರಭು ಕೆಂಪೇಗೌಡರ ಕಾಲಕ್ಕೂ ಮುಂದುವರೆದು ಕೃಷ್ಣದೇವರಾಯನಿಗೆ ಕೆಂಪೇಗೌಡ ಅತ್ಯಂತ ಪ್ರೀತಿ ಪಾತ್ರನಾಗಿದ್ದ.

ಯಲಹಂಕ ಊರಿಗೆ ಅಂದಾಜು 1200 ವರ್ಷಗಳ ಇತಿಹಾಸ ವಿದೆ. ಗಂಗರ ಕಾಲದಲ್ಲಿ ಇದು ಹೆಚ್ಚಿನ ಮಹತ್ವ ಪಡೆದಿತ್ತು, ವಿಶೇಷ ಮಾನ್ಯತೆಗಳಿಸಿತ್ತು. ಬೆಂಗಳೂರು ಸಮೀಪದ ಚಿಕ್ಕಜಾಲದ ಚೆನ್ನಕೇಶವ ಯಲಹಂಕ ಪ್ರಭುಗಳ ಆರಾಧ್ಯದೈವ. ಹಾಗೆಯೇ ಕುರುವಗೆರೆ ಕೆಂಪಮ್ಮ ಆರಾಧ್ಯ ದೇವತೆ. ಕುಲದೈವ ಭೈರವೇಶ್ವರ. ನಾಡಪ್ರಭು ಕೆಂಪೇಗೌಡರ ವಂಶಸ್ಥರು ರಾಜ್ಯಭಾರ ಮಾಡಿದ ಮತ್ತೊಂದು ಪ್ರಮುಖ ಸ್ಥಳ 'ಮಾಗಡಿ'. ಇದು 12ನೇ ಶತಮಾನದಲ್ಲಿ ಚೋಳರಾಜನೊಬ್ಬನಿಂದ ಸ್ಥಾಪಿತವಾಯಿತೆಂದು ಹೇಳಲಾಗುತ್ತದೆ. ಇದಕ್ಕೆ ಪೂರಕವಾದ ಐತಿಹ್ಯ ಕೂಡ ಇಲ್ಲುಂಟು. ನಂತರದ ದಿನಗಳಲ್ಲಿ 'ಮಾಗಡಿ'ಯು ಹೊಯ್ಸಳರ ಕೈವಶವಾಗಿ ಬಳಿಕ ವಿಜಯನಗರದ ಅರಸರ ಕೈ ಸೇರಿತು. ಅಂತಿಮವಾಗಿ ಕೆಂಪೇಗೌಡರ ವಂಶಸ್ಥರ ವಶಕ್ಕೆ ಬಂತು.

ಇದನ್ನು ಬಹು ವೈಭವದಿಂದ ಆಳಿದ ನಾಡಪ್ರಭು ಕೆಂಪೇಗೌಡರ ಎರಡನೇ ಪುತ್ರ ಇಮ್ಮಡಿ ಕೆಂಪೇಗೌಡನು ಮಾಗಡಿ ಕೆಂಪೇಗೌಡರೆಂದೇ ಕರೆಸಿಕೊಂಡು ಹೆಸರುವಾಸಿಯಾದರು. ಮತ್ತೊಬ್ಬ ಮಗ ಗಿಡ್ಡೇಗೌಡ ಕ್ರಿ.ಶ. 1578 ರವರೆಗೆ ಆಳಿದನೆಂದು ಹೇಳಲಾಗುತ್ತದೆ. 18ನೇ ಶತಮಾನದ ಪ್ರಾರಂಭದ ತನಕವೂ ಕೆಂಪೇಗೌಡರ ವಂಶಸ್ಥರ ಆಳ್ವಿಕೆಯಲ್ಲಿದ್ದ ಮಾಗಡಿ ಆ ನಂತರ ಮೈಸೂರು ಅರಸರ ಪಾಲಾಯಿತು. ಕ್ರಿ.ಶ. 1791 ರಲ್ಲಿ ಇದನ್ನು ಬ್ರಿಟಿಷರು ಆಕ್ರಮಿಸಿಕೊಂಡರು. ಅಲ್ಲಿಗೆ ವೈಭವದ ಮಾಗಡಿಯ ಇತಿಹಾಸ ಮಣ್ಣುಗೂಡಿತು. ಇದು ನಾಡಪ್ರಭು ಕೆಂಪೇಗೌಡರ ವಂಶಸ್ಥರ ಇತಿಹಾಸ.

ಆದರೆ, ಸುಮಾರು 500 ವರ್ಷಗಳ ಕಾಲ ವೈಭವ ಪೂರ್ಣವಾಗಿ ಆಡಳಿತ ನಡೆಸಿದ ಈ ವಂಶದ ಸಾಮ್ರಾಜ್ಯ ನಾಡಪ್ರಭು ಕೆಂಪೇಗೌಡರ ಕಾಲದಲ್ಲಿ ಮೈಸೂರು ಸಂಸ್ಥಾನಕ್ಕಿಂತ ವಿಶಾಲವಾಗಿತ್ತು. ವಿಶ್ವವಿಖ್ಯಾತಿಯಾಗಿ ಮೆರೆದಿತ್ತು. ವಜ್ರದೋಪಾದಿಯ ಇಂಥಾ ಕಿರೀಟಪ್ರಾಯ ವಂಶದಲ್ಲಿ ರತ್ನಪ್ರಾಯರಾಗಿ ಜನಿಸಿದ ನಾಡಪ್ರಭು ಕೆಂಪೇಗೌಡ, ಪುಟ್ಟ ವಯಸ್ಸಿನಲ್ಲೇ ಪುಟಿದೇಳುವ ಪಾದರಸದಂತಹ ಚುರುಕು ಸ್ವಭಾವದ ಕ್ರಿಯಾಶೀಲತೆ ಹೊಂದಿದ್ದರು. ತನ್ನ ಜೀವಿತಾವಧಿಯಲ್ಲಿ ಏನಾದರೂ ಅದ್ಭುತವಾದುದ್ದನ್ನು ಸಾಧಿಸಿ ಸೈ ಎನಿಸಿಕೊಳ್ಳಬೇಕೆಂಬ ಮಹದಾಕಾಂಕ್ಷೆ ಬಾಲಕ ಕೆಂಪೇಗೌಡನ ಕಣ್ಣುಗಳಲ್ಲಿ ಆಗಲೇ ನಲಿಯುತ್ತಿತ್ತು.

ಇವರ ಬಾಲ್ಯ ಅತ್ಯಂತ ರೋಚಕವಾದದ್ದು. ತಂದೆ ಕೆಂಪನಂಜೇಗೌಡನಿಗೆ ಮಗ ಕೆಂಪೇಗೌಡನ ಮೇಲೆ ಅಗಾಧ ಪ್ರೀತಿ ಮತ್ತು ಅನನ್ಯ ಪ್ರೇಮ. ಹಾಗಾಗಿ ಕೆಂಪೇಗೌಡನನ್ನು ಸಕಲಕಲಾವಲ್ಲಭನನ್ನಾಗಿ ಮಾಡಬೇಕೆಂಬ ಅದಮ್ಯ ಆಸೆ. ಅದಕ್ಕೆ ತಕ್ಕ ಹಾಗೆ 'ಬೆಳೆವ ಸಿರಿ ಮೊಳಕೆಯಲ್ಲಿ ನೋಡು' ಎಂಬಂತೆ ಬಾಲಕ ಕೆಂಪೇಗೌಡ ಎಲ್ಲದಕ್ಕೂ ಸಿದ್ಧನಿದ್ದ. ಗುರುಗಳೆಂದರೆ ಹೀಗಿರಬೇಕೆನ್ನುವಂತಿದ್ದ ಮಹಾ ಪಂಡಿತ ಐಗಂಡಪುರದ ಮಾಧವಭಟ್ಟರಲ್ಲಿ, ಶಿಷ್ಯನೆಂದರೆ ಹೀಗಿರಬೇಕೆನ್ನು ವಂತಿದ್ದ ಐದು ವರ್ಷದ ಬಾಲಕ ಕೆಂಪೇಗೌಡನನ್ನು ತಂದೆ ಕೆಂಪನಂಜೇ ಗೌಡ ವಿದ್ಯಾಭ್ಯಾಸಕ್ಕೆ ಸೇರಿಸಿದ್ದರು. ಅಲ್ಲಿ ಗುರುಗಳಿಂದ ಆಡಳಿತ, ರಾಜನೀತಿ ಸೇರಿದಂತೆ ಸಕಲ ವಿಷಯಗಳಲ್ಲೂ ಪರಿಣಿತಿಗಳಿಸಿದ ಕೆಂಪೇಗೌಡರು ಕುದುರೆ ಸವಾರಿ, ಕತ್ತಿವರಸೆ, ಮಲ್ಲಯುದ್ಧ ಸೇರಿದಂತೆ ರಾಜನಿಗಿರಬೇಕಾದ ಸರ್ವ ವಿದ್ಯೆಗಳಲ್ಲೂ ಸಮರ್ಥರಾದರು. ಅಲ್ಲಿ ಗೆಳೆಯನಾಗಿ ದೊರೆತ ನಾರಾಯಣಭಟ್ಟ(ನಾಣಿ) ಕೆಂಪೇಗೌಡನ ಪ್ರತಿಯೊಂದು ಹೆಜ್ಜೆಯಲ್ಲೂ ಸಹಕಾರದ ಆತ್ಮೀಯನಾಗಿದ್ದ. ಇವರಿಬ್ಬರ ಸ್ನೇಹ ಕೃಷ್ಣ–ಕುಚೇಲ ಸಂಬಂಧವಾಗಿತ್ತು.

ಗುರುದೇವ ಮಾಧವಭಟ್ಟರ ಅಣತಿಯಂತೆ ರಾಜ್ಯಾಡಳಿತದ ರಥವೇರುವ ಮುನ್ನ 'ದೇಶ ನೋಡು ಕೋಶ ಓದು' ಎಂಬಂತೆ ದೇಶ ಪರ್ಯಟನೆಗೆ ಹೊರಟ ಕೆಂಪೇಗೌಡ ಮೊದಲಿಗೆ ವಿಜಯನಗರಕ್ಕೆ ಭೇಟಿ ನೀಡುತ್ತಾರೆ. ಐದಾರು ವರ್ಷಗಳ ಬಾಲಕನಾಗಿದ್ದಾಗಲೇ 1515ರ ಆಸುಪಾಸಿನಲ್ಲಿ ಒಮ್ಮೆ ತಂದೆಯ ಹೆಗಲ ಮೇಲೆ ಕೂತು ರಾಜಧಾನಿ ಹಂಪಿಯಲ್ಲಿ ವಿಜಯನಗರದ ವೈಭವವನ್ನು ಕಂಡು ಬೆರಗಾಗಿದ್ದ ಕೆಂಪೇಗೌಡ ಈಗ ಮತ್ತಷ್ಟು ನಿಬ್ಬೆರಗುಗೊಂಡು ರೋಮಾಂಚಿತನಾಗುತ್ತಾರೆ. ಅಷ್ಟೇ ಅಲ್ಲ, ಬಾಲಕನಾಗಿದ್ದಾಲೇ ಇಂತಹದೊಂದು ನಗರವನ್ನು ತಾನೂ ನಿರ್ಮಿಸಬೇಕೆಂಬ ಕನಸು ಕಂಡಿದ್ದ ಕನಸುಗಾರ ಕೆಂಪೇಗೌಡ ಈಗ ಅದನ್ನು ಸಾಕಾರಗೊಳಿಸುವತ್ತ ದೃಢ ಸಂಕಲ್ಪದೊಂದಿಗೆ ದೇಶ ಸಂಚಾರ ಮುಗಿಸಿ ಯಲಹಂಕಕ್ಕೆ ವಾಪಸ್ಸಾಗುತ್ತಾರೆ. 1528 ರಲ್ಲಿ ಚೆನ್ನಮಾಂಬೆಯೊಡನೆ ವಿವಾಹವಾಗಿ ಯುವರಾಜರಾಗಿ ಪಟ್ಟಾಭಿಷಕ್ತರಾಗುತ್ತಾರೆ. ಆ ನಂತರ 1531ರಲ್ಲಿ ಯಲಹಂಕ ಪ್ರಭುವಾಗಿ ಪಟ್ಟಾಭಿಷಕ್ತರಾಗಿ ರಾಜ್ಯಾಡಳಿತದ ಚುಕ್ಕಾಣಿ ಹಿಡಿಯುತ್ತಾರೆ. ಅಲ್ಲಿಂದ ಆರಂಭವಾಗುತ್ತದೆ ಕೆಂಪೇಗೌಡರ ಸುವರ್ಣಯುಗ. ಇದು ಅಂತಿಂಥಾ ಸುವರ್ಣ ಯುಗವಲ್ಲ. ಇಡೀ ಜಗತ್ತೇ ಕೆಂಪೇಗೌಡರತ್ತ ಹಾಗೂ ಇವರು ನಿರ್ಮಿಸಿದ ಬೆಂಗಳೂರಿನತ್ತ ತಿರುಗಿ ನೋಡುವಂಥಾ ಮಹದದ್ಭುತ...!

ರಾಜಧಾನಿ ಹಂಪೆಯ ಬೀದಿ ಬೀದಿಗಳಲ್ಲಿ ಮುತ್ತು–ರತ್ನಗಳನ್ನು, ವಜ್ರ–ವೈಢೂರ್ಯಗಳನ್ನು ಬಳ್ಳಗಳಲ್ಲಿ ಅಳೆದು–ಸುರಿದು ಮಾರುತ್ತಿದ್ದ ಮಹಾ ಸಿರಿವಂತಿಕೆಯ ವಿಜಯನಗರ ಸಾಮ್ರಾಜ್ಯದ ವೈಭವದಲ್ಲಿ ಸಾಮಂತರಾಗಿದ್ದ ಕೆಂಪೇಗೌಡರ ವಂಶಸ್ಥರದ್ದೂ ಸಿಂಹಪಾಲಿತ್ತು. ಹಾಗಾಗಿ, ವಿಜಯನಗರ ಅರಸರಿಗೆ ಅದರಲ್ಲೂ ವಿಶೇಷವಾಗಿ ಕೃಷ್ಣದೇವರಾಯನಿಗೆ ಇವರ ಮೇಲೆ ಹೆಚ್ಚಿನ ಒಲವಿತ್ತು. ಚಿಕ್ಕ ವಯಸ್ಸಿನಲ್ಲೇ ಕೆಂಪೇಗೌಡರಿಗೆ ಕೃಷ್ಣದೇವರಾಯರ ಒಡನಾಟ ಬೆಸೆದಿತ್ತು.

ಕೃಷ್ಣದೇವರಾಯ 1529ರಲ್ಲಿ ನಿಧನರಾದಾಗ ಅವರ ಸಹೋದರ ಅಚ್ಯುತರಾಯ ಅಧಿಕಾರಕ್ಕೆ ಬರುತ್ತಾರೆ. ಬೆಂಗಳೂರು ನಿರ್ಮಾಣಕ್ಕೆ 50 ಸಾವಿರ ಚಿನ್ನದ ವರಹಗಳನ್ನು ನೀಡುವುದರ ಜೊತೆಗೆ 30 ಸಾವಿರ ಪಗೋಡಗಳ ಉತ್ಪನ್ನ ಬರುವ ಹಳೆ ಬೆಂಗಳೂರು, ಬೇಗೂರು, ವರ್ತೂರು, ಹಲಸೂರು, ಜಿಗಣಿ, ತಲಘಟ್ಟಪುರ, ಕೆಂಗೇರಿ, ಕುಂಬಳಗೋಡು, ಹೆಸರಘಟ್ಟ, ಕಾವಳ್ಳಿ(ಈಗಿನ ಕನ್ನಲ್ಲಿ), ಚಿಕ್ಕಬಾಣಾವರ ಇತ್ಯಾದಿ 12 ಹೋಬಳಿಗಳನ್ನು ಕೆಂಪೇಗೌಡರಿಗೆ ದಾನವಾಗಿ ಬಿಟ್ಟು ಕೊಡುತ್ತಾರೆ. ವೈಜ್ಞಾನಿಕ ಪ್ರಜ್ಞೆಯ ಪ್ರಖರ ವಿಚಾರವಾದಿಯಾಗಿದ್ದ ಕೆಂಪೇಗೌಡರು ಯಾವುದೇ ಮೂಢನಂಬಿಕೆಗಳಿಗೆ ಒಳಗಾಗದೆ ಪುರೋಹಿತರ ಅಣತಿಯಂತೆ ಯಾವುದೇ ಶಾಸ್ತ್ರ, ಘಳಿಗೆ ನೋಡದೆ ರೈತನೊಬ್ಬನಿಂದ ನೇಗಿಲಿನಿಂದ ಗೆರೆ ಎಳೆಸುವ ಮೂಲಕ ತಮ್ಮ ಮಹದಾಕಾಂಕ್ಷೆಯ ಬೆಂಗಳೂರು ನಿರ್ಮಾಣವನ್ನು ಆರಂಭಿಸಿದ್ದರು.

ಹಾಗೆಯೇ ರೈತ ಸಮುದಾಯದಿಂದ ಬಂದವರಾದ ಇವರು ಬಸವನನ್ನು ರಾಜಮುದ್ರೆಯಾಗಿ ಸ್ವೀಕರಿಸಿದ್ದರು. ಇದರ ದ್ಯೋತಕವಾಗಿ ಬೆಂಗಳೂರು ಕೋಟೆಯ ದಕ್ಷಿಣ ಭಾಗದ ಗುಡ್ಡವೊಂದರ ಮೇಲೆ ಬೃಹತ್ ಬಸವ ವಿಗ್ರಹವನ್ನು ನಿರ್ಮಿಸಿದ್ದರು. ನವಬೆಂಗಳೂರಿಗೆ 1537ರಲ್ಲಿ ಅಡಿಗಲ್ಲು ಹಾಕಿ ನಗರದ ನಾಲ್ಕು ದಿಕ್ಕುಗಳಿಗೂ ನಾಲ್ಕು ದ್ವಾರಗಳನ್ನು ನಿರ್ಮಿಸಿ ಅವುಗಳನ್ನು ಹಲಸೂರು ಹೆಬ್ಬಾಗಿಲು, ಕೆಂಗೇರಿ ಹೆಬ್ಬಾಗಿಲು, ಯಶವಂತಪುರ ಹೆಬ್ಬಾಗಿಲು, ಯಲಹಂಕ ಹೆಬ್ಬಾಗಿಲುಗಳೆಂದು ಹೆಸರಿಟ್ಟರು. ಮುಖ್ಯದ್ವಾರದ ಬಾಗಿಲು ನಿಲ್ಲದೇ ಬೀಳುತ್ತಿದ್ದಾಗ ಸೊಸೆ ಲಕ್ಷ್ಮೀದೇವಿ ಆತ್ಮಾರ್ಪಣೆ ಮಾಡಿಕೊಳ್ಳುತ್ತಾಳೆ. ನಾಡಪ್ರಭು ಕೆಂಪೇಗೌಡರ ಸೊಸೆ ನಾಡಿಗಾಗಿ ಬಲಿದಾನಗೈದ ಪರಿಣಾಮವಾಗಿ ಮುಖ್ಯದ್ವಾರದ ಬಾಗಿಲು ಭದ್ರವಾಗಿ ನಿಲ್ಲುತ್ತದೆ. ಈ ಮುಖೇನ ಲಕ್ಷ್ಮೀದೇವಿ ಬೆಂಗಳೂರು ಚರಿತ್ರೆಯ ಸುವರ್ಣ ಪುಟಗಳಲ್ಲಿ ತಾನೇ ಒಂದು ವಿಶೇಷ ಪುಟವಾಗಿ ಸೇರಿಹೋಗುತ್ತಾಳೆ.

ಮೈಸೂರಿನ ಪಿರಿಯಾಪಟ್ಟಣ, ಕಲ್ಲಹಳ್ಳಿ, ನಂಜರಾಯಪಟ್ಟಣ, ಕೊಡಗು ಮುಂತಾದ ಪ್ರಾಂತ್ಯಗಳು ಸೇರಿದಂತೆ ಉಮ್ಮತ್ತೂರಿನ ಆಡಳಿತಕ್ಕೆ ಒಳಪಟ್ಟಿದ್ದ ಶಿವನಸಮುದ್ರ ಸೀಮೆಯವರೆಗೂ ಕೆಂಪೇಗೌಡರ ಆಳ್ವಿಕೆ ಇತ್ತು. ಇದರಿಂದ ಯಲಹಂಕ ನಾಡು ದಕ್ಷಿಣದಗಡಿ ಕಾವೇರಿ ತೀರದವರೆಗೂ ವಿಸ್ತಾರಗೊಂಡಿತ್ತು. 1510ರಲ್ಲಿ ಜನಿಸಿ 1531 ರಲ್ಲಿ ಪಟ್ಟಾಭಿಷಕ್ತರಾಗಿ ಅಧಿಕಾರಕ್ಕೆ ಬಂದ ನಾಡಪ್ರಭು ಕೆಂಪೇಗೌಡರು, 1569 ರವರೆಗೆ ಸುಮಾರು 38 ವರ್ಷಗಳ ಕಾಲ ಆಳ್ವಿಕೆ ನಡೆಸಿ 1569ರಲ್ಲಿ ಇಹಲೋಕ ತ್ಯಜಿಸಿದರು. ಆದರೆ ತಮ್ಮ ಅಭೂತಪೂರ್ವ ಸಾಧನೆಗಳಿಂದ ಯಾವತ್ತೂ ಅವರು ಚಿರಂಜೀವಿಯಾಗಿರುತ್ತಾರೆ. ಕೆಂಪೇಗೌಡರೆಂದರೆ ಹಾಗೇನೇ ಅವರಿಗೆ ಎಂದಿಗೂ ಸಾವಿಲ್ಲ. ಸತ್ತು ಬದುಕಿರುವ ಅಸಾಮಾನ್ಯ ಸಾಧಕರವರು ಅಜರಾಮರರು. ಇವತ್ತು ಕರ್ನಾಟಕದ ಇತಿಹಾಸವನ್ನು ಹೇಳಬೇಕೆಂದರೆ ಕೆಂಪೇಗೌಡರ ಚರಿತ್ರೆಯನ್ನು ಹೇಳಲೇಬೇಕು ಅಷ್ಟರಮಟ್ಟಿಗೆ ಕೆಂಪೇಗೌಡ ಕರ್ನಾಟಕದ ಚರಿತ್ರೆಯೊಳಗೆ ಸುವರ್ಣ ಅಕ್ಷರಗಳಾಗಿ ಅಚ್ಚ ಹಸಿರಾಗಿ ನಾಡಿನ ಮಣ್ಣಲ್ಲಿ ಬೆರೆತು ಹೋಗಿದ್ದಾರೆ.

ಬಂಗಾರಮಕ್ಕಿ ಪೀಠಾಧಿಪತಿ ಶ್ರೀ ಮಾರುತಿ ಗುರೂಜಿಗೆ ಗುರುವಂದನೆ

ಮೈಸೂರಿನಲ್ಲಿ ಬೃಹತ್ ವೀರಾಂಜನೇಯ ಕಾರ್ಯಕ್ರಮ ಆಯೋಜನೆ ಆಶಯ



ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮಮಂದಿರದಲ್ಲಿ ಶ್ರೀ ವೀರಾಂಜನೇಯ ಮಹಾಸಂಸ್ಥಾನಂ ಹೇಮಪುರ ಮಹಾಪೀಠಂ ಬಂಗಾರಮಕ್ಕಿಯ ಪೀಠಾಧಿಪತಿಗಳಾದ ಶ್ರೀ ಮಾರುತಿ ಗುರೂಜಿ ಅವರಿಗೆ ಗುರುವಂದನೆ ಸಮರ್ಪಿಸಲಾಯಿತು.

ಮೈಸೂರು, ಜೂ.26– ನಗರದ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರ ದಲ್ಲಿ ಶ್ರೀ ವೀರಾಂಜನೇಯ ಮಹಾ ಸಂಸ್ಥಾನಂ ಹೇಮಪುರ ಮಹಾಪೀಠಂ ಬಂಗಾರ ಮಕ್ಕಿಯ ಪೀಠಾಧಿಪತಿಗಳಾದ ಶ್ರೀ ಮಾರುತಿ ಗುರೂಜಿ ಅವರಿಗೆ ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಗುರುವಂದನೆ ಸ್ವೀಕರಿಸಿದ ಶ್ರೀ ಮಾರುತಿ ಗುರೂಜಿ ಮಾತನಾಡಿ, ಶ್ರೀರಾಮನ ಆಯುಷ್ಯಕ್ಕಾಗಿ ಸೀತಾಮಾತೆ ಹಣೆಗೆ ಸಿಂಧೂರ ವಿಟ್ಟರೆ, ಅದರಿಂದ ಪ್ರೇರಿತ ನಾದ ಹನುಮಂತ ಮೈಯೆಲ್ಲಾ ಸಿಂಧೂರ ಹಚ್ಚಿ ಕೊಂಡನು. ಆದರೆ ಇಂದು ಉಸಿರಿರುವವರೆಗೂ ಪ್ರಸಿದ್ಧಿ ಅಥವಾ ಹುದ್ದೆ ಬಗ್ಗೆ ಮಾತ್ರ ಚಿಂತಿಸುತ್ತೇವೆ. ಇದರಿಂದ ಮಾನಸಿಕ ಆರೋಗ್ಯ ಹಾಳಾಗುತ್ತದೆ ನಾವೆಂದೂ ಜನ್ಮ ನೀಡಿ, ಜೀವನ ರೂಪಿಸಿದ ಗುರುಹಿರಿಯರ ಸೇವೆ ಮಾಡುವುದನ್ನು ಮರೆಯಬಾರದು ಎಂದರು.

ಶತಮಾನಗಳಿಂದ ಮೈಸೂರಿಗರು ಹೆಚ್ಚಾಗಿ ಧಾರ್ಮಿಕ ಮನೋಭಾವನೆ ಉಳ್ಳವರು. ಮನೆಮನೆಯಲ್ಲಿ ರುದ್ರ ಪಾರಾಯಣ, ಅಗ್ರಹಾರಗಳಲ್ಲಿ ರಾಮ ತಾರಕ ಹೋಮ, ಚಂಡಿಕಾ ಯಾಗ, ಸಂಸ್ಕೃತ ವೇದ ಗೋಶಾಲೆ, ಭಗವದ್ಗೀತೆ ಹನುಮಾನ ಚಾಲೀಸ, ವಿಷ್ಣು ಲಲಿತ ಸಹಸ್ರನಾಮ ಸೇರಿದಂತೆ ಸಾಕಷ್ಟು ಭಜನೆಗಳು ಹೋಮಗಳನ್ನು ನೆರವೇರಿಸುವ ಮೂಲಕ ಆರೋಗ್ಯ, ಆಯುಷ್ಯ, ನೆಮ್ಮದಿ ಪಡೆದುಕೊಂಡು ಸಾಂಸ್ಕೃತಿಕ ಕುಟುಂಬದ ನಗರಿ ಎಂದೆ ಪ್ರಖ್ಯಾತಿ ಪಡೆದಿದೆ ಆದರೆ ಯುವ ಜನಾಂಗದವರಲ್ಲಿ ಅದು ಆಸಕ್ತಿ ಸಂಪೂರ್ಣ ನಶಿಸಿ ಹೋಗುತ್ತಿದೆ ಎನ್ನುವ ಕಳವಳ ವ್ಯಕ್ತವಾಗುತ್ತಿದೆ ಎಂದು ಹೇಳಿದರು.

ವಿದ್ಯೆಯನ್ನು ಕಲಿತು ಪಂಡಿತನಾಗಿ ಪದವಿ, ಸಂಪತ್ತು, ಬಿರುದು ಪಡೆದು ಮನೆ ಮುಂದೆ ನಾಮಫಲಕ ಹಾಕಿಕೊಂಡರೆ ಸಾಲದು ನೂರಾರು ಮಂದಿಗೆ ಸಂಸ್ಕಾರ–ಸಂಸ್ಕೃತಿಯನ್ನು ಪರಿಚಯಿಸಿ ವಿದ್ಯೆ ಧಾರೆಯೆರೆಯಬೇಕು. ಬಂಗಾರಮಕ್ಕಿ ಭಕ್ತಿಯ ಮನಸ್ಸುಗಳ ಬೆಸೆಯುವ ತಪಸ್ಸಿನ ಪುಣ್ಯಸ್ಥಳವಾಗಿದೆ. ಶ್ರೀರಾಮನ ಭಕ್ತಿ ಸಂಕೇತವಾಗಿ ಧರ್ಮರಕ್ಷಣೆಗಾಗಿ ಮೈಸೂರಿನಲ್ಲಿ ಮುಂದಿನ ದಿನಗಳಲ್ಲಿ ಬೃಹತ್ ವೀರಾಂಜನೇಯ ಕಾರ್ಯಕ್ರಮವನ್ನ ಆಯೋಜಿಸಲಾಗುವುದು ಎಂದು ತಿಳಿಸಿದರು.

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಮೈಸೂರಿನಲ್ಲಿ ಮೂರು ದಿನಗಳ ಕಾಲ ಮಾರುತಿ ಗುರೂಜಿ ನೇತೃತ್ವದಲ್ಲಿ ನಡೆದ ಶ್ರೀರಾಮತಾರಕ ಹೋಮ, ಸಿಂಧೂರ ಅರ್ಚನೆ, ತ್ರಿಕಾಲ ಸಂಸ್ಥಾನ ಪೂಜೆ, ಹನುಮಾನ್ ಚಾಲೀಸ ಪಠಣ, ಭಜನಾ ಮಂಡಳಿಯಿಂದ ವೀರಾಂಜನೇಯ ಸಂಗೀತ ಕಾರ್ಯಕ್ರಮವು ಭಕ್ತರಲ್ಲಿ ಆಧ್ಯಾತ್ಮಿಕ ಶಕ್ತಿಯನ್ನ ಹೆಚ್ಚಿಸಿದೆ ಎಂದರು.

ಮೈಸೂರಿನಲ್ಲೂ ಆಧ್ಯಾತ್ಮಿಕ ಆಸಕ್ತಿಯುಳ್ಳ ಯುವತಂಡದ ಮೂಲಕ ಶ್ರೀರಾಮಮಂದಿರಗಳನ್ನು ಒಗ್ಗೂಡಿಸುವ ಚಿಂತನೆಯಿದೆ. ಆಯೋಧ್ಯೆಯಲ್ಲಿ ಬಾಲ ರಾಮನ ಪ್ರತಿಷ್ಠಾಪನೆಯಾಗಿದೆ. ಅಂತೆಯೇ ನಮ್ಮ ಪೂರ್ವಜರು ಸಂಕಲ್ಪಿಸಿದ ರಾಮರಾಜ್ಯ ಪರಿಕಲ್ಪನೆ ನೆರವೇರಬೇಕಾದರೆ ಸತ್ಯ, ಧರ್ಮಕಾರ್ಯ ಮತ್ತು ಸಮಾಜ ರಕ್ಷಣೆಯ ಮನೋಭಾವನೆ ಹೆಚ್ಚಾಗಬೇಕು. ಮುಂದಿನ ದಿನದಲ್ಲಿ ಬಂಗಾರ ಮಕ್ಕಿಗೆ ಮೈಸೂರಿನಿಂದ ಆಧ್ಯಾತ್ಮಿಕ ತಂಡವನ್ನ ಕರೆದುಕೊಂಡು ಹೋಗಲು ಮುಂದಾಗುತ್ತೇವೆ ಎಂದು ತಿಳಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಮಾರುತಿ ಗುರೂಜಿ ಅವರ ಪೂರ್ವಜರ ಆಜ್ಞೆಯಂತೆ ವೀರಾಂಜನೇಯ ಸ್ವಾಮಿಗೆ ತ್ರಿಕಾಲ ಸಂಸ್ಥಾನ ಪೂಜೆ ನೆರವೇರಿಸಿಕೊಂಡು ಬರುತ್ತಿದ್ದು, ಈ ಮೂಲಕ ಲಕ್ಷಾಂತರ ಭಕ್ತರಿಗೆ ಒಳಿತಾಗಿದೆ. ಅಂತರಾಷ್ಟ್ರೀಯ ಕ್ರಿಕೆಟ್ ಆಟಗಾರರು ಸಹ ಬಂಗಾರಮಕ್ಕಿ ಶ್ರೀಕ್ಷೇತ್ರಕ್ಕೆ ಭೇಟಿಕೊಟ್ಟು ವೀರಾಂಜನೇಯನಿಗೆ ವಿಶೇಷ ಪ್ರಾರ್ಥನೆ ಸಂಕಲ್ಪ ಸೇವೆ ಸಲ್ಲಿಸಿ ಸಾಧನೆಗೆ ಶಕ್ತಿ ಪಡೆದಿದ್ದಾರೆ ಎಂದು ಬಣ್ಣಿಸಿದರು.

ಈ ಸಂಧರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ, ಮಾಜಿ ಮೇಯರ್ ಭೈರಪ್ಪ, ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯರಾದ ಮಾವಿ ರಾಂಪ್ರಸಾದ್, ಸೌಭಾಗ್ಯ ಮೂರ್ತಿ, ಕಾಂಗ್ರೆಸ್ ಮುಖಂಡರಾದ ಜಿ.ಶ್ರೀನಾಥ್ ಬಾಬು, ಡಾ.ಲಕ್ಷ್ಮಿದೇವಿ, ಸುಜಾತ ರಾವ್, ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಜೋಗಿ ಮಂಜು, ಮನು, ಪ್ರದೀಪ್ ಗೌಡ, ಶ್ರೀನಿವಾಸ್, ವಿಕಾಸ್ ಶಾಸ್ತ್ರಿ, ರಂಗನಾಥ್, ಕೃಷ್ಣ, ಕಡಕೊಳ ಜಗದೀಶ್, ಜಿ.ರಾಘವೇಂದ್ರ ಟಿ.ಎಸ್. ಅರುಣ್, ದಿಲೀಪ್, ವಿಜಯಕುಮಾರ್, ಮಂಜುನಾಥ್ ಲತಾ, ವಿಶ್ವನಾಥ್, ಭಾಗ್ಯಶ್ರೀ, ಪ್ರಶಾಂತ್, ಮುಳ್ಳೂರು ಸುರೇಶ್, ಜಯಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಮಲ್ಮ ಕುಂದ್ ವ್ಯಾಪ್ತಿಯಲ್ಲಿ ಯಾವುದೇ ಕೇಂದ್ರ ಸ್ಥಾಪನೆಗೆ ಮುಂದಾಗುವುದಿಲ್ಲ

ಮಡಿಕೇರಿ,ಜೂ.26–ನೆಲಜಿಯ ಮಲ್ಮ ಕುಂದ್(ಬೆಟ್ಟ) ವ್ಯಾಪ್ತಿಯಲ್ಲಿ ಖರೀದಿಸಿರುವ ಜಾಗದಲ್ಲಿನ ಎಲ್ಲಾ ನಿರ್ಮಾಣ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಭವಿಷ್ಯದಲ್ಲಿ ಕೊಡಗಿನಲ್ಲಿ ಯಾವುದೇ ಕೇಂದ್ರಗಳ ಸ್ಥಾಪನೆಗೆ ಮುಂದಾಗುವುದಿಲ್ಲ ಎಂದು ಪ್ರಸಿದ್ಧ ಆಧ್ಯಾತ್ಮಕ ಗುರು ಶ್ರೀ ಸ್ಪಷ್ಟಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸುದ್ದಿಯಾಗಿರುವ ಮಲ್ಮ ಬೆಟ್ಟ ಪ್ರದೇಶದಲ್ಲಿ ಹೊರ ಭಾಗದ ಮಂದಿ ಜಾಗ ಖರೀದಿಸಿ, ವಿವಿಧ ಚಟುವಟಿಕೆಗಳನ್ನು ನಡೆಸುವ ಮೂಲಕ ಸ್ಥಳೀಯರ ಧಾರ್ಮಿಕ ಭಾವನೆಗಳಿಗೆ ಕುಂದುಂಟು ಮಾಡಿದ್ದಾರೆ ಎಂಬ ಆರೋಪಗಳಿಂದ ಅಕ್ಷರಶಃ ಬೇಸರವಾಗಿದೆ. ತಾನು ಖರೀದಿಸಿರುವ ಜಾಗದಲ್ಲಿನ ಉದ್ದೇಶಿತ ಎಲ್ಲಾ ಕಾಮಗಾರಿ, ಚಟುವಟಿಕೆಗಳನ್ನು ಸ್ಥಗಿತಗೊಳಿಸಿರುವುದಾಗಿ ಸ್ಪಷ್ಟಪಡಿಸಿದರು.


ಪ್ರಸಿದ್ಧ ಆಧ್ಯಾತ್ಮಕ ಗುರು ಶ್ರೀ ಶುಕ್ರವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ನೆಲಜಿಯ ಮಲ್ಮ ಕುಂದ್‌ನಿಂದ ಸುಮಾರು 2.50 ಕಿ.ಮೀ. ಕೆಳ ಭಾಗದಲ್ಲಿನ 58.90 ಎಕರೆ ಜಾಗವನ್ನು ಏ.4ರಂದು 6.25 ಕೋಟಿ ರೂ.ಗಳನ್ನು ನೀಡಿ ಖರೀದಿಸಿದ್ದೆ. ಈ ಜಾಗದ ಸುಮಾರು 10 ಎಕರೆ ಪ್ರದೇಶವನ್ನು ಕಾನೂನಿನಂತೆ ಭೂ ಪರಿವರ್ತನೆ ಮಾಡಿಕೊಳ್ಳುವ ಕಾರ್ಯ ನಡೆಯುತ್ತಿತ್ತು. ಉದ್ದೇಶಿತ ಜಾಗದಲ್ಲಿ ಧ್ಯಾನ ಕೇಂದ್ರ, ಗೋ ಶಾಲೆ, ಸಂಸ್ಕೃತ ತರಗತಿಗಳನ್ನು ತೆರೆಯುವ ಉದ್ದೇಶವನ್ನು ಹೊಂದಿದ್ದೆ. ಇದಕ್ಕೆ ಪೂರಕವಾಗಿ ಜಾಗಕ್ಕೆ ತೆರಳಲು ಇದ್ದ ಸಣ್ಣ ರಸ್ತೆಯನ್ನು ವಿಸ್ತರಿ ಸುವ ಕೆಲಸ, ಅಂತರ್ಜಲ ವೃದ್ಧಿಗೆ ಪೂರಕವಾಗಿ ಕೆರೆಗಳ ನಿರ್ಮಾಣ ಮಾಡಲಾಗಿದೆ. ಆದರೆ ಇತ್ತೀಚಿನ ದಿನಗಳ ಬೆಳವಣಿಗೆಗಳು, ಗ್ರಾಮಸ್ಥರ ವಿರೋಧದ ಹಿನ್ನೆಲೆಯಲ್ಲಿ ಜಾಗದಲ್ಲಿ ನಡೆಸಲು ಉದ್ದೇಶಿಸಿದ್ದ ಎಲ್ಲಾ ಕಾರ್ಯ ಚಟುವಟಿಕೆ ಹಾಗೂ ಭೂ ಪರಿವರ್ತನೆ ಕಾರ್ಯಗಳಿಂದ ಸಂಪೂರ್ಣವಾಗಿ ಹಿಂದೆ ಸರಿದಿರುವುದಾಗಿ ತಿಳಿಸಿದರು. ಜಿಲ್ಲಾಡಳಿತ, ಪೊಲೀಸ್ ಇಲಾಖೆಗೂ ಮಾಹಿತಿ ನೀಡಿದ್ದೇನೆ ಎಂದರು

ಅನುಯಾಯಿಗಳಾದ ಬಿದ್ದಂಡ ಕುಶಾಲಪ್ಪ, ಬಿದ್ದಂಡ ಬೋಪಣ್ಣ ಇದ್ದರು.

ಜಾಗ ಮಾರಾಟಕ್ಕೆ ಸಿದ್ಧ

ಮಲ್ಮ ಕುಂದ್ ಪ್ರದೇಶದಲ್ಲಿ ತಾನು ಖರೀದಿಸಿರುವ ಜಾಗವನ್ನು ಮರಳಿ ಆಸಕ್ತ ಸ್ಥಳೀಯರಿಗೆ ಮಾರಾಟ ಮಾಡಲು ಸಿದ್ಧವಿದ್ದೇನೆ. ಜಾಗವನ್ನು ಯಾರೂ ಖರೀದಿಗೆ ಮುಂದೆ ಬಾರದಿದ್ದಲ್ಲಿ ಅಂತಿಮವಾಗಿ ಜಾಗವನ್ನು ಅರಣ್ಯ ಇಲಾಖೆ ವಶಕ್ಕೆ ಒಪ್ಪಿಸುವುದಾಗಿ ಸ್ಪಷ್ಟಪಡಿಸಿದರು. ಮಾತ್ರವಲ್ಲದೇ ತಮ್ಮ ಖಾಸಗಿ ತೋಟವನ್ನು ಕೂಡ ಮಾರಾಟ ಮಾಡುವುದಾಗಿ ಮಾಹಿತಿ ನೀಡಿ ದೂರ ಸರಿಯುತ್ತಿರುವುದಾಗಿ ಹೇಳಿದರು.

ಬಾಲ ಕಾರ್ಮಿಕ ಪದ್ಧತಿ ಮಗುವಿನ ಭವಿಷ್ಯವನ್ನು ಕಸಿದುಕೊಳ್ಳುವ ಅಪರಾಧ


ಕಾನೂನು ಅರಿವು ಕಾರ್ಯಕ್ರಮವನ್ನು 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್. ನಟರಾಜ್ ಉದ್ಘಾಟಿಸಿದರು.

ವಿರಾಜಪೇಟೆ: ಬಾಲ ಕಾರ್ಮಿಕ ಪದ್ಧತಿ ಎನ್ನುವುದು ಮಗುವಿನ ಭವಿಷ್ಯವನ್ನು ಕಸಿದುಕೊಳ್ಳುವ ಅಪರಾಧ. ಸಂವಿಧಾನದ ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಕಾರ್ಖಾನೆ, ಗಣಿ ಅಥವಾ ಅಪಾಯಕಾರಿ ಉದ್ಯೋಗದಲ್ಲಿ ನಿಯೋಜಿಸುವುದು ಸಂಪೂರ್ಣ ನಿಷೇಧ ಆಗಿದೆ ಎಂದು 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಸ್. ನಟರಾಜ್ ಹೇಳಿದ್ದಾರೆ.

ಇಲ್ಲಿನ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ ಕಾಯ್ದೆಗಳ ಕುರಿತು ಸಾರ್ವಜನಿಕರಲ್ಲಿ ಮತ್ತು ಮಕ್ಕಳಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದರು. ಮಕ್ಕಳಿಗೆ ನ್ಯಾಯಯುತ ಆಟ, ವಯಸ್ಸಿಗೆ ಯೋಗ್ಯ ಕೆಲಸ ಎಂಬ ಧ್ಯೇಯದೊಂದಿಗೆ ಬಾಲಕಾರ್ಮಿಕ ಪದ್ಧತಿ ಸಂಪೂರ್ಣವಾಗಿ ತಡೆಗಟ್ಟಲು ಎಲ್ಲರೂ ಕೈಜೋಡಿಸಬೇಕು ಎಂದರು. ಹಿರಿಯ ಸಿವಿಲ್ ನ್ಯಾಯಾಧೀಶ ಮಂಜುನಾಥ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಪ್ರಧಾನ ಸಿವಿಲ್ ನ್ಯಾಯಾಧೀಶ ಎ.ವಿಶ್ವನಾಥ್ ಮಾತನಾಡಿ, ಮಗುವಿನ ಕೈಯಲ್ಲಿ ಪುಸ್ತಕ ಇರಬೇಕು, ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಪೋಷಕರ ಸಹ ಕಾನೂನಿನ ಪ್ರಕಾರ ಶಿಕ್ಷಾರ್ಹರು. ಬಾಲ ಕಾರ್ಮಿಕ ಪದ್ಧತಿ ಮುಕ್ತ ಭಾರತ ಕಟ್ಟಬೇಕಾದರೆ ಶಿಕ್ಷಣವೇ ಏಕೈಕ ಅಸ್ತ್ರ. ಪ್ರತಿ ಮಗುವನ್ನು ಶಾಲೆಗೆ ಕಳುಹಿಸಿ, ಅವರ ಬಾಲ್ಯ ಉಳಿಸೋಣ ಎಂದು ಬಾಲ ಕಾರ್ಮಿಕ ಪುನರ್ವಸತಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಹಾರ ನೀಡಲಾಗುತ್ತದೆ ಎಂದರು. ಸಂಘದ ಅಧ್ಯಕ್ಷ ಸಿ.ಕೆ. ಪೂವಣ್ಣ, ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಎಂ. ಯತ್ನಟ್ಟಿ, ಕಾರ್ಮಿಕ ನಿರೀಕ್ಷಕ ಎಂ.ಸಿ. ಮಾದಪ್ಪ ಮಾತನಾಡಿದರು.

ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಮಹೇಶ್ ಕೆ.ಪಿ, ಶಿಶು ಯೋಜನಾ ಅಭಿವೃದ್ಧಿ ಅಧಿಕಾರಿ ರೀಟಾ, ಸರಕಾರಿ ಮಾದರಿ ಶಾಲೆಯ ಮುಖ್ಯೋಪಾಧ್ಯಾಯ ಪಿ.ಡಿ.ಅನ್ನಮ್ಮ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ನಿರ್ದೇಶಕ ಆರ್. ಶಿರಾಝ್ ಅಹಮ್ಮದ್, ಶಿಕ್ಷರಾದ ವಾಮನ, ದಿವ್ಯ ಉಪಸ್ಥಿತರಿದ್ದರು.

ನೀಟ್ ಹಗರಣಕ್ಕೆ ಕೇಂದ್ರ ಸರ್ಕಾರವೇ ಕಾರಣ


ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮಡಿಕೇರಿ, ಜೂ.26–ನೀಟ್ ಪರೀಕ್ಷಾ ಹಗರಣಗಳಿಗೆ ಕೇಂದ್ರ ಸರ್ಕಾರದ ಬೇಜವಾಬ್ದಾರಿ ಧೋರಣೆಗಳೇ ಪ್ರಮುಖ ಕಾರಣ. ಇದರಿಂದ ಲಕ್ಷಾಂತರ ಮಕ್ಕಳ ಬದುಕು ಹಾಳಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಆರೋಪಿಸಿದ್ದಾರೆ.

ಮಕ್ಕಳ ಭವಿಷ್ಯವನ್ನು ನಿರ್ಧರಿಸುವ ನೀಟ್ ಪರೀಕ್ಷೆಯನ್ನು ಸಮರ್ಪಕವಾಗಿ ನಡೆಸಲಾಗದ ಕೇಂದ್ರದ ವೈಫಲ್ಯತೆಗಳನ್ನು ಜನರ ಮುಂದಿಡುವ ಕಾರ್ಯವನ್ನು ಕಾಂಗ್ರೆಸ್ ದೇಶ ವ್ಯಾಪಿ ನಡೆಸುತ್ತಿದೆ. ಕಳೆದ ನೀಟ್ ಪರೀಕ್ಷೆಯಲ್ಲಿನ ಹಗರಣಗಳ ಬಳಿಕ ನೀಟ್ ಮರು ಪರೀಕ್ಷೆಯನ್ನು ಸೈನಿಕರನ್ನು ಒಳಗೊಂಡಂತೆ ದೊಡ್ಡ ಮಟ್ಟದ ಬಂದೋಬಸ್ತ್‌ನೊಂದಿಗೆ ನಡೆಸುವ ಮೂಲಕ ಅದನ್ನೇ ಸಾಧನೆ ಎಂದು ಬಿಂಬಿಸುವ ಪ್ರಯತ್ನ ಕೇಂದ್ರ ಬಿಜೆಪಿ ಸರ್ಕಾರದಿಂದ ನಡೆದಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

ಮತದಾರರ ವಿಶೇಷ ಪರಿಷ್ಕರಣೆಯಲ್ಲಿ ಪ್ರತಿಯೊಬ್ಬ ಪ್ರಜೆಯೂ ಸ್ವ-ಇಚ್ಛೆಯಿಂದ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು. ಯಾವುದೇ ಕಾರಣಕ್ಕೂ ಪರಿಷ್ಕರಣೆ ಪ್ರಕ್ರಿಯೆ ತಪ್ಪಿಸಿಕೊಂಡು ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎಂದು ಅವರು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ.ರಮೇಶ್, ಕೆಪಿಸಿಸಿ ಸದಸ್ಯ ಹೆಚ್.ಎಂ. ನಂದಕುಮಾರ್, ಜಿಲ್ಲಾ ಉಪಾಧ್ಯಕ್ಷ ಸುಜು ತಿಮ್ಮಯ್ಯ, ಪ್ರಧಾನ ಕಾರ್ಯದರ್ಶಿ ಎಸ್.ಐ.ಮುನೀರ್ ಅಹಮದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಂಸ ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳ ಗುಣಮಟ್ಟದ ಶಿಕ್ಷಣ, ಆಡಳಿತಾತ್ಮಕ ಸುಧಾರಣೆ ಬಗ್ಗೆ ವಿಸ್ತೃತ ಚರ್ಚೆ

ನಾಪೋಕ್ಲು: ರಾಜ್ಯ ಎಸ್‌ಡಿಎಂಸಿ ಸಮನ್ವಯ ಕೇಂದ್ರ ವೇದಿಕೆ ನಿಯೋಗವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್‌ರನ್ನು ಭೇಟಿ ಮಾಡಿ, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ, ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಾಣ ಹಾಗೂ ಶಿಕ್ಷಣ ಇಲಾಖೆಯಲ್ಲಿ ಆಡಳಿತಾತ್ಮಕ ಸುಧಾರಣೆಗಳನ್ನು ಕೈಗೊಳ್ಳುವ ಕುರಿತು ವಿಸ್ತೃತ ಚರ್ಚೆ ನಡೆಸಿತು.


ರಾಜ್ಯ ಎಸ್‌ಡಿಎಂಸಿ ಸಮನ್ವಯ ಕೇಂದ್ರ ವೇದಿಕೆ ನಿಯೋಗವು ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್‌ರೊಂದಿಗೆ ವಿಸ್ತೃತ ಚರ್ಚೆ ನಡೆಸಿತು.

ರಾಜ್ಯದ ಸರ್ಕಾರಿ ಶಾಲೆಗಳ ಪ್ರಸ್ತುತ ಸ್ಥಿತಿ, ಮಕ್ಕಳ ಕಲಿಕಾಮಟ್ಟ, ಶಿಕ್ಷಕರ ಮೇಲಿನ ಬೋಧಕೇತರ ಕೆಲಸಗಳ ಒತ್ತಡ, ಪೂರ್ವ ಪ್ರಾಥಮಿಕ ಶಿಕ್ಷಣ, ಶಾಲಾ ಮೂಲ ಸೌಕರ್ಯ, ದೈಹಿಕ ಶಿಕ್ಷಣ, ವೃತ್ತಿ ಶಿಕ್ಷಣ ಹಾಗೂ ಶಾಲಾ ಆಡಳಿತಕ್ಕೆ ಸಂಬಂಧಿಸಿದಂತೆ ಒಟ್ಟು 33 ಪ್ರಮುಖ ಅಂಶಗಳ ಮನವಿಯನ್ನು ಸಲ್ಲಿಸಿತು. ಮುಖ್ಯವಾಗಿ ಶಿಕ್ಷಕರನ್ನು ಬಿಎಲ್‌ಒ ಹಾಗೂ ಇತರೆ ಬೋಧಕೇತರ ಕರ್ತವ್ಯಗಳಿಂದ ಮುಕ್ತಗೊಳಿಸುವುದು, ಇಲಾಖಾ ಅಧಿಕಾರಿಗಳಿಂದ ಶಾಲಾ ಮಟ್ಟದಲ್ಲಿ ಕಲಿಕಾ ಸುಧಾರಣೆಗಳ ಪರಿಣಾಮಕಾರಿ ಮೇಲ್ವಿಚಾರಣೆ, ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ಎಸ್‌ಡಿಎಂಸಿ ಪಾತ್ರವನ್ನು ಬಲಪಡಿಸುವುದು, ಪೂರ್ವ ಪ್ರಾಥಮಿಕ ಶಿಕ್ಷಕರು ಮತ್ತು ಆಯಾಗಳಿಗೆ ನೇರವಾಗಿ ಗೌರವಧನ ಜಮಾ ಮಾಡುವುದು, ಕೆಪಿಎಸ್ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು, ದೈಹಿಕ ಶಿಕ್ಷಕರ ಕೊರತೆಯನ್ನು ನಿವಾರಿಸುವುದು ಹಾಗೂ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಪುನರಾರಂಭಿಸುವಂತೆ ಒತ್ತಾಯಿಸಲಾಯಿತು.

ಶಾಲೆಗಳಲ್ಲಿ ಸಿಸಿಟಿವಿ ಅಳವಡಿಕೆ, ಅಕ್ಷರ ದಾಸೋಹ ಯೋಜನೆಯ ಜವಾಬ್ದಾರಿಯನ್ನು ಎಸ್‌ಡಿಎಂಸಿಗೆ ನೀಡುವುದು, ಬಿಇಒ ಹಾಗೂ ಡಿಡಿಪಿಐ ಕಚೇರಿಗಳ ಆಡಳಿತಾತ್ಮಕ ಸುಧಾರಣೆ, ಎಫ್‌ಎಲ್‌ಎನ್ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನ, ಪಠ್ಯ ಪುಸ್ತಕಗಳ ಸಮಯೋಚಿತ ವಿತರಣೆ ಬಗ್ಗೆ ಗಮನ ಸೆಳೆಯಲಾಯಿತು. ಹಲವು ವರ್ಷಗಳಿಂದ ಯಶಸ್ವಿಯಾಗಿ ಆಯೋಜಿಸಲಾಗುತ್ತಿದ್ದ ಥ್ರೋಬಾಲ್, ಬಾಲ್ ಬ್ಯಾಡ್ಮಿಂಟನ್ ಹಾಗೂ ಜಂಪ್ ರೋಪ್ ಕ್ರೀಡೆಗಳನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯೂ ಮುಂದುವರೆಸಲು ಅಗತ್ಯ ನಿರ್ದೇಶನ ನೀಡುವಂತೆ ಮನವಿ ಮಾಡಲಾಯಿತು.

ರಾಜ್ಯ ಸಂಚಾಲಕ ಮೊಯ್ದಿನ್ ಕುಟ್ಟಿ, ರಾಜ್ಯ ನಿರ್ದೇಶಕ ಉಮ್ಮರ್ ಟಿಕ್ಕರ್, ಜಿ.ಎ. ಮಹಮ್ಮದ್ ಕುಂಞ, ಶರಣ ಬಸಪ್ಪ ದಾನ ಕೈ, ಸಣ್ಣೇಗೌಡ, ಆಶಾ, ಹನ್ನಿ ಏಸುದಾಸ್, ವೆಂಕಟೇಶ್ ಯಶೋಧ, ಗೀತಾ ಅತ್ತಿಬೆಲೆ, ಶರೀಫ್ ಕೆಲಿಂಜ ಉಪಸ್ಥಿತರಿದ್ದರು.

ಸರ್ಕಾರಿ ಪ್ರೌಢಶಾಲೆಯ ದಿಶಾಳಿಗೆ ರಾಜ್ಯ ಪುರಸ್ಕಾರ



ಕುಶಾಲನಗರ: ಭಾರತ್ ಸ್ಕೌಟ್ಸ್ & ಗೈಡ್ಸ್ ರಾಜ್ಯ ಸಂಸ್ಥೆ ಉಡುಪಿಯಲ್ಲಿ ಕುಶಾಲನಗರ ಎಸ್‌ಎನ್‌ಡಿ ಪ್ರತಿಭಾನ್ವಿತ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿತು.

ರಾಜ್ಯದಲ್ಲಿ ಶೇ.90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಸ್ಕೌಟ್ಸ್ & ಗೈಡ್ಸ್ ವಿದ್ಯಾರ್ಥಿಗಳಿಗೆ ನೀಡಲ್ಪಟ್ಟ ರಾಜ್ಯ ಪುರಸ್ಕಾರಕ್ಕೆ ಜಿಲ್ಲೆಯಿಂದ ಭಾಜನರಾದ ಕೂಡು ಮಂಗಳೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಬಿ.ದಿಶಾಳಿಗೆ ರಾಜ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯ ರಾಜ್ಯ ಪುರಸ್ಕಾರ ನೀಡಿ ಪ್ರಶಸ್ತಿ ಪತ್ರ ವಿತರಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿನಿ ಬಿ.ದಿಶಾ ಶೇ.95.36ರಷ್ಟು ಅಂಕಗಳಿಸಿ ಶಾಲೆಗೆ ಕೀರ್ತಿ ತಂದು ರಾಜ್ಯ ಪ್ರತಿಭಾ ಪುರಸ್ಕಾರದಲ್ಲಿ ಪ್ರಶಸ್ತಿ ಗಳಿಸಿರುವುದನ್ನು ಮುಖ್ಯೋಪಾಧ್ಯಾಯ ಟಿ.ಜಿ.ಪ್ರೇಮ ಕುಮಾರ್, ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ. ಬೇಬಿಮ್ಯಾಥ್ಯೂ ಮತ್ತು ಸ್ಥಳೀಯ ಅಧ್ಯಕ್ಷ ಡಾ ಪ್ರವೀಣ್ ದೇವರಗುಂಡ ಸೋಮಪ್ಪ, ಅಭಿನಂದಿಸಿದ್ದಾರೆ

ಕಪಿಲ ನದಿಯಲ್ಲಿ ಮುಳುಗಿ ಭಕ್ತ ಸಾವು

ನಂಜನಗೂಡು: ಇಲ್ಲಿನ ಕಪಿಲಾ ನದಿಯಲ್ಲಿ ಸ್ನಾನ ಮಾಡುವ ವೇಳೆ ಕಾಲು ಜಾರಿ ಬಿದ್ದು ಭಕ್ತರೊಬ್ಬರು ಸಾವನ್ನಪ್ಪಿರುವ ಘಟನೆ ಶುಕ್ರವಾರ ನಗರದಲ್ಲಿ ನಡೆದಿದೆ.

ಮೈಸೂರಿನ ಶಾರದಾದೇವಿ ನಗರ ನಿವಾಸಿ ಮೋಹನ್ (61) ಮೃತಪಟ್ಟವರು. ಆಟೋ ಚಾಲಕರಾಗಿದ್ದ ಮೋಹನ್ ತಮ್ಮ ಪತ್ನಿ ಮತ್ತು ಪುತ್ರನ ಜೊತೆಗೆ ಶ್ರೀಕಂಠೇಶ್ವರಸ್ವಾಮಿ ದರ್ಶನಕ್ಕೆ ಆಗಮಿಸಿದ್ದರು. ಮುಡಿ ಮಾಡಿಸಿ, ಕಪಿಲಾ ನದಿಯ ಸ್ನಾನ ಘಟ್ಟದಲ್ಲಿ ಸ್ನಾನ ಮಾಡುತ್ತಿದ್ದ ವೇಳೆ ಆಕಸ್ಮಿಕವಾಗಿ ಕಾಲು ಜಾರಿ ನದಿಗೆ ಬಿದ್ದಿದ್ದಾರೆ. ಈ ವೇಳೆ ಸ್ಥಳೀಯರು ನೀರಿನಲ್ಲಿ ಮುಳುಗುತ್ತಿದ್ದ ಮೋಹನ್ ಅವರನ್ನು ರಕ್ಷಿಸಿದರು. ಬಳಿಕ ಅಸ್ವಸ್ಥಗೊಂಡಿದ್ದ ಅವರನ್ನು ಚಿಕಿತ್ಸೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಚಿನ್ನಾಭರಣ ಕಳ್ಳತನ ಮಾಡಿದ್ದ ದಂಪತಿ ಬಂಧನ



ಬೈಲಕುಪ್ಪೆ ಜೂ.26– ಮನೆಯಲ್ಲಿ ಯಾರೂ ಇಲ್ಲದ ವೇಳೆ ಚಿನ್ನಾಭರಣ ಕಳ್ಳತನ ಮಾಡಿದ್ದ ದಂಪತಿಯನ್ನು ಬಂಧಿಸುವಲ್ಲಿ ಬೈಲಕುಪ್ಪೆ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.


ಪಿರಿಯಾಪಟ್ಟಣ ತಾಲೂಕಿನ ಆವರ್ತಿ ಗ್ರಾಮದ ನಿವಾಸಿ ಮಂಜುನಾಥ ಹಾಗೂ ಆತನ ಪತ್ನಿ ನಯನ ಬಂಧಿತ ಆರೋಪಿಗಳು.

ವಿವರ: ಆವರ್ತಿ ಗ್ರಾಮದ ನಿವಾಸಿ, ನಿವೃತ್ತ ಶಿಕ್ಷಕ ನಾಗಯ್ಯ ಮತ್ತು ಅವರ ಪತ್ನಿ ಮಂಜುಳಾ ಜೂ.13ರಂದು ಮೈಸೂರಿನ ತಮ್ಮ ಮಗಳ ಮನೆಗೆ ತೆರಳಿದ್ದರು. ಈ ವೇಳೆ ನಾಗಯ್ಯ ಅವರ ಮನೆಯಲ್ಲಿ ಬಾಡಿಗೆಯಲ್ಲಿದ್ದ ಮಂಜುನಾಥ್ ಹಾಗೂ ನಯನ ದಂಪತಿ ಮನೆಗೆ ನುಗ್ಗಿ ಸುಮಾರು 45 ಗ್ರಾಂ ಚಿನ್ನಾಭರಣ ಕಳವು ಮಾಡಿ ಮೈಸೂರಿನ ಆರ್ಟಿಕ ಗೋಲ್ಡ್ ಫೈನಾನ್ಸ್‌ಗೆ ಮಾರಾಟ ಮಾಡಿ ಬಂದ ಹಣವನ್ನು ಬಚ್ಚಿಟ್ಟಿದ್ದರು.

ಜೂ.16ರಂದು ವಾಪಸ್ ಆವರ್ತಿ ಗ್ರಾಮಕ್ಕೆ ನಾಗಯ್ಯ ದಂಪತಿ ಆಗಮಿಸಿದಾಗ ಮನೆಯ ಬೀರುವಿನಲ್ಲಿದ್ದ ಚಿನ್ನದ ಸರ, ಓಲೆ ಮತ್ತು ಉಂಗುರ ಇನ್ನಿತರ ಸುಮಾರು 45 ಗ್ರಾಂ ಚಿನ್ನಾಭರಣ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ಜೂ.21ರಂದು ಬೈಲುಕುಪ್ಪೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಡಿವೈಎಸ್ಪಿ ರವಿ, ಸಿಪಿಐ ದೀಪಕ್, ಎಸ್ಐ ರವಿಕುಮಾರ್ ಅವರ ಮಾರ್ಗದರ್ಶನದಲ್ಲಿ ಅಪರಾಧ ವಿಭಾಗದ ಎಸ್ಐ ರವಿ, ಮುದ್ದುರಾಜ್, ರುದ್ರೇಶ, ಪ್ರಸನ್ನ, ಸುರೇಶ್, ರವಿಕುಮಾರ್ ಮತ್ತು ಸುನೀತಾ ಅವರನ್ನು ಒಳಗೊಂಡ ಸಿಬ್ಬಂದಿ ತನಿಖೆ ಕೈಗೊಂಡು ನಾಗಯ್ಯ ಅವರ ಮನೆಯಲ್ಲಿ ಬಾಡಿಗೆಯಲ್ಲಿದ್ದ ಮಂಜುನಾಥ್ ಹಾಗೂ ಅವರ ಪತ್ನಿ ನಯನ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಬಳಿಕ ಪೊಲೀಸರು ಮೈಸೂರಿನ ಆರ್ಟಿಕ ಗೋಲ್ಡ್ ಫೈನಾನ್ಸ್‌ಗೆ ಮಾರಾಟ ಮಾಡಿದ್ದ 680000 ರೂ.ಗಳನ್ನು ವಶಕ್ಕೆ ಪಡೆದು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಸನ್ಮಾನ


ತಿ.ನರಸೀಪುರ ತಾಲೂಕು ಕನ್ನಡ ಸೇನೆ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಭೈರಾಪುರ ಕೆ.ರಾಜು ಅವರನ್ನು ಜಿಲ್ಲಾ ಘಟಕದಿಂದ ಸನ್ಮಾನಿಸಲಾಯಿತು. ಈ ವೇಳೆ ಜಿಲ್ಲಾಧ್ಯಕ್ಷ ಎಂ.ಮಲ್ಲೇಶ್, ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಚೇತನ್ ಕುಮಾರ್, ಕನ್ನಡ ಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಆನಂದ್, ಮುಖಂಡರಾದ ಸಿದ್ದಪ್ಪ, ಕೃಷ್ಣಪ್ಪ, ಕಿರಣ್ ಇತರರಿದ್ದರು.

ದೇಶ ಪ್ರಗತಿ ಪಥದತ್ತ ಸಾಗಲು

ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ, ಶಿಕ್ಷಣದ ಹಕ್ಕು ಅವಶ್ಯಕ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಅಭಿಪ್ರಾಯ

ನಂಜನಗೂಡು, ಜೂ.26– ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ, ಸಮಾನ ಅವಕಾಶ ಹಾಗೂ ಶಿಕ್ಷಣದ ಹಕ್ಕು ಸಿಕ್ಕಾಗ ಮಾತ್ರ ಸದೃಢ ಸಮಾಜ ನಿರ್ಮಾಣ ಸಾಧ್ಯ. ಆದ್ದರಿಂದ ದೇಶದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸ್ ಸರ್ಕಾರ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಜಾರಿಗೊಳಿಸುವ ಜೊತೆಗೆ ಗ್ಯಾರಂಟಿ ಯೋಜನೆಗಳ ಮೂಲಕ ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ತಿಳಿಸಿದರು.


ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಚಿವ ಡಾ.ಯತೀಂದ್ರ ಉದ್ಘಾಟಿಸಿದರು.

ನಗರದ ವಾಲ್ಮೀಕಿ ಭವನದಲ್ಲಿ ತಾಲೂಕು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ದೇಶದ ಪ್ರಗತಿ ಅಲ್ಲಿನ ಮಹಿಳೆಯರಿಗೆ ಸಿಕ್ಕಿರುವ ಸಮಾನ ಅವಕಾಶ, ಲಿಂಗ ಸಮಾನತೆ, ಆರ್ಥಿಕ ಸ್ವಾತಂತ್ರ್ಯ, ಸುರಕ್ಷತೆಯ ಮಾನದಂಡಗಳ ಮೇಲೆ ನಿರ್ಧಾರವಾಗಲಿದೆ. ಯಾವುದೇ ದೇಶ ಆರ್ಥಿಕ ಪ್ರಗತಿ ಸಾಧಿಸಲು ಮಹಿಳೆಯರಿಗೆ ಸಮಾನ ಅವಕಾಶ ನೀಡಬೇಕಾಗುತ್ತದೆ. ಭಾರತದಲ್ಲಿ ಬುದ್ಧ, ಬಸವಣ್ಣ ಅವರು ಪ್ರಥಮವಾಗಿ ಸ್ತ್ರೀ ಸಮಾನತೆ ಪ್ರತಿಪಾದಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನಾತ್ಮಕವಾಗಿ ಮಹಿಳೆಯರಿಗೆ ಹಕ್ಕುಗಳನ್ನು ಜಾರಿಗೊಳಿಸುವ ಮೂಲಕ ಮಹಿಳೆಯರಿಗೆ ರಕ್ಷಣೆ ಒದಗಿಸಿದ್ದಾರೆ. ಆದರೆ ಸಂವಿಧಾನ ಜಾರಿಗೊಂಡು ದಶಕಗಳೇ ಕಳೆದರೂ ಭಾರತದಲ್ಲಿ ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ ಮತ್ತು ಲೈಂಗಿಕ ದೌರ್ಜನ್ಯಗಳು ಮಹಿಳೆಯರ ಸಬಲೀಕರಣಕ್ಕೆ ದೊಡ್ಡ ತೊಡಕಾಗಿವೆ. ಬಡತನ ನಿರ್ಮೂಲನೆಗೊಂಡು ದೇಶ ಪ್ರಗತಿ ಪಥದತ್ತ ಸಾಗಬೇಕಾದರೆ ಮಹಿಳೆಯರಿಗೆ ಸಮಾನ ಅವಕಾಶ, ಆರ್ಥಿಕ ಸ್ವಾತಂತ್ರ್ಯ, ಶಿಕ್ಷಣ ನೀಡಿದಾಗ ಮಾತ್ರ ಸದೃಢ ಸಮಾಜ ನಿರ್ಮಿಸಲು ಸಾಧ್ಯ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಮೊದಲಿನಿಂದಲೂ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುತ್ತಾ ಬಂದಿದೆ. 1989ರಲ್ಲಿ ರಾಜೀವ್ ಗಾಂಧಿಯವರು ಸಂವಿಧಾನಕ್ಕೆ 73 ಮತ್ತು 74ನೇ ತಿದ್ದುಪಡಿ ತಂದು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡಿದರು. ಅಲ್ಲದೇ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಶಕ್ತಿ ತುಂಬುವ ಸಲುವಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಮಹಿಳೆಯರಿಗೆ ಆರ್ಥಿಕವಾಗಿ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಮಾತನಾಡಿ, ಮಹಿಳೆಯರಿಗೆ ಆರ್ಥಿಕ ಮತ್ತು ರಾಜಕೀಯ ಶಕ್ತಿ ತುಂಬುವ ಸಲುವಾಗಿ ಸಂವಿಧಾನದ ಆಶಯದಂತೆ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಅವುಗಳನ್ನು ಪ್ರಾಮಾಣಿಕವಾಗಿ ಜನರಿಗೆ ಮುಟ್ಟಿಸುವ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಸೇವೆ ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕೆ.ಜಿ.ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಮೃಗಾಲಯ ಪ್ರಾಧಿಕಾರ ಮಾಜಿ ಅಧ್ಯಕ್ಷ ರಂಗಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮುಖಂಡರಾದ ಹೆಚ್.ಎಸ್.ಗಿರೀಶ್, ವಿಜಯ್ ಕುಮಾರ್, ದೊರೆಸ್ವಾಮಿ ನಾಯಕ, ಅಶೋಕ್, ಲತಾ, ಶಶಿರೇಖಾ, ದಕ್ಷಿಣಮೂರ್ತಿ, ರಾಜು, ಗೋವಿಂದರಾಜು, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ಮಹೇಶ್ ಸೇರಿದಂತೆ ಹಲವರಿದ್ದರು.

ನನ್ನ ಜೀವನದ ಕಷ್ಟದ ಸಂದರ್ಭಗಳಲ್ಲಿ ತಾಯಿ ಸ್ಥಾನದಲ್ಲಿ ನಿಂತು ಧೈರ್ಯ ತುಂಬಿ, ಆಶೀರ್ವಾದ ಮಾಡಿದ ನಿಮ್ಮ ಋಣವನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಆ ಮಮತೆ ಮತ್ತು ಪ್ರೀತಿಯೇ ನನಗೆ ಸದಾ ಪ್ರೇರಣೆಯಾಗಿದೆ. ಅಲ್ಲದೆ ಗ್ರಾಮೀಣ ಭಾಗದ ಪ್ರತಿಯೊಂದು ಅಂಗನವಾಡಿ ಕೇಂದ್ರದಲ್ಲೂ ಪುಟ್ಟ ಮಕ್ಕಳ ಆರೋಗ್ಯ, ಪೋಷಣೆ ಹಾಗೂ ಭವಿಷ್ಯದ ಬಗ್ಗೆ ತಾಯಿಯಂತೆ ಕಾಳಜಿಯಿಂದ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಮುದಾಯದ ಆರೋಗ್ಯಕ್ಕೆ ಶ್ರಮಿಸುತ್ತಿರುವ ಆಶಾ ಕಾರ್ಯಕರ್ತೆಯರ ಪ್ರಾಮಾಣಿಕ ಸೇವೆಗೆ ಗೌರವ ಸಮರ್ಪಿಸುವ ಸಲುವಾಗಿ ಕ್ಷೇತ್ರದಲ್ಲಿ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಏರ್ಪಡಿಸಲಾಗಿದೆ. ಮಹಿಳೆಯರ ಶಕ್ತಿ ಸಮಾಜದ ಪ್ರಗತಿಗೆ ಆಧಾರವಾಗಿದ್ದು, ಪ್ರತಿಯೊಬ್ಬ ಮಹಿಳೆ ಆತ್ಮವಿಶ್ವಾಸದಿಂದ ಮುನ್ನಡೆಯಲು ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು.

–ದರ್ಶನ್ ಧ್ರುವನಾರಾಯಣ್, ಶಾಸಕ.

ಭೋವಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಸಹಕರಿಸುವೆ

ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ


ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.


ಹುಣಸೂರು, ಜೂ.26– ತಾಲೂಕು ಭೋವಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಶಾಸಕ ಜಿ.ಡಿ.ಹರೀಶ್ ಗೌಡ ಭರವಸೆ ನೀಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಹುಣಸೂರು ತಾಲೂಕು ಭೋವಿ ಸಮಾಜ ಅಭಿವೃದ್ಧಿ ಟ್ರಸ್ಟ್ ಉದ್ಘಾಟಿಸಿ, ಟ್ರಸ್ಟ್ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಿ ಮಾತನಾಡಿದ ಅವರು, ತಾಲೂಕು ಭೋವಿ ಸಮಾಜ ಅಭಿವೃದ್ಧಿ ಟ್ರಸ್ಟ್ ಆರಂಭವಾಗಿದ್ದು, ಇದರ ಅಭಿವೃದ್ಧಿಗೆ ಶಾಸಕನಾಗಿ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ. ಟ್ರಸ್ಟ್‌ನ ಪದಾಧಿಕಾರಿಗಳು ಕಷ್ಟ ಪಟ್ಟು ಟ್ರಸ್ಟ್ ಆರಂಭಿಸಿದ್ದಾರೆ. ಆದ್ದರಿಂದ ಸಮುದಾಯದ ಎಲ್ಲರೂ ಕೂಡ ಒಗ್ಗಟ್ಟಿನಿಂದ ಮುನ್ನಡೆಯುವ ಮೂಲಕ ಟ್ರಸ್ಟ್ ಪ್ರಗತಿಗೆ ಮುಂದಾಗಬೇಕಿದೆ. ನಾನು ಕೂಡ ಭೋವಿ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಜಾಗವನ್ನು ನೀಡುವುದು ಸೇರಿದಂತೆ ಎಲ್ಲಾ ರೀತಿಯ ಅಗತ್ಯ ಸಹಕಾರ ನೀಡುತ್ತೇನೆ ಎಂದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಮಾಜದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತಾಲೂಕು ಭೋವಿ ಸಮಾಜ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಸಮಾರಂಭದಲ್ಲಿ ವರ್ಷ ಹರೀಶ್‌ಗೌಡ, ತಾಲೂಕು ಭೋವಿ ಸಮಾಜ ಅಭಿವೃದ್ಧಿ ಟ್ರಸ್ಟ್ ಗೌರವಾಧ್ಯಕ್ಷ ಗಣೇಶ್, ಅಧ್ಯಕ್ಷ ವಾಸು, ಉಪಾಧ್ಯಕ್ಷ ಸ್ವಾಮಿ ಭೋವಿ, ಆನಂದ್ ಸೇರಿದಂತೆ ಭೋವಿ ಸಮಾಜದ ಹಲವು ಮುಖಂಡರಿದ್ದರು.

100 ಮಿಲಿಯನ್ ಕೆಜಿ ತಂಬಾಕು ಮಾರಾಟ



ಪಿರಿಯಾಪಟ್ಟಣ: ಪ್ರಸಕ್ತ ಸಾಲಿನಲ್ಲಿ ಮೈಸೂರು ಮತ್ತು ಪಿರಿಯಾಪಟ್ಟಣ ವಿಭಾಗದ 10 ತಂಬಾಕು ಹರಾಜು ಮಾರುಕಟ್ಟೆಯಲ್ಲಿ 100 ಮಿಲಿಯನ್ ಕೆಜಿ ತಂಬಾಕು ಮಾರಾಟವಾಗಿದೆ ಎಂದು ತಂಬಾಕು ಮಂಡಳಿ ಮಾಜಿ ಸದಸ್ಯ ವಿಕ್ರಂರಾಜ್ ಗೌಡ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಬ್ರೆಜಿಲ್, ಜಿಂಬಾಬ್ವೆ ಹಾಗೂ ಆಫ್ರಿಕಾ ದೇಶಗಳಲ್ಲಿ ಉತ್ತಮ ಇಳುವರಿ ಬಂದ ಕಾರಣ ರಾಜ್ಯದ ತಂಬಾಕಿಗೆ ಬೇಡಿಕೆ ಕಡಿಮೆಯಾಗಿದೆ. ಕಳೆದ 2 ವರ್ಷಗಳಲ್ಲಿ ರಾಜ್ಯದ ತಂಬಾಕಿಗೆ ಉತ್ತಮ ದರ ದೊರೆತಿದ್ದು, ಪ್ರತಿ ಕೆಜಿಗೆ 258 ರೂ. ಸರಾಸರಿ ದರ ದೊರೆತಿದೆ ಆದರೆ ಈ ವರ್ಷದ ಹರಾಜು ಪ್ರಕ್ರಿಯೆಯಲ್ಲಿ ಬೇಡಿಕೆ ಕುಸಿದ ಕಾರಣ ಖರೀದಿದಾರರ ನಿರಾಸಕ್ತಿಯಿಂದ ತಂಬಾಕು ಮಾರಾಟ ಮಾಡಲು ಪ್ರತಿಕೂಲ ಪರಿಸ್ಥಿತಿ ನಡುವೆಯೂ, ತಂಬಾಕು ಮಂಡಳಿ ವಿಶೇಷವಾಗಿ ರಾಜ್ಯದ ಹರಾಜು ನಿರ್ದೇಶಕ ಬಿ.ಸಿ.ಶ್ರೀನಿವಾಸ್ ಅವರ ರೈತಪರ ಕಾಳಜಿಯಿಂದ ರೈತರು ಬೆಳೆದ ಸಂಪೂರ್ಣ ಹೊಗೆಸೊಪ್ಪನ್ನು ಕಂಪನಿಗಳು ಖರೀದಿಸುವಂತೆ ಶ್ರಮವಹಿಸಿದ್ದು ಬೆಳೆಗಾರರಿಗೆ ಪ್ರತಿ ಕೆಜಿ ತಂಬಾಕಿಗೆ 240 ರೂ ಸಿಗುವಂತೆ ನೋಡಿ ಕೊಂಡಿರುತ್ತಾರೆ. ಆದ್ದರಿಂದ ತಂಬಾಕು ಮಂಡಳಿ ಎಲ್ಲಾ ಹರಾಜು ಅಧೀಕ್ಷಕರಿಗೂ, ಹರಾಜು ನಿರ್ದೇಶಕರಿಗೂ ಮತ್ತು ಕೇಂದ್ರದ ವಾಣಿಜ್ಯ ಸಚಿವರ ಮನವೊಲಿಸಿ ರೈತರ ತಂಬಾಕನ್ನು ಖರೀದಿಸಲು ಸಹಕರಿಸಿದ ಸಂಸದರಾದ ಯದುವೀರ್ ಅವರಿಗೆ ವಿಕ್ರಂರಾಜ್ ಗೌಡ ಅಭಿನಂದನೆ ಸಲ್ಲಿಸಿದ್ದಾರೆ.

2026–27ನೇ ಸಾಲಿಗೆ ಮಂಡಳಿಯೂ ರಾಜ್ಯದ ರೈತರಿಗೆ 56 ಮಿಲಿಯನ್ ಕೆಜಿ ತಂಬಾಕನ್ನು ಬೆಳೆಯಲು ಗುರಿ ನಿಗದಿಪಡಿಸಿದ್ದು ರೈತರು ಕಡಿಮೆ ಪ್ರಮಾಣದಲ್ಲಿ ಹೊಗೆಸೊಪ್ಪನ್ನು ಬೆಳೆದು ಉತ್ತಮ ದರಕ್ಕೆ ಮಾರಾಟ ಮಾಡಿಕೊಳ್ಳುವಂತೆ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ 2ನೇ ಬೆಳೆಯಾಗಿ ಹೊಗೆಸೊಪ್ಪನ್ನು ಬೆಳೆಯದಂತೆ ರೈತರಲ್ಲಿ ಮನವಿ ಮಾಡಿದ್ದಾರೆ.

ಕಳ್ಳನ ಸತ್ಯವಂತರನ್ನಾಗಿ ಬಿಂಬಿಸುವ ಮೂಲಕ ಮಾಧ್ಯಮ ಕ್ಷೇತ್ರವೂ ಹಾಳಾಗುತ್ತಿದೆ

ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಕಳವಳ

ಮಂಡ್ಯ: ಕಳ್ಳನನ್ನ ಸತ್ಯವಂತರನ್ನಾಗಿ ಬಿಂಬಿಸುವ ಮೂಲಕ ಮಾಧ್ಯಮ ಕ್ಷೇತ್ರವೂ ಹಾಳಾಗುತ್ತಿದೆ, ಬಹುತೇಕ ಕ್ಷೇತ್ರಗಳ ಕಥೆಯೂ ಇದೇ ಆಗಿದೆ. ರೈತ ಸಂಘಟನೆ ಛಿದ್ರವಾಗಿದೆ. ಅಂಬೇಡ್ಕರ್ ಹೆಸರಿನಲ್ಲಿ ಹುಟ್ಟಿಕೊಂಡ ದಲಿತ ಸಂಘಟನೆಗಳು ಸಹ ಎಡ, ಬಲ, ಮಧ್ಯ ಎನ್ನುವ ಮೂಲಕ ಅಧೋಗತಿ ತಲುಪಿವೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.



ಲೇಖಕ ಲೋಕೇಶ್ ಚಂದಗಾಲು ಅವರು ಬರೆದಿರುವ ರಾಜಕೀಯ ಪರಿಚಾರಕ ಪಿ.ಎನ್.ಜವರಪ್ಪಗೌಡ ಪುಸ್ತಕವನ್ನು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಬಿಡುಗಡೆ ಮಾಡಿದರು.

ನಗರದ ಕೆವಿಎಸ್ ಭವನದಲ್ಲಿ ಕರ್ನಾಟಕ ಸಂಘದ ವತಿಯಿಂದ ಶುಕ್ರವಾರ ನಡೆದ ಪಿ.ಎನ್.ಜವರಪ್ಪಗೌಡ ಪತ್ರಿಕಾ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಲೇಖಕ ಲೋಕೇಶ್ ಚಂದಗಾಲು ರಚಿತ 'ರಾಜಕೀಯ ಪರಿಚಾರಕ ಪಿ.ಎನ್.ಜವರಪ್ಪಗೌಡ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಎಲ್ಲಾ ಸಂಘಟನೆಗಳು ನುಚ್ಚು ನೂರಾಗಿವೆ, ರೈತ ಹೋರಾಟಗಾರ ನಂಜುಂಡಸ್ವಾಮಿ ಅವರ ಚಳವಳಿಗಳಲ್ಲಿ ಮೌಲ್ಯವಿತ್ತು, ಈಗಿನ ಚಳವಳಿಗಳಿಗೆ ಅದು ಕಾಣುತ್ತಿಲ್ಲ. ರಾಷ್ಟ್ರೀಯ ಪುರುಷರ ಹಿತ ರಕ್ಷಣಾ ಸಮಿತಿ ಹುಟ್ಟಿಕೊಂಡಿದೆ ಏಕೆಂದರೆ ಪುರುಷರಿಗೂ ರಕ್ಷಣೆ ಬೇಕಿದೆ. ಹೆಣ್ಣಿನ ದೌರ್ಜನ್ಯವು ಪುರುಷರ ಮೇಲೆ ಹೆಚ್ಚುತ್ತಿರುವುದನ್ನು ನೋಡುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಸೇವೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ಪಿ.ಎನ್.ಜವರಪ್ಪಗೌಡ ಅವರನ್ನು ರಾಜಕೀಯ ಪರಿಚಾರಕ ಹೆಸರಿನಲ್ಲಿ ಕೃತಿ ಬಿಡುಗಡೆ ಮಾಡಿರುವುದು ಪುಣ್ಯದ ಕೆಲಸವಾಗಿದೆ. ನಾವು ಶಾಸಕರಿದ್ದೇವೆ. ನಾವು ಮಾಲೀಕರಂತೆ ನಡೆದುಕೊಳ್ಳುವುದನ್ನು ಬಿಟ್ಟು ಜನಸೇವಕರಾಗಿ ಇರಬೇಕೆಂಬುದನ್ನು ಜವರಪ್ಪಗೌಡ ಹೇಳಿಕೊಟ್ಟಿದ್ದಾರೆ. ಮಂಡ್ಯ ಜಿಲ್ಲೆ ಅಭಿವೃದ್ಧಿಗೆ ಶ್ರಮಿಸಿದ ಈ ಮಹನೀಯರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಮಂಡ್ಯ ಎಂದಾಕ್ಷಣ ಪ್ರಮುಖವಾಗಿ ಕೆ.ವಿ.ಶಂಕರಗೌಡ ಅವರ ಹೆಸರು ಕೇಳಿ ಬರುತ್ತದೆ. ಅದೆಷ್ಟೋ ಸಾಧಕರು ಮಂಡ್ಯದಲ್ಲಿದ್ದಾರೆ ಅವರು ಪಟ್ಟಂತಹ ಕಷ್ಟಗಳು ಹಾಗೂ ಅನುಭವಗಳ ವಿಚಾರಗಳನ್ನು ವಿದ್ಯಾರ್ಥಿಗಳ ಕೈಯ್ಯಲ್ಲಿ ಬರೆಸುವ ಮೂಲಕ ಮಂಡ್ಯ ಏನು ಎನ್ನುವುದನ್ನು ಯುವ ಸಮೂಹಕ್ಕೆ ತಲುಪುವಂತೆ ಮಾಡಬೇಕು ಎಂದು ಅಭಿಪ್ರಾಯ ಪಟ್ಟರು.

ರಾಜ್ಯದ ಅಭಿವೃದ್ಧಿ ಎಂದರೆ ಅಕ್ಷರ ಮತ್ತು ಆರೋಗ್ಯ ಉಚಿತವಾಗಿ ಸಿಗುವುದಾಗಿದೆ. ಹೈಟೆಕ್ ಆಸ್ಪತ್ರೆಗಳಲ್ಲಿ ದಲ್ಲಾಳಿಗಳು ಹುಟ್ಟಿಕೊಂಡಿದ್ದಾರೆ, ಜಮೀನು ಮಾರಾಟ ಮಾಡಿ ಚಿಕಿತ್ಸೆ ಪಡೆಯುವ ಸನ್ನಿವೇಶಕ್ಕೆ ಬಂದು ತಲುಪಿದ್ದೇವೆ, ಹೀಗಿರುವಾಗ ಜೀವನ ಹೇಗೆ ಎನ್ನುವುದನ್ನು ಜನಸಾಮಾನ್ಯರು ನೋಡಿಕೊಳ್ಳುವ ಪರಿಸ್ಥಿತಿಗೆ ಬಂದು ತಲುಪಿದ್ದೇವೆ ಎಂದು ವಿಷಾದಿಸಿದರು.

ಪಿ.ಎನ್.ಜವರಪ್ಪಗೌಡ ಪತ್ರಿಕಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಿರಿಯ ಪತ್ರಕರ್ತ ಕಾಡೇನಹಳ್ಳಿ ವೀರಣ್ಣಗೌಡ, ಎಚ್.ವಿಶ್ವನಾಥ್ ಅವರ ಕೈಯಲ್ಲಿ ಪ್ರಶಸ್ತಿ ಸ್ವೀಕರಿಸಿರುವುದು ಹೆಮ್ಮೆಯ ವಿಷಯ, ಏಕೆಂದರೆ ಇವರಿಂದ ಸಿದ್ದರಾಮಯ್ಯ ಮತ್ತು ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾರೆ, ಕರ್ನಾಟಕ ಸಂಘದಲ್ಲಿ ಜಯಪ್ರಕಾಶಗೌಡ ಅವರು ಕನ್ನಡ ಪರಿಚಾರಕರಂತೆ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ, ಎಲೆ ಮರೆಕಾಯಂತಿರುವ ಸಾಧಕರನ್ನು ಗುರುತಿಸುವ ಕೆಲಸ ಮಾಡುತ್ತಿದ್ದಾರೆ, ಜವರಪ್ಪಗೌಡ ಅವರ ಮಾರ್ಗದರ್ಶನದಲ್ಲಿ ಸಾಗೋಣ ಎಂದು ತಿಳಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಮಾತನಾಡಿ, ಎಲ್ಲರನ್ನೂ ಬೆಸೆಯ ಬೇಕಿದ್ದ ಪತ್ರಿಕೋದ್ಯಮವು ಇಂದು ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬುದನ್ನು ನಾವು ನೋಡುತಿದ್ದೇವೆ, ಶಂಕರಗೌಡ ಅವರು ಜವರಪ್ಪಗೌಡ ಅವರ ಬೆಂಬಲ ಇಲ್ಲದೇ ಹೋಗಿದ್ದರೆ ನಾನು ಸಹಕಾರ ಸಂಘ ಹಾಗೂ ಎಂಜಿನಿಯರಿಂಗ್ ಸಂಸ್ಥೆಯನ್ನು ಕಟ್ಟಲು ಸಾಧ್ಯವಾಗುತ್ತಿರಲಿಲ್ಲ, ಜೊತೆಗೆ ಎಲ್ಲಾ ಸ್ನೇಹಿತರನ್ನು ಒಟ್ಟಾಗಿ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎನ್ನುತ್ತಿದ್ದರು, ಇಂದು ಒಡೆದಾಳುವ ನೀತಿಯಿಂದ ಮಂಡ್ಯ ಅಭಿವೃದ್ಧಿಯಾಗುತ್ತಿಲ್ಲ ಎಂದರು.

ಪಿ.ಎನ್.ಜವರಪ್ಪಗೌಡ ಅವರ ಪುತ್ರ ಪಿ.ಜೆ.ಚೈತನ್ಯಕುಮಾರ್ ಭಾಗವಹಿಸಿದ್ದರು.

ವಿಧಾನಸೌಧ ಮಾಲ್ ಆಗಿ ಬದಲಾಗಿದೆ

ಮಂಡ್ಯ: ವಿಧಾನಸೌಧ ಮಾಲ್ ಆಗಿ ಬದಲಾಗಿದ್ದು, ಶಾಸಕರನ್ನೂ ಖರೀದಿಸಲೂ ಬಹುದು, ಮಾರಾಟ ಮಾಡಲೂ ಬಹುದು, ಶೇ.100 ರಷ್ಟು ಶಾಸಕರಲ್ಲಿ ಶೇ.80 ಶಾಸಕರು ರಿಯಲ್ ಎಸ್ಟೇಟ್ ಮಾಡುತ್ತಿದ್ದಾರೆ, ಇದಕ್ಕೆ ಸರ್ಕಾರ ಸಾಥ್ ನೀಡುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರೊಂದಿಗೆ ಶುಕ್ರವಾರ ಮಾತನಾಡಿ, ಕಳಬೇಡ ಕೊಲಬೇಡ ಹುಸಿಯ ನುಡಿಯಲೂ ಬೇಡ ಎಂಬುವ ಮಾತಿದೆ, ಆದರೆ ನಾವು ಅದೆಲ್ಲವನ್ನೂ ಮಾಡಿಯೇ ರಾಜಕಾರಣಕ್ಕೆ ಬಂದಿರುವುದು. ರಿಯಲ್ ಎಸ್ಟೇಟ್‌ನಲ್ಲಿ ಸಚಿವರೂ ಇರುವುದು ಬಹಳ ನೋವು ತರುತ್ತದೆ ಎಂದು ವಿಷಾದಿಸಿದರು.


ಕೆಂಗಲ್ ಹನುಮಂತಯ್ಯ ಅವರು ಜನಸೇವೆಗಾಗಿ ವಿಧಾನ ಸೌಧ ಕಟ್ಟಿಸಿದ್ದಾರೆ, ಪ್ರಸ್ತುತದಲ್ಲಿ ಅದು ದುಡ್ಡಿನ ಹಿಂದೆ ಓಡುವ ಹಾಗೆ ಮಾಡುವ ಮೂಲಕ ಅದನ್ನು ಮಾಲ್ ಆಗಿ ಪರಿವರ್ತಿಸಲಾಗಿದೆ. ಏಕೆಂದರೆ ಶಾಸಕರನ್ನು ಖರೀದಿಯೂ ಮಾಡಬಹುದು ಹಾಗೆಯೇ ಮಾರಾಟವನ್ನೂ ಮಾಡಬಹುದು, ಇದು ಸಂಸ್ಕೃತಿಯಾಗಿ ಬಿಟ್ಟಿದೆ, ವಿಧಾನಸೌಧವು ಕನ್ನಡಿಗರ ನಾಡುಗುಡಿಯಾಗಬೇಕು ಎಂದು ಒತ್ತಾಯಿಸಿದರು.

ಅಕ್ಷರ ಮತ್ತು ಆರೋಗ್ಯವನ್ನು ಉಚಿತವಾಗಿ ಕೊಡದೇ ಹೋದರೆ ಜನರಿಗೆ ಕಷ್ಟವಾಗುತ್ತದೆ. ರೋಗ ಬಂತೆಂದು ಆಸ್ಪತ್ರೆ ದಾಖಲಾದರೆ ಇರುವ ಸರ್ವೆ ನಂಬರ್ 1 ಮತ್ತು 2 ಅನ್ನೂ ಕಳೆದುಕೊಳ್ಳಬೇಕಾಗುತ್ತದೆ. ಅಂದರೆ ಚಿಕಿತ್ಸೆ ದುಬಾರಿಯಾಗಿದೆ. ಈ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಿಳೆಯರಿಗೆ ಎರಡು ಸಾವಿರ ರೂಪಾಯಿ ಕೊಟ್ಟರು, ಅದು ಬೇಕಾಗಿರಲಿಲ್ಲ ಬದಲಿಗೆ ಶಿಕ್ಷಣ, ಆರೋಗ್ಯ ಉಚಿತವಾಗಿ ನೀಡಬೇಕಿತ್ತು ಎಂದರು.

ಮುತ್ತತ್ತಿಯಲ್ಲಿ ಉಪ ಪೊಲೀಸ್ ಠಾಣೆ ತೆರೆಯಿರಿ; ಪ್ರವಾಸಿಗರ ಜೀವ ಉಳಿಸಿ

ಗೃಹ ಸಚಿವ ಪ್ರಿಯಾಂಕ್ ಖರ್ಗೆಗೆ ಪತ್ರ ಬರೆದ ಕುಮಾರಸ್ವಾಮಿ

ಮಂಡ್ಯ: ಮಂಡ್ಯ ಜಿಲ್ಲೆಯ ಪ್ರಸಿದ್ಧ ಪ್ರವಾಸಿ ಕ್ಷೇತ್ರವಾಗಿರುವ ಮುತ್ತತ್ತಿಯಲ್ಲಿರುವ ಕಾವೇರಿ ನದಿಯಲ್ಲಿ ನಿರಂತರವಾಗಿ ಪ್ರವಾಸಿಗರು ನದಿಯ ನೀರಿನ ಸುಳಿಗಳಿಗೆ ಸಿಲುಕಿ ಜೀವ ಕಳೆದುಕೊಳ್ಳುತ್ತಿರುವ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಮುತ್ತತ್ತಿಯಲ್ಲಿ ಪೊಲೀಸ್ ಉಪಠಾಣೆ ತೆರೆಯುವ ಬಗ್ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ.



ಮುತ್ತತ್ತಿಯ ಕಾವೇರಿ ನದಿ ಭಾಗದ ಪ್ರದೇಶದಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು, ಎಚ್ಚರಿಕೆಯ ಫಲಕಗಳನ್ನು ಅಳವಡಿಸಬೇಕು ಮತ್ತು ನದಿಗೆ ಇಳಿಯದಂತೆ ತಡೆಯಲು ದಂಡೆಯ ಉದ್ದಕ್ಕೂ ಮುಳ್ಳಿನ ತಂತಿ-ಬ್ಯಾರಿಕೇಡ್'ಗಳನ್ನು ಅಳವಡಿಸಲು ತುರ್ತುಕ್ರಮ ವಹಿಸಬೇಕು ಹಾಗೂ ಗ್ರಾಮದಲ್ಲಿ ಪೊಲೀಸ್ ಉಪಠಾಣೆ ತೆರೆಯುವ ಬಗ್ಗೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದಾರೆ. ನದಿಯಲ್ಲಿ ನಿಗೂಢವಾಗಿರುವ ಸುಳಿಗಳಿಗೆ ಸಿಲುಕಿ ಪ್ರವಾಸಿಗರು ಜೀವ ತೆರುತ್ತಿರುವ ಪ್ರಕರಣಗಳು ದಿನೇದಿನೆ ಹೆಚ್ಚಾಗುತ್ತಿದ್ದು, ಕಳೆದ ಐದು ತಿಂಗಳಲ್ಲಿ 11ಕ್ಕೂ ಹೆಚ್ಚು ಪ್ರವಾಸಿಗರು ಈಜಲು ಹೋಗಿ ದುರಂತ ಮರಣ ಹೊಂದಿದ್ದಾರೆ. ಕಳೆದ ಐದು ವರ್ಷಗಳಲ್ಲಿ 36ಕ್ಕೂ ಅಧಿಕ ಮಂದಿ ಬಲಿಯಾಗಿದ್ದಾರೆ ಎಂದು ಅಂಕಿ ಅಂಶಗಳು ಹೇಳುತ್ತವೆ. ಈ ಸಾವುಗಳಿಗೆ ತಡೆ ಹಾಕುವ ತುರ್ತು ಅಗತ್ಯವಿದೆ ಎಂದು ಸಚಿವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಮುತ್ತತ್ತಿ ಕ್ಷೇತ್ರವು ನಾಡಿನಲ್ಲಿ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಇಲ್ಲಿನ ಶ್ರೀ ಆಂಜನೇಯ ಸ್ವಾಮಿ ದೇವಾಲಯಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಬರುತ್ತಾರೆ. ಭಕ್ತರು ನದಿಗೆ ಇಳಿದು ಪುಣ್ಯಸ್ನಾನ ಮಾಡುತ್ತಾರೆ. ಆದರೆ ಇಲ್ಲಿ ಎಚ್ಚರಿಕೆ ಫಲಕಗಳು, ರಕ್ಷಣಾ ಸಿಬ್ಬಂದಿ ಇಲ್ಲದ ಕಾರಣ ತಮಗೆ ಅರಿವಿಲ್ಲದೆಯೇ ಜನರು ಸಾವಿನ ದವಡೆಗೆ ಸಿಲುಕುತ್ತಿದ್ದಾರೆ. ಇದು ಕಳವಳಕಾರಿ ಎಂದು ಸಚಿವರು ಗೃಹ ಸಚಿವರ ಗಮನ ಸೆಳೆದಿದ್ದಾರೆ.

ಫೈನಾನ್ಸ್ ಕಂಪನಿ ಕಿರುಕುಳ ತಾಳಲಾರದೇ ವ್ಯಕ್ತಿ ಆತ್ಮಹತ್ಯೆ



ಹಲಗೂರು: ಖಾಸಗಿ ಮೈಕ್ರೋ ಫೈನಾನ್ಸ್ ಕಂಪನಿಯ ಕಿರುಕುಳ ತಾಳಲಾರದೆ ಮನನೊಂದ ವ್ಯಕ್ತಿಯೊಬ್ಬರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುರುವಾರ ಸಂಜೆ ನಡೆದಿದೆ.

ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿಯ ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಗಡಯ್ಯನ ದೊಡ್ಡಿ ಗ್ರಾಮದ ನಿವಾಸಿ ಮಂಚಿ ತಗಡಯ್ಯ ಅವರ ಪುತ್ರ ನಾಗರಾಜ (38) ಮೃತ ವ್ಯಕ್ತಿ.

ನಾಗರಾಜ ಅವರು 10/06/2023 ರಂದು ಸೂರ್ಯೋದಯ ಮೈಕ್ರೋ ಫೈನಾನ್ಸ್ ಕಂಪನಿ ಲಿಮಿಟೆಡ್‌ನಿಂದ ರೇಷ್ಮೆ ಬೆಳೆಯ ಉದ್ದೇಶಕ್ಕಾಗಿ 5 ಲಕ್ಷ ರೂ.ಸಾಲ ಪಡೆದಿದ್ದರು. ಕಳೆದ ಎರಡು ವರ್ಷಗಳವರೆಗೆ ಅವರು ನಿಯಮಿತವಾಗಿ ಸಾಲದ ಕಂತುಗಳನ್ನು ಪಾವತಿಸಿದ್ದರು. ಆದರೆ ಇತ್ತೀಚಿನ ಸಾಲಿನಲ್ಲಿ ಸಮರ್ಪಕ ಮಳೆಯಿಲ್ಲದ ಕಾರಣ ರೇಷ್ಮೆ ಬೆಳೆ ಕೈಗೂಡದ ಹಿನ್ನೆಲೆಯಲ್ಲಿ ಕಂತುಗಳನ್ನು ಕಟ್ಟಲು ಸಾಧ್ಯವಾಗಿರಲಿಲ್ಲ.

ಈ ಹಿನ್ನೆಲೆಯಲ್ಲಿ ಕಂಪನಿಯ ಸಿಬ್ಬಂದಿ ಸಂತೋಷ ಹಾಗೂ ಮ್ಯಾನೇಜರ್ ಪ್ರಜ್ವಲ್ ಅವರು ಮನೆಗೆ ಭೇಟಿ ನೀಡಿ ಸಾಲದ ಹಣ ಪಾವತಿಸುವಂತೆ ಒತ್ತಾಯ ಮಾಡುತ್ತಿದ್ದರು ಎನ್ನಲಾಗಿದೆ. ನಾಗರಾಜ ಅವರು ಒಂದು ವಾರದ ಗಡುವು ಕೇಳಿಕೊಂಡಿದ್ದರೂ, 23/06/2026 ರಂದು ಮಂಡ್ಯ ಶಾಖೆಗೆ ತೆರಳಿ 50,000 ರೂ. ಹಣ ಪಾವತಿಸಲು ಮುಂದಾದಾಗ, ಸಂಪೂರ್ಣ ಸಾಲವನ್ನು ಕಟ್ಟಬೇಕು, ಇಲ್ಲದಿದ್ದರೆ ಮನೆ ಜಪ್ತಿ ಮಾಡಲಾಗುವುದು ಎಂದು ಹೇಳಿ ಹಣ ಸ್ವೀಕರಿಸಲು ನಿರಾಕರಿಸಿರುವುದಾಗಿ ತಿಳಿದುಬಂದಿದೆ.

ಇದರಿಂದ ಮನನೊಂದ ನಾಗರಾಜ ಅವರು ಮನೆಗೆ ಮರಳಿ ತಮ್ಮ ಜಮೀನಿನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಈ ಸಂಬಂಧ ಮೃತರ ತಂದೆ ಹಲಗೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ತಮ್ಮ ಮಗನ ಸಾವಿಗೆ ಮೈಕ್ರೋ ಫೈನಾನ್ಸ್ ಕಂಪನಿಯ ಸಿಬ್ಬಂದಿ ಕಾರಣ ಎಂದು ಆರೋಪಿಸಿದ್ದಾರೆ.

ಘಟನೆ ಕುರಿತು ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಿಎಸ್ಐ ಲೋಕೇಶ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಶವಪರೀಕ್ಷೆ ನಡೆಸಿದ ಬಳಿಕ ಹಸ್ತಾಂತರಿಸಲಾಗಿದೆ. ಪ್ರಕರಣದ ಬಗ್ಗೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಜು.1 ಕೆ.ಆರ್.ಪೇಟೆಯಲ್ಲಿ ಕೆಂಪೇಗೌಡ ಜಯಂತ್ಯೋತ್ಸವ

ಕೆ.ಆರ್.ಪೇಟೆ, ಜೂ.26– ತಾಲೂಕು ಒಕ್ಕಲಿಗರ ವೇದಿಕೆ ವತಿಯಿಂದ ಜುಲೈ 1 ರಂದು ಟಿಎಪಿಸಿಎಂಎಸ್ ಎಂ.ಕೆ.ಬೊಮ್ಮೇಗೌಡ ಸಹಕಾರ ಭವನದಲ್ಲಿ ಬೆಂಗಳೂರು ನಿರ್ಮಾತೃ ಸರ್ವಧರ್ಮ ಜನ ಪರಿಪಾಲಕರಾಗಿ ಅತ್ಯುತ್ತಮ ಆಡಳಿತ ನಡೆಸಿದ ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸರ್ವ ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ಮನವಿ ಮಾಡಿದರು.

ಪಟ್ಟಣದ ತಾಲೂಕು ಜೆಡಿಎಸ್ ಕಚೇರಿಯಲ್ಲಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳನ್ನು ಬಿಡುಗಡೆ ಮಾಡಿ ಮಾತನಾಡಿದರು. ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಡಾ.ನಿರ್ಮಲಾ ನಂದನಾಥ ಸ್ವಾಮೀಜಿ, ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಶ್ರೀ ಡಾ.ನಿಶ್ಚಲಾನಂದ ನಾಥ ಸ್ವಾಮೀಜಿ, ಕುಂಚಟಿಗ ಶ್ರೀ ಮಠದ ಡಾ.ನಂಜಾವಧೂತ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡುವರು.

ಬೈಕಿನಲ್ಲಿ ಹೋಗುತ್ತಿದ್ದ ಮಹಿಳೆಯ ಮಾಂಗಲ್ಯ ಸರ ಕಸಿದು ಪರಾರಿ

ಕೆಳಗೆ ಬಿದ್ದ ಮಹಿಳೆಗೆ ಸಣ್ಣ-ಪುಟ್ಟ ಗಾಯ

ಕಿಕ್ಕೇರಿ: ಬೈಕ್‌ನಲ್ಲಿ ಹೋಗುತ್ತಿದ್ದ ಮಹಿಳೆಯ ಮಾಂಗಲ್ಯ ಸರವನ್ನು ಸರಗಳ್ಳನೋರ್ವ ಕಸಿದು ಪರಾರಿಯಾಗಿರುವ ಘಟನೆ ಹೋಬಳಿಯ ಗೂಬೆಬೆಟ್ಟ ಕ್ರಾಸ್ ಬಳಿ ಸಂಭವಿಸಿದೆ.

ಕೋಡಿಮಾರನಹಳ್ಳಿಯ ಹರೀಶ್ ಅವರ ಪತ್ನಿ ವಿನಿತ ಮಾಂಗಲ್ಯ ಸರ ಕಳೆದುಕೊಂಡವರು. ವಿನಿತ ತಮ್ಮ ಮಾವ ಪುಟ್ಟರಾಜು ಜತೆ ಮೋಟಾರ್ ಬೈಕ್‌ನಲ್ಲಿ ಗುರುವಾರ ತಮ್ಮ ನೆಂಟರ ಊರಾದ ಹಲಸನಹಳ್ಳಿಗೆ ಗೃಹಪ್ರವೇಶಕ್ಕಾಗಿ ತೆರಳುತ್ತಿದ್ದರು. ಈ ವೇಳೆ ಹರಿಯಾಲದಮ್ಮ ಗುಡಿ ಮಾರ್ಗದಿಂದ ಓರ್ವ ಬೈಕ್ ಸವಾರ ಎದುರುಬದಿಯಿಂದ ಬಂದಿದ್ದಾನೆ. ಇವರಿಬ್ಬರನ್ನು ನೋಡಿ ಸ್ವಲ್ಪ ದೂರ ಹೋಗಿ ವಾಪಸ್ಸು ಹಿಂತಿರುಗಿ ಬೈಕ್‌ನಲ್ಲಿ ಬಂದು ಬೈಕ್ ಹಿಂಬದಿಯಲ್ಲಿ ಕುಳಿತಿದ್ದ ವಿನಿತರ ಕೊರಳಿಗೆ ಕೈಹಾಕಿ ಮಾಂಗಲ್ಯ ಸರವನ್ನು ಜೋರಾಗಿ ಎಳೆದಿದ್ದಾನೆ.

ಸರವನ್ನು ಜೋಪಾನ ಮಾಡಿಕೊಳ್ಳಲು ಹೋಗಿ ವಿನಿತ ಬೈಕ್‌ನಿಂದ ಬಿದ್ದು ಸಣ್ಣಪುಟ್ಟ ಗಾಯವಾಗಿದೆ. ಕೆಳಗೆ ಬಿದ್ದ ವಿನಿತಳ ಶುಶ್ರೂಷೆಗೆ ಮುಂದಾದ ತನ್ನ ಮಾವನಿಗೆ ಬೈಕ್ ಸವಾರ ಮಾಂಗಲ್ಯ ಸರ ಕಿತ್ತುಕೊಂಡು ಹೋಗುತ್ತಿರುವುದನ್ನು ತಿಳಿಸಿದ್ದಾಳೆ. ಕೂಡಲೇ ಈಕೆಯ ಮಾವ ಬೈಕ್‌ನ್ನು ಹಿಂಬಾಲಿಸಿದ್ದಾರೆ. ಆದರೆ ರಸ್ತೆಗೆ ಅಡ್ಡಲಾಗಿ ಕೋಳಿಮರಿ ಬರಲಾಗಿ ದುಷ್ಕರ್ಮಿಯನ್ನು ಹಿಡಿಯಲು ಕಷ್ಟವಾಗಿದೆ. ವಿಷಯ ತಿಳಿದು ಸ್ಥಳದಲ್ಲಿದ್ದವರು ಕೂಡ ಈ ಬೈಕ್ ಹಾಗೂ ವ್ಯಕ್ತಿಯ ಸುಳಿವಿಗಾಗಿ ಹುಡುಕಾಟ ನಡೆಸಿದ್ದಾರೆ.

ದುಷ್ಕರ್ಮಿಯ ಬೈಕ್‌ಗೆ ಯಾವುದೇ ನಂಬರ್ ಪ್ಲೇಟ್ ಇಲ್ಲದಿರುವುದು ಕಂಡು ಬಂದಿದೆ. ಸುಮಾರು 30ಗ್ರಾಂ ಚಿನ್ನದ ಮಾಂಗಲ್ಯ ಸರ ದುಷ್ಕರ್ಮಿ ಕಿತ್ತುಕೊಂಡು ಹೋಗಿರುವುದಾಗಿ ಕಿಕ್ಕೇರಿ ಪೊಲೀಸರಿಗೆ ದೂರು ನೀಡಲಾಗಿದೆ. ವಿನಿತ ತನ್ನ ಗಂಡನ ಜತೆ ಬೆಂಗಳೂರಿನಲ್ಲಿದ್ದು ಕೆಲವು ದಿನಗಳ ಹಿಂದೆ ಕೋಡಿಮಾರನಹಳ್ಳಿ ಗ್ರಾಮಕ್ಕೆ ಬಂದಿದ್ದು, ಹಲಸನಹಳ್ಳಿ ಗ್ರಾಮದಲ್ಲಿನ ನೆಂಟರ ಮನೆಯ ಗೃಹಪ್ರವೇಶಕ್ಕೆ ತೆರಳುತ್ತಿದ್ದರು ಎನ್ನಲಾಗಿದೆ.

ಪ್ರಕರಣವನ್ನು ಕಿಕ್ಕೇರಿ ಇನ್‌ಸ್ಪೆಕ್ಟರ್ ಎಸ್.ಎನ್. ಜಯರಾಂ ದಾಖಲಿಸಿಕೊಂಡು ಆರೋಪಿ ಪತ್ತೆಗೆ ತಂಡ ರಚಿಸಿಕೊಂಡು ಕಾರ್ಯಾಚರಣೆ ನಡೆಸಿದ್ದಾರೆ.

ನಾಳೆ ಚಾ.ನಗರ ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮ



ಆಗತಾನೆ ಜನಿಸಿದ ಮಗುವಿನಿಂದ 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ

ಚಾಮರಾಜನಗರ: ಆಗತಾನೆ ಹುಟ್ಟಿದ ಮಗುವಿನಿಂದ 5 ವರ್ಷದ ಒಳಗಿನ ಮಕ್ಕಳಿಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಡಿ ಜೂನ್ 28ರಂದು ಪೋಲಿಯೋ ಲಸಿಕೆ ನೀಡಲಾಗುತ್ತಿದ್ದು, ಇದಕ್ಕಾಗಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಅಗತ್ಯ ಸಿದ್ಧತೆ ಕೈಗೊಳ್ಳಲಾಗಿದೆ.

ಅಂದು ಬೆಳಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಪೋಲಿಯೋ ಬೂತ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಜೂನ್ 29 ರಿಂದ ಜುಲೈ 1 ರವರೆಗೆ ಮನೆ ಮನೆ ಭೇಟಿ ನೀಡಿ ಲಸಿಕೆ ಹಾಕಲಾಗುವುದು. ಈ ಕಾರ್ಯಕ್ರಮಕ್ಕೆ ಪ್ರತಿ ತಾಲೂಕಿನಲ್ಲಿ ತಹಸೀಲ್ದಾರ್ ರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದೆ. ಜಿಲ್ಲೆಯಲ್ಲಿ 66,601 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ.

> **ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು 1995ರಿಂದಲೂ ರಾಷ್ಟ್ರೀಯ ಕಾರ್ಯಕ್ರಮವಾಗಿ ನಡೆಸುತ್ತಿದ್ದು, ಆಗತಾನೆ ಹುಟ್ಟಿದ ಮಗುವಿನಿಂದ 5 ವರ್ಷದ ಎಲ್ಲಾ ಮಕ್ಕಳಿಗೂ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಬೇಕು. ತಂದೆ-ತಾಯಿ, ಪೋಷಕರು, ಚುನಾಯಿತ ಪ್ರತಿನಿಧಿಗಳು, ಧಾರ್ಮಿಕ ಮತ್ತು ಸಮುದಾಯದ ಮುಖಂಡರು, ಎಲ್ಲಾ ಇಲಾಖೆ ಅಧಿಕಾರಿಗಳು ಹಾಗೂ ಸ್ವಯಂ ಸೇವಾ ಸಂಘ ಸಂಸ್ಥೆಯ ಪದಾಧಿಕಾರಿಗಳು ಸಹಕಾರ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು.**
> –ಡಾ.ಎಸ್.ಚಿದಂಬರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ.

ತಾಲೂಕುವಾರು ಮಕ್ಕಳ ವಿವರ: ಚಾಮರಾಜನಗರ ತಾಲೂಕಿನಲ್ಲಿ 23,709, ಗುಂಡ್ಲುಪೇಟೆ ತಾಲೂಕಿನಲ್ಲಿ 13,992, ಕೊಳ್ಳೇಗಾಲ ತಾಲೂಕಿನಲ್ಲಿ 12,124, ಹನೂರು ತಾಲೂಕಿನಲ್ಲಿ 11,508 ಹಾಗೂ ಯಳಂದೂರು ತಾಲೂಕಿನಲ್ಲಿ 5,268 ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ.

640 ಪೋಲಿಯೋ ಬೂತ್ ಸ್ಥಾಪನೆ: ಜಿಲ್ಲೆಯಲ್ಲಿ 640 ಪಲ್ಸ್ ಪೋಲಿಯೋ ಬೂತ್‌ಗಳನ್ನು ತೆರೆಯಲಾಗಿದ್ದು, ಇದರಲ್ಲಿ ನಗರ ಪ್ರದೇಶಗಳಲ್ಲಿ 115 ಬೂತ್‌ಗಳು, ಗ್ರಾಮೀಣ ಪ್ರದೇಶದಲ್ಲಿ 525 ಬೂತ್‌ಗಳನ್ನು ತೆರೆಯಲಾಗಿದೆ.

ಚಾಮರಾಜನಗರ ತಾಲೂಕಿನಲ್ಲಿ 200, ಗುಂಡ್ಲುಪೇಟೆ ತಾಲೂಕಿನಲ್ಲಿ 164, ಕೊಳ್ಳೇಗಾಲ ತಾಲೂಕು 93, ಹನೂರು ತಾಲೂಕು 137 ಹಾಗೂ ಯಳಂದೂರು ತಾಲೂಕಿನಲ್ಲಿ 46 ಬೂತ್‌ಗಳನ್ನು ತೆರೆಯಲಾಗಿದೆ.

2,528 ಕಾರ್ಯಕರ್ತರ ನಿಯೋಜನೆ: ಕಾರ್ಯಕ್ರಮದ ಮೇಲ್ವಿಚಾರಣೆಗಾಗಿ ಜಿಲ್ಲೆಯಾದ್ಯಂತ 126 ಮೇಲ್ವಿಚಾರಕರನ್ನು ಹಾಗೂ 2,528 ಲಸಿಕಾ ಕಾರ್ಯಕರ್ತರನ್ನು ನಿಯೋಜಿಸಿಕೊಳ್ಳಲಾಗಿದೆ. ಒಟ್ಟು 23 ಬೂತ್‌ಗಳು ಹಾಗೂ 5 ಮೊಬೈಲ್ ಬೂತ್‌ಗಳನ್ನು ಸಹ ತೆರೆಯಲಾಗಿದೆ.

2.34 ಲಕ್ಷ ಮನೆಗಳಿಗೆ ಭೇಟಿ: ಜೂನ್ 28ರಂದು ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಎರಡನೇ ಮತ್ತು ಮೂರನೇ ದಿನ ಮನೆ ಮನೆ ಭೇಟಿ ನೀಡಿ ಲಸಿಕೆ ಹಾಕಲಾಗುತ್ತದೆ. ಪಟ್ಟಣ ಪ್ರದೇಶದಲ್ಲಿ ಎರಡನೇ, ಮೂರನೇ ದಿನ ಹಾಗೂ ನಾಲ್ಕನೇ ದಿನವು ಸಹ ಮನೆ-ಮನೆ ಭೇಟಿ ಲಸಿಕೆ ನೀಡಲಾಗುತ್ತದೆ. ಪಟ್ಟಣ ಪ್ರದೇಶದಲ್ಲಿ ಒಟ್ಟು 41,846 ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 1,92,483 ಮನೆಗಳ ಭೇಟಿ ಮಾಡಬೇಕಾಗಿದ್ದು, ಒಟ್ಟು 2,34,329 ಮನೆಗಳಿಗೆ ಭೇಟಿ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಸಿದ್ದಲಿಂಗಪುರದಲ್ಲಿ ಹುಲಿ ಸೆರೆಗೆ ಬೋನ್ ಅಳವಡಿಕೆ


ಚಾಮರಾಜನಗರ, ಜೂ.26– ತಾಲೂಕಿನ ಅಮಚವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಲಿಂಗಪುರ ಗ್ರಾಮದಲ್ಲಿ ಹುಲಿ ಸಂಚಾರದ ಆತಂಕ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಹುಲಿಯನ್ನು ಸೆರೆಹಿಡಿಯಲು ಬೋನ್ ಅಳವಡಿಸಲಾಗಿದೆ.



ಗ್ರಾಮದ ಸುತ್ತಮುತ್ತ ಹುಲಿ ಓಡಾಟ ಕಂಡುಬಂದಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಆತಂಕ ಉಂಟಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅರಣ್ಯ ಇಲಾಖೆ ಸಿಬ್ಬಂದಿ ಬೋನ್ ಅಳವಡಿಸಿ ಹುಲಿಯ ಚಲನವಲನದ ಮೇಲೆ ನಿಗಾ ವಹಿಸಿದ್ದಾರೆ.

ಗ್ರಾಮಸ್ಥರು ಅನಗತ್ಯವಾಗಿ ಅರಣ್ಯ ಪ್ರದೇಶದತ್ತ ತೆರಳದಂತೆ ಹಾಗೂ ಜಾನುವಾರುಗಳನ್ನು ಮೇಯಿಸಲು ಕೊಂಡೊಯ್ಯುವ ವೇಳೆ ಎಚ್ಚರಿಕೆ ವಹಿಸುವಂತೆ ಅರಣ್ಯ ಇಲಾಖೆ ಮನವಿ ಮಾಡಿದೆ. ಹುಲಿ ಸೆರೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪರಿಸ್ಥಿತಿಯ ಮೇಲೆ ಇಲಾಖೆ ನಿರಂತರ ನಿಗಾ ವಹಿಸಿದೆ.

ಬಂಡೀಪುರ ಬಳಿ ಹುಲಿ ಸೆರೆ



ಗುಂಡ್ಲುಪೇಟೆ, ಜೂ.26– ತಾಲೂಕಿನ ಬಂಡೀಪುರದ ಕುಂದಕೆರೆ ವಲಯದ ಕಾಡಂಚಿನ ಗ್ರಾಮಗಳಲ್ಲಿ ಜಾನುವಾರುಗಳನ್ನು ಕೊಲ್ಲುತ್ತಿದ್ದ ಹುಲಿಯನ್ನು ಅರಣ್ಯ ಇಲಾಖೆ ಸೆರೆಹಿಡಿದು ಕಾಡಿಗೆ ಬಿಟ್ಟಿದೆ.

ಕುಂದಕೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹುಲಿ ಕಾಣಿಸಿಕೊಂಡು ಜನ ಮತ್ತು ಜಾನುವಾರುಗಳಿಗೆ ಉಪಟಳ ನೀಡುತ್ತಿತ್ತು ಇದರಿಂದ ಗ್ರಾಮಸ್ಥರು ಆತಂಕಗೊಂಡಿದ್ದರು. ಅರಣ್ಯ ಇಲಾಖೆಗೆ ವಿಚಾರ ತಿಳಿಸಿ ಹುಲಿಯನ್ನು ಸೆರೆ ಹಿಡಿಯುವಂತೆ ಒತ್ತಾಯ ಮಾಡಲಾರಂಭಿಸಿದ್ದರು.

ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯವರು ಕುಂದಕೆರೆ ವಲಯದ ಕಾಡಂಚಿನ ಚಿರಕನಹಳ್ಳಿ ಗ್ರಾಮದ ಪೋತರಾಜು ಅವರ ಫಾರಂನಲ್ಲಿ ಜಾನುವಾರುಗಳನ್ನು ಕೊಲ್ಲುತ್ತಿದ್ದ ಹುಲಿ ಸೆರೆಗೆ ಬೋನು ಅಳವಡಿಸಿದ್ದರು.

ಬೋನಿನೊಳಗಿದ್ದ ಕರುವನ್ನು ತಿನ್ನಲು ಶುಕ್ರವಾರ ನಸುಕಿನಲ್ಲಿ ಬಂದ. ಹತ್ತು ವರ್ಷ ವಯಸ್ಸಿನ ಹೆಣ್ಣು ಹುಲಿ ಬೋನಿನಲ್ಲಿ ಸೆರೆಯಾಗಿದೆ.

ಸಮುದಾಯ ಭವನ ಉದ್ಘಾಟನೆ



ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು ಸಮುದಾಯ ಭವನ ಉದ್ಘಾಟಿಸಿದರು.

ಕೊಳ್ಳೇಗಾಲ: ತಾಲೂಕಿನ ಸತ್ತೇಗಾಲ ಗ್ರಾಮದಲ್ಲಿ ಶ್ರೀ ರಾಮಮಂದಿರ ಹಾಗೂ ಶ್ರೀಮತಿ ಚಂದ್ರಾವತಿ ಡಾ.ಸಿದ್ದೇಗೌಡ ಚೌಡೀಪುರ ಅವರ ಸಮುದಾಯ ಭವನವನ್ನು ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧಿಪತಿ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು ಉದ್ಘಾಟಿಸಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು ಶ್ರೀರಾಮ ವ್ಯಕ್ತಿತ್ವ, ಸೌಂದರ್ಯ, ಬದುಕು, ಅವರ ಚಿಂತನೆಗಳನ್ನು ಯುವ ಪೀಳಿಗೆ ಅರ್ಥ ಮಾಡಿಕೊಳ್ಳಬೇಕು ಯುವಕರು ಸಹಾ ರಾಮನಂತೆ ಶಕ್ತಿ, ಬುದ್ಧಿಶಾಲಿಯಾಗಬೇಕು. ಅವರ ಸಾಧನೆ ಹಾದಿಯಲ್ಲಿ ಸಾಗಬೇಕು ಎಂದರು.

ಬೆಂಗಳೂರು ಶಾಖಾ ಮಠದ ಶ್ರೀ ಶ್ರೀಸೌಮ್ಯನಾಥಸ್ವಾಮಿ ಸತ್ತೇಗಾಲ ಗ್ರಾಮದ ಹಿರಿಯರು ಶ್ರೀ ರಾಮ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಡಾ. ಚೌಡೀಪುರ ಸಿದ್ದೇಗೌಡ, ಚಂದ್ರಾವತಿ, ಪುತ್ರಿಅನುರಾಧ, ಗುರುದತ್, ಹನೂರು ಕ್ಷೇತ್ರದ ಮಾಜಿ ಶಾಸಕ ಆರ್.ನರೇಂದ್ರ, ಮಾನಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಒಕ್ಕಲಿಗರ ಸಂಘದ ಅಧ್ಯಕ್ಷ ಮಾದೇಶ್, ಪದಾಧಿಕಾರಿಗಳು, ಬೆಂಗಳೂರಿನ ರವೀಂದ್ರ, ಟ್ರಸ್ಟ್ ಕಾರ್ಯದರ್ಶಿ ಶೇಖರ್ ಮಾದೇಗೌಡ ಜಯರಾಮಗೌಡ ವೆಂಕಟಾಚಲಗೌಡ, ಶಿವಣ್ಣೇಗೌಡ್ರು, ಉದಯಕುಮಾರ್, ಎಂ.ರಾಜು, ಸಿ.ಮಹೇಶ್, ಎನ್.ವೆಂಕಟೇಶ್, ಕೆ.ಕೆ.ನಟರಾಜು ಗೌಡ, ಹ್ಯಾಂಡ್ ಪೋಸ್ಟ್ ರವೀಂದ್ರ ಇತರರು ಇದ್ದರು.

ಜಮೀನಿಗೆ ರಸ್ತೆ ಕಲ್ಪಿಸಲು ಕೋಡಿಉಗನೆ ರೈತರ ಆಗ್ರಹ

ಚಾಮರಾಜನಗರ: ತಮ್ಮ ಜಮೀನುಗಳಿಗೆ ಹೋಗಿ ಬರಲು ರಸ್ತೆ ಕಲ್ಪಿಸಿಕೊಡಬೇಕು ಎಂದು ತಾಲೂಕಿನ ಕೋಡಿಉಗನೆ ಗ್ರಾಮದ ರೈತರು ಒತ್ತಾಯಿಸಿದರು.

ಗ್ರಾಮದ ಬೇವಿನತಾಳಪುರ ರಸ್ತೆಯ ಬದಿಯಲ್ಲಿ ಬರುವ ಜಮೀನುಗಳಿಗೆ ಸೂಕ್ತ ರಸ್ತೆಯಿಲ್ಲದೆ ಜಮೀನುಗಳಿಗೆ ಕೃಷಿ ಚಟುವಟಿಕೆಗೆ, ಬೆಳೆದ ಪದಾರ್ಥಗಳನ್ನು ಮಾರುಕಟ್ಟೆಗೆ ಸಾಗಿಲು, ಗೊಬ್ಬರ ತರಲು ಟ್ರಾಕ್ಟರ್, ಎತ್ತಿನಗಾಡಿ, ಆಟೋ ಬರಲು ಕಷ್ಟವಾಗುತ್ತದೆ. ಹಾಗಾಗಿ ನಮಗೆ ಅನುಕೂಲವಾಗುವಂತೆ ಸೂಕ್ತ ರಸ್ತೆ ನಿರ್ಮಿಸಿಕೊಡಬೇಕು ಎಂದು ರೈತರು ಸರ್ಕಾರವನ್ನು ಒತ್ತಾಯಿಸಿದರು.

ಮಳೆ ಬಂದರೆ ಈ ಓಣಿಯಲ್ಲಿ ಆಳೆತ್ತರ ನೀರು ನಿಲ್ಲುತ್ತದೆ. ಚಿಕ್ಕಹೊಳೆ ಪ್ರವಾಸ ಬಂದರೆ ಸಂಪೂರ್ಣ ಮುಳುಗುತ್ತದೆ. ನಾವು ಜಮೀನು, ತೋಟದಲ್ಲಿ ಮನೆಕಟ್ಟಿಕೊಂಡು ವಾಸಮಾಡುತ್ತೇವೆ. ಒಂದು ಕಡೆ ಕಾಡು ಪ್ರಾಣಿ ಕಾಟವಿದ್ದು, ಭಯದಿಂದ ಜೀವನ ಸಾಗಿಸಬೇಕಾಗಿದೆ. ಹುಷಾರಿಲ್ಲದಿದ್ದರೆ ಒಂದು ಆಂಬುಲೆನ್ಸ್ ಬರುವಷ್ಟು ರಸ್ತೆ ಇಲ್ಲ. ಹಾಗಾಗಿ ಸೂಕ್ತ ರಸ್ತೆ ಕಲ್ಪಿಸಿಕೊಡುವಂತೆ ರೈತರಾದ ರೇಗನ್, ಮೇರಿಪುಷ್ಪಾ, ಲಕ್ಷ್ಮೀ ಆಗ್ರಹಿಸಿದರು. ಛಲವಾದಿ ಮಹಾಸಭಾ ಜಿಲ್ಲಾ ಗೌರವಾಧ್ಯಕ್ಷ ಮಹದೇವಯ್ಯ ಮಾತನಾಡಿ, ಸ್ಥಳಕ್ಕೆ ತಾ.ಪಂ.ಇಓ, ಜಿ.ಪಂ ಸಿಇಓ ಭೇಟಿ ನೀಡಿ ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಚಾಮರಾಜನಗರದಲ್ಲೂ ರಂಗಾಯಣ ಸ್ಥಾಪನೆಯಾಗಲಿ

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಒತ್ತಾಯ

ಚಾಮರಾಜನಗರ: ರಾಜ್ಯದ ವಿವಿಧ ಕಡೆ ರಂಗಾಯಣ ಇರುವಂತೆಯೇ ಜಾನಪದ ಕಲೆಗಳ ತವರೂರು ಎನಿಸಿದ ಚಾ.ನಗರದಲ್ಲೂ ರಂಗಾಯಣ ಸ್ಥಾಪಿಸಬೇಕು ಎಂದು ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಒತ್ತಾಯಿಸಿದರು.



ಚಾಮರಾಜನಗರದ ಡಾ. ರಾಜಕುಮಾರ್ ರಂಗಮಂದಿರದಲ್ಲಿ ಪ್ರದರ್ಶನಗೊಂಡ ಸ್ವಾತಂತ್ರದ ಓಟ ನಾಟಕದ ಒಂದು ಸನ್ನಿವೇಶ.

ನಗರದ ಡಾ. ರಾಜಕುಮಾರ್ ರಂಗಮಂದಿರದಲ್ಲಿ, ರಂಗಾಯಣ ಶಿವಮೊಗ್ಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಂಗವಾಹಿನಿ, ರಾಜ್ಯ ರೈತ ಸಂಘ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಚೇತನ ಕಲಾವಾಹಿನಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಬೊಳುವಾರು ಮಹಮ್ಮದ್ ಕುಂಞ್ ಅವರ ಕಾದಂಬರಿ ಆಧಾರಿತ ಸ್ವಾತಂತ್ರ್ಯದ ಓಟ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಗಡಿ ಜಿಲ್ಲೆ ಚಾಮರಾಜನಗರ ಸಾಂಸ್ಕೃತಿಕವಾಗಿ, ಜನಪದೀಯ ದೃಷ್ಟಿಯಿಂದ ಶ್ರೀಮಂತ ಜಿಲ್ಲೆ. ಇದು ವರನಟ ಡಾ. ರಾಜಕುಮಾರ್ ಅವರ ತವರು ಜಿಲ್ಲೆ. ಇಲ್ಲಿ ರಂಗ ಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರಕಬೇಕಾಗಿದೆ. ಈ ದೃಷ್ಟಿಯಿಂದ ಚಾಮರಾಜನಗರದಲ್ಲೂ ರಂಗಾಯಣ ಸ್ಥಾಪಿಸಬೇಕು ಎಂದು ಅವರು ಮನವಿ ಮಾಡಿದರು.

ರಂಗವಾಹಿನಿ ಸಂಸ್ಥೆಯ ಅಧ್ಯಕ್ಷ ಸಿ.ಎಂ. ನರಸಿಂಹಮೂರ್ತಿ ಮಾತನಾಡಿ, ಸ್ವಾತಂತ್ರ್ಯದ ಓಟ ಅತ್ಯುತ್ತಮ ನಾಟಕವಾಗಿದ್ದು, ಅದನ್ನು ಚಾಮರಾಜನಗರದಲ್ಲೂ ಪ್ರದರ್ಶಿಸುವ ಮೂಲಕ ನಮ್ಮ ರಂಗಾಸಕ್ತರಿಗೂ ನಾಟಕ ತಲುಪಿಸಬೇಕೆಂಬ ಉದ್ದೇಶ ನಮ್ಮದಾಗಿತ್ತು. ಅದಕ್ಕಾಗಿ ನಗರದಲ್ಲಿ ಈ ನಾಟಕ ಆಯೋಜಿಸಲಾಗಿದೆ. ಇಂಥ ಒಳ್ಳೆಯ ನಾಟಕವನ್ನು ನೀಡಿದ ಶಿವಮೊಗ್ಗ ರಂಗಾಯಣಕ್ಕೆ, ನಿರ್ದೇಶಕ ನಟರಾಜ್ ಹೊನ್ನವಳ್ಳಿ ಅವರಿಗೆ ಅಭಿನಂದನೆಗಳು ಎಂದರು.

ರಂಗಕರ್ಮಿ ಕೆ. ವೆಂಕಟರಾಜು, ರೈತ ಮುಖಂಡ ಹೊನ್ನೂರು ಪ್ರಕಾಶ್, ಶಿಕ್ಷಕರ ಸಂಘದ ಸಿ.ಕೆ.ರಾಮಸ್ವಾಮಿ, ಕಲೆ ನಟರಾಜು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದ ಓಟ: ಬಳಿಕ ಶಿವಮೊಗ್ಗ ರಂಗಾಯಣ ಕಲಾವಿದರು ಪ್ರಯೋಗಿಸಿದ ಮೂರೂವರೆ ಗಂಟೆ ಅವಧಿಯ ಸ್ವಾತಂತ್ರದ ಓಟ ನಾಟಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು.

ಭಾರತ ಮತ್ತು ಪಾಕಿಸ್ತಾನ ವಿಭಜನೆ ಹಿನ್ನೆಲೆಯಲ್ಲಿ ಪಾಕಿಸ್ತಾನದ ಲಾಹೋರ್‌ನಿಂದ ಭಾರತಕ್ಕೆ ಇಬ್ಬರು ಹೆಣ್ಣು ಮಕ್ಕಳೊಂದಿಗೆ ಬರುವ 'ಚಾಂದ್ ಅಲಿ'ಗೆ ಎದುರಾಗುವ ಹಲವಾರು ತೊಡಕುಗಳನ್ನು ಮೆಟ್ಟಿ ಮುತ್ತಾಪ್ಪಾಡಿ ಎಂಬ ಹಳ್ಳಿಯಲ್ಲಿ ಬದುಕು ಕಟ್ಟಿಕೊಳ್ಳುವ ಕಥನ ನಾಟಕ ವಸ್ತು.

ಲಾಹೋರ್‌ನಿಂದ ಆರಂಭವಾಗಿ ಮುತ್ತಾಪ್ಪಾಡಿಗೆ ಬಂದು ಕಡೆಗೆ ವಾಘಾ ಗಡಿವರೆಗೆ ಈ ಕಥನ ಸಾಗುತ್ತದೆ. ನಾಟಕದಲ್ಲಿ ಎಲ್ಲೂ ಕೋಮು ದಳ್ಳುರಿ ಇಲ್ಲ. ಬದಲಿಗೆ 'ಮುತ್ತಾಪ್ಪಾಡಿ' ಎಂಬ ಗ್ರಾಮದಲ್ಲಿ ಚಾಂದ್ ಆಲಿ ಬದುಕು ಕಟ್ಟಿಕೊಳ್ಳುವುದರೊಂದಿಗೆ ಸಮಾನತೆ ಹಾಗೂ ಬಹುತ್ವ ಭಾರತದ ಆಶಯವನ್ನು ನಾಟಕ ಎತ್ತಿ ತೋರಿಸುತ್ತದೆ. ಕಬೀರರ ದೋಹೆಗಳನ್ನು ನಾಟಕದಲ್ಲಿ ಬಳಸುವುದರೊಂದಿಗೆ ಸಂಗೀತವನ್ನೇ ಒಂದು ಪಾತ್ರವನ್ನಾಗಿ ನಿರ್ದೇಶಕರು ರೂಪಿಸಿದ್ದಾರೆ. ರಾಘವ ಕಮ್ಮಾರ ಅವರ ಸಂಗೀತ ಸುದೀರ್ಘ ನಾಟಕ ಎನಿಸದಂತೆ ಮಾಡುತ್ತದೆ. ಸಹನಾ ಪಿಂಜರ್ ಅವರ ವಸ್ತ್ರವಿನ್ಯಾಸದಿಂದಾಗಿ ಪಾತ್ರಗಳು 1947ರ ಸನ್ನಿವೇಶವನ್ನು ಒಡಮೂಡಿಸುತ್ತವೆ.

30ಕ್ಕೂ ಹೆಚ್ಚು ಪಾತ್ರಧಾರಿಗಳಿರುವ ಈ ನಾಟಕದಲ್ಲಿ ಬೆಳಕಿನ (ಮಂಜು ನಾರಾಯಣ್) ವಿನ್ಯಾಸದಿಂದಾಗಿ ನೂರಾರು ಪಾತ್ರಧಾರಿಗಳಿರುವಂತೆ ಭಾಸವಾಗುತ್ತದೆ. ಒಟ್ಟಾರೆ ನಾಟಕ ಪ್ರೇಕ್ಷಕರನ್ನು ಭಾವಪರವಶರನ್ನಾಗಿಸಿತು. ನಾಟಕ ಪ್ರದರ್ಶನಗಳು ಬಹಳ ಕಡಿಮೆ ಇರುವ ಚಾಮರಾಜನಗರದಂಥ ಪಟ್ಟಣಕ್ಕೆ ಇಂಥ ನಾಟಕ ಸಾಂಸ್ಕೃತಿಕ ಅವಶ್ಯಕತೆ ಎನಿಸಿತು.

ಕೌಟಿಲ್ಯ ಪಿಯು ಕಾಲೇಜಲ್ಲಿ ತಂಬಾಕು ವಿರೋಧಿ ದಿನಾಚರಣೆ



ಮೈಸೂರಿನ ಕೌಟಿಲ್ಯ ಪಿಯು ಕಾಲೇಜಿನಲ್ಲಿ ತಂಬಾಕು ವಿರೋಧಿ ದಿನವನ್ನು ಆಚರಿಸಲಾಯಿತು. ತಂಬಾಕು ಬಳಕೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಹಾಗೂ ಅದರ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ವಿದ್ಯಾರ್ಥಿಗಳು ಎರಡು ನಾಟಕಗಳನ್ನು ಪ್ರದರ್ಶಿಸಿದರು. ಕಾಲೇಜಿನ ಪ್ರಾಂಶುಪಾಲರು ಹಾಗೂ ಬೋಧಕ ಸಿಬ್ಬಂದಿ ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ‘ಪದಪಂಚಮ-ಪಂಚ ಪ್ರಕಾರ’ ಸಂಗೀತ ಗೀತ ಗಾಯನ ಕಾರ್ಯಕ್ರಮ

ಮೈಸೂರು, ಜೂ.26(ಜಿಎ)–ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದಿಂದ ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ವಿಜಯನಗರ 1ನೇ ಹಂತದ ಕನ್ನಡ ಸಾಹಿತ್ಯ ಭವನದಲ್ಲಿ ಜೂ. 28ರಂದು ಸಂಜೆ 5 ಗಂಟೆಗೆ ‘ಪದ ಪಂಚಮ- ಪಂಚ ಪ್ರಕಾರ’ ಸಂಗೀತ ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಕಾರ್ಯದರ್ಶಿ ಎನ್.ಸಂತೋಷ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಉದ್ಘಾಟಿಸುವರು. ಜಾನಪದ ಕಲಾವಿದ ಅಪ್ಪಗೆರೆ ತಿಮ್ಮರಾಜು ಅಧ್ಯಕ್ಷತೆ ವಹಿಸುವರು. ಪದ ಪಂಚಮ ಶೀರ್ಷಿಕೆಯಲ್ಲಿ ಲಕ್ಷ್ಮಿರಾಮ್ ತಂಡವು ಜಾನಪದ ಗೀತೆ, ಚಿಕ್ಕತಾಯಮ್ಮ ತಂಡದಿಂದ ಶೋಭಾನೆ ಪದ, ಪುರುಷೋತ್ತಮ್ ಕಿರಗಸೂರು ತಂಡದಿಂದ ರಂಗ ಪದ, ಸಂಜಯ್ ತಂಡದಿಂದ ತತ್ವ ಪದ, ಪಿ.ಸೋಮಶೇಖರ್ ಅವರಿಂದ ಗೀಗಿ ಪದಗಳ ಗಾಯನ ನಡೆಯಲಿದೆ. ಈ ಪ್ರಕಾರಗಳ ಉಳಿವು ಹಾಗೂ ಜನರಿಗೆ ಪರಿಚಯಿಸುವ ಉದ್ದೇಶ ಹೊಂದಿದ್ದೇವೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ತನುಮನ ಸಂಸ್ಥೆ ಕಾರ್ಯದರ್ಶಿ ಆರ್.ರೂಪಾ, ವಿಜಯನಗರ ಅಸೋಸಿಯೇಷನ್ ನಿರ್ದೇಶಕಿ ಯಮುನಾ ನಾಗರಾಜ್ ಉಪಸ್ಥಿತರಿದ್ದರು.

ಪಲ್ಸ್ ಪೋಲಿಯೊ ಲಸಿಕೆ ಹಾಕಿಸುವಂತೆ ಜಾಗೃತಿ



ನಗರ ಬಸ್ ನಿಲ್ದಾಣದಲ್ಲಿ ಪಲ್ಸ್ ಪೋಲಿಯೋ ಜಾಗೃತಿ ಮೂಡಿಸಲಾಯಿತು.

ಮೈಸೂರು, ಜೂ. 26– ಮೈಸೂರಿನ ಸಿಟಿ ಬಸ್ ನಿಲ್ದಾಣದಲ್ಲಿ ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಪಲ್ಸ್ ಪೋಲಿಯೋ ಅಭಿಯಾನದ ಪೋಸ್ಟರ್ ಪ್ರದರ್ಶಿಸಿ, ಪೋಷಕರು ತಮ್ಮ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ 2 ಜೀವ ರಕ್ಷಕ ಪೋಲಿಯೋ ಹನಿಗಳನ್ನು, ತಪ್ಪದೇ ಹಾಕಿಸುವ ಮೂಲಕ ಭಾರತವನ್ನು ಪೋಲಿಯೋ ಮುಕ್ತ ದೇಶವನ್ನಾಗಿ ಮಾಡಲು ಸಹಕರಿಸುವಂತೆ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಐದು ವರ್ಷದೊಳಗಿನ ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತರಾಗಬಾರದು. 5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕುವುದು ಅದರ ಮುಖ್ಯ ಗುರಿಯಾಗಿದೆ. ಜೂ. 28 ರಿಂದ ಜು.1ರವರೆಗೆ ಅಭಿಯಾನ ನಡೆಯಲಿದ್ದು, ತಮ್ಮ ತಮ್ಮ ಮನೆಯ ಸಮೀಪ ಇರುವ ಪೋಲಿಯೊ ಬೂತ್‌ಗಳ ಮೂಲಕ ಲಸಿಕೆ ಹಾಕುವುದು. ನಂತರದ ದಿನಗಳಲ್ಲಿ ಮನೆ-ಮನೆಗೆ ಭೇಟಿ ಅಭಿಯಾನ ನಡೆಯಲಿದೆ. ಪಾಲಕರು ಕಡ್ಡಾಯವಾಗಿ ಮಕ್ಕಳಿಗೆ ಲಸಿಕೆ ಹಾಕಿಸಬೇಕು ಎಂದು ಹೇಳಿದರು.

ಕೆಆರ್ ಬ್ಯಾಂಕ್ ಅಧ್ಯಕ್ಷರಾದ ಬಸವರಾಜ್ ಬಸಪ್ಪ, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಎಸ್ ಎನ್ ರಾಜೇಶ್, ರಾಕೇಶ್ ಇನ್ನಿತರರು ಹಾಜರಿದ್ದರು.

‘ಮೆಹಫಿಲ್ ಎ ಸೂಫಿಯಾನಾ’ ವಿಶಿಷ್ಟ ಸಂಗೀತ ಕಾರ್ಯಕ್ರಮ

ಮೈಸೂರು, ಜೂ. 26– ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ, ಸಾಂಗಡಿಗರು ಹಾಗೂ ಅಪರ್ಯಾಪ್ತ ತಂಡಗಳ ಸಹಯೋಗದಲ್ಲಿ ‘ಮೆಹಫಿಲ್ ಎ ಸೂಫಿಯಾನಾ’ ವಿಶಿಷ್ಟ ಸಂಗೀತ ಕಾರ್ಯಕ್ರಮವನ್ನು ಜೂನ್ 28 ರಂದು ಸಂಜೆ 6 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ಶಾಲಾ ಆವರಣದಲ್ಲಿರುವ ಐಐಇಟಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ.

ಸೂಫಿ ಸಂಗೀತ ಮತ್ತು ರಂಗ ಸಂಗೀತದ ಅಪರೂಪದ ಸಂಗಮವಾಗಿರುವ ಈ ಕಾರ್ಯಕ್ರಮದಲ್ಲಿ ಕಬೀರ, ಅಮೀರ್ ಖುಸ್ರೊ, ರೂಮಿ, ಶರೀಫ ಹಾಗೂ ದಾಸರ ಪದಗಳ ಆಧಾರದ ಮೇಲೆ ರೂಪುಗೊಂಡ ಹಾಡುಗಳ ಜೊತೆಗೆ ರಂಗಭೀಷ್ಮ ಬಿ.ವಿ. ಕಾರಂತರವರು ಸಂಯೋಜಿಸಿರುವ ಆಯ್ದ ರಂಗಗೀತೆಗಳನ್ನೂ ಪ್ರಸ್ತುತಪಡಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ನಂಬರ್ 9686892255 ಸಂಪರ್ಕಿಸಬಹುದು.

ಸಾಮಾಜಿಕ ಸಮಾನತೆ, ಸೋದರತ್ವದ ಸಮಾಜ ನಿರ್ಮಿಸಲು ಡಾ.ಬಿ.ಆರ್.ಅಂಬೇಡ್ಕರ್ ಶ್ರಮಿಸಿದರು

- ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಅಭಿಮತ
- ಡಾ.ಅಂಬೇಡ್ಕರ್ ಕುರಿತಾದ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಸಮಾರೋಪ

ಮೈಸೂರು, ಜೂ.26(ವಿವಿಹೆಚ್)– ಬಡವರು, ಶೋಷಿತರು, ಮಹಿಳಾ ವಿರೋಧಿ ಸಮಾಜವನ್ನು ಬದಲಾಯಿಸಿ, ಸಾಮಾಜಿಕ ಸಮಾನತೆ, ಸೋದರತ್ವದ ಸಮಾಜವನ್ನು ನಿರ್ಮಿಸಲು ಶ್ರಮಿಸಿದವರು ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಜೆ.ಸೋಮಶೇಖರ್ ತಿಳಿಸಿದರು.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಾವೇರಿ ಸಭಾಂಗಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ‘ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಮಕಾಲೀನ ಭಾರತ: ಪುನರ್ವಿಮರ್ಶೆ–ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿ’ ಕುರಿತ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಸಂವಿಧಾನ ಪೀಠಿಕೆಯಲ್ಲಿ ಭಾರತೀಯರಾದ ನಾವೆಲ್ಲಾ ಎಂಬುದಾಗಿ ಹೇಳಿದ್ದಾರೆ. ಅವರ ಹೇಳಿಕೆ ಯಾವುದೇ ಒಂದು ಸಮುದಾಯ, ಸಮಾಜ ಅಥವಾ ಸಂಘಟನೆಗೆ ಸಂಬಂಧಿಸಿಲ್ಲ ಬದಲಾಗಿ ಎಲ್ಲರಲ್ಲಿಯೂ ಸಾಮಾಜಿಕ ಬದ್ಧತೆ ಮೂಡಿ, ಅಸಮಾನತೆ ವಿರುದ್ಧದ ಧ್ವನಿಯಾಗಬೇಕೆಂಬುದು ಅವರ ಆಶಯ ಎಂದರು.



ವಿಚಾರ ಸಂಕಿರಣದಲ್ಲಿ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಮಾತನಾಡಿದರು.

ಇಡೀ ಪ್ರಪಂಚದಲ್ಲೇ ರಾಜಕೀಯ ಪ್ರಜಾಪ್ರಭುತ್ವ ಮತ್ತು ರಾಜಕೀಯ ಸಮಾನತೆ ನೀಡಿದ ಜಗತ್ತಿನ ಏಕೈಕ ರಾಷ್ಟ್ರ ಭಾರತ. ಇದರ ಮೂಲ ಕರ್ತೃ ಡಾ. ಅಂಬೇಡ್ಕರ್ ಅವರು. ಪ್ರತಿಯೊಬ್ಬ ನಾಗರಿಕನಿಗೂ ಸರ್ಕಾರಿ ನಿರ್ಧಾರಗಳಲ್ಲಿ ಸಮಾನ ಹಕ್ಕು, ಧ್ವನಿ, ಜಾತಿ, ಧರ್ಮ ಅಥವಾ ಸಂಪತ್ತಿನ ಭೇದವಿಲ್ಲದೆ ಎಲ್ಲರಿಗೂ ಸಮಾನ ಮತದಾನದ ಹಕ್ಕು ಮತ್ತು ಸರ್ಕಾರವನ್ನು ಟೀಕಿಸುವ ಸ್ವಾತಂತ್ರ್ಯವನ್ನು ಇದು ಖಾತ್ರಿಗೊಳಿಸುತ್ತದೆ ಎಂಬುದನ್ನು ಅವರು ಪ್ರಧಾನವಾಗಿ ಪ್ರತಿಪಾದಿಸಿದ್ದರು ಎಂದರು.

ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯವು ಪ್ರಜಾಪ್ರಭುತ್ವವನ್ನು ವಿಸ್ತರಿಸಲು ಇರುವ ಅಂಶಗಳು. ಅಂಬೇಡ್ಕರ್ ಅವರ ಹೋರಾಟದ ನೆಲೆಗಳು ಈ ಪ್ರಮುಖ ಅಂಶಗಳನ್ನೇ ಒಳಗೊಂಡಿತ್ತು. ದೇಶದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿ ಸಾಧಿಸಲು ಭೂಮಿ ರಾಷ್ಟ್ರೀಕರಣ, ಸಂಪತ್ತು ರಾಷ್ಟ್ರೀಕರಣ ಮಾಡಬೇಕು. ಇದಾದಲ್ಲಿ ಯಾವುದೇ ಮೀಸಲಾತಿಯ ಅವಶ್ಯಕತೆಯೂ ಇರುವುದಿಲ್ಲ ಎಂದು ಪ್ರಬಲವಾಗಿ ವಾದಿಸಿದವರು. ಅದಕ್ಕಾಗಿಯೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಆಧುನಿಕ ಪ್ರಜಾಪ್ರಭುತ್ವದ ನಿರ್ಮಾತೃ ಎಂದು ಕರೆಯುತ್ತಾರೆ ಎಂದರು.

ಇಂದಿನ ದಿನಮಾನದಲ್ಲಿ ಬಡವ ಬಡವನಾಗಿಯೇ, ಬಲ್ಲಿದ ಬಲ್ಲಿದನಾಗಿಯೇ ಮುಂದುವರಿಯುತ್ತಿದ್ದಾನೆ. ಕೋವಿಡ್ ಸಮಯದಲ್ಲಿ ಕೇವಲ 1% ಆಸ್ತಿ ಹೊಂದಿದ್ದವರು, ಈಗ ಪ್ರಪಂಚದ ಶ್ರೀಮಂತರ ಪಟ್ಟಿಯಲ್ಲಿ ಹೇಗೆ ಸ್ಥಾನ ಪಡೆದರು. ಮಹಾಮಾರಿಯ ಹೊಡೆತಕ್ಕೆ ಒಳಗಾಗಿದ್ದ ಭಾರತದಲ್ಲಿ ಇವರು ಅತೀ ಶ್ರೀಮಂತರಾಗಿ ಬೆಳೆದದ್ದಾದರೂ ಹೇಗೆ ಎಂದು ಪ್ರಶ್ನಿಸಿದರು.

ಇನ್ನು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ದೇಶದ ಮೊದಲ ರಾಜ್ಯ ಮೈಸೂರು. ಹಾಗೆಯೇ ಮೊದಲ ರಾಜ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್. ಮಿಲ್ಲರ್ ಆಯೋಗವನ್ನು ಎದುರಿಸಿ ಸಾಮಾಜಿಕ ನ್ಯಾಯವನ್ನು ಜಾರಿಗೆ ತಂದ ಶ್ರೇಯಸ್ಸು ನಾಲ್ವಡಿಯವರಿಗೆ ಸಲ್ಲುತ್ತದೆ. ಇತ್ತ ಸಾಹು ಮಹಾರಾಜರು ತುಳಿತಕ್ಕೊಳಗಾದವರಿಗೆ ಮೊದಲ ಆದ್ಯತೆ ಕೊಟ್ಟರು. ಇವು ಇಂದಿನ ಸಂವಿಧಾನಕ್ಕೆ ಆದರ್ಶವಾಯಿತು ಎಂದರು.

ಆದರೆ ಇಂದಿನ ರಾಜಕೀಯ ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ದೇಶವನ್ನೇ ಮಾರುತ್ತಿದ್ದಾರೆ. ಪ್ರಜಾಪ್ರಭುತ್ವವನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಮೂಲ ಕಾರಣ ಪ್ರಜೆಗಳೇ ಆಗಿದ್ದಾರೆ. ಎಲ್ಲಿಯವರೆಗೆ ನಾವು ಧ್ವನಿ ಎತ್ತುವುದಿಲ್ಲವೋ ಅಲ್ಲಿಯವರೆಗೆ ಸಂವಿಧಾನ, ಪ್ರಜಾಪ್ರಭುತ್ವ, ಸಮಾಜಿಕ ನ್ಯಾಯ, ಆಸ್ತಿಯ ಅಸಮಾನತೆಗೆ ಪೆಟ್ಟು ಬೀಳುತ್ತಲೇ ಇರುತ್ತದೆ ಎಂದು ತಿಳಿಸಿದರು.

ಈ ವೇಳೆ ರಿಜಿಸ್ಟ್ರಾರ್ ಪ್ರೊ.ಎಸ್.ಕೆ.ನವೀನ್ ಕುಮಾರ್, ಅಕಾಡೆಮಿಕ್ ಡೀನ್ ಡಾ.ಎಂ.ರಾಮನಾಥಂ ನಾಯ್ಡು, ಸಂಘಟನಾ ಕಾರ್ಯದರ್ಶಿ ಡಾ.ಶಿವಕುಮಾರ ಸ್ವಾಮಿ, ಸಂಚಾಲಕಿ ಡಾ.ಆರ್.ಛಾಯ ಉಪಸ್ಥಿತರಿದ್ದರು.

ಮತದಾರರ ಹಿತಕಾಯುವಲ್ಲಿ ರಾಜ್ಯ ಸರ್ಕಾರ ನಿರ್ಲಕ್ಷ್ಯ

ಎಸ್‌ಐಆರ್ ವೇಳೆ ಅರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಟ್ಟರೆ ಸಂಘ-ಸಂಸ್ಥೆಗಳೊಂದಿಗೆ ಸೇರಿ ಹೋರಾಟ

ಮೈಸೂರು, ಜೂ.26(ಜಿಎ)–ಮತದಾರರ ಪಟ್ಟಿ ಪರಿಷ್ಕರಣೆ ಎಸ್‌ಐಆರ್ ವೇಳೆ ರಾಜ್ಯ ಸರ್ಕಾರ ಮುತುವರ್ಜಿ ವಹಿಸುವ ಮೂಲಕ ಒಬ್ಬನೇ ಒಬ್ಬ ಅರ್ಹ ಮತದಾರ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ತಪ್ಪಿದಲ್ಲಿ ಇತರ ಸಂಘಟನೆಗಳೊಡಗೂಡಿ ಎಸ್‌ಡಿಪಿಐ ಪಕ್ಷ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಲಿದೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಐಆರ್ ಕುರಿತಂತೆ ಮತದಾರರ ಹಿತ ಕಾಯುವಲ್ಲಿ ರಾಜ್ಯ ಸರ್ಕಾರ ನಿರ್ಲಕ್ಷ್ಯ ಧೋರಣೆ ತಾಳಿದೆ ಎನಿಸುತ್ತಿದೆ. ಈಗಾಗಲೇ ಪಶ್ಚಿಮ ಬಂಗಾಳದಲ್ಲಿ ಎಸ್ ಐಆರ್‌ನಿಂದಾಗಿ ಲಕ್ಷಾಂತರ ಮತದಾರರು ಮತದಾನದಿಂದ ಹೊರಗುಳಿಯುವಂತಾಗಿದೆ ಎಂದರು.

ಎಐ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುವುದರಿಂದ ದೊಡ್ಡ ಸಮಸ್ಯೆಯುಂಟಾಗಲಿದೆ. ಸ್ಪೆಲ್ಲಿಂಗ್ ಲೋಪ ಮೊದಲಾದ ಕಾರಣಗಳಿಂದ ಮತದಾರರು ಅರ್ಹ ಪಟ್ಟಿಯಿಂದ ಹೊರಗುಳಿಯುವಂತಾಗುತ್ತದೆ. ಚುನಾವಣಾ ಆಯೋಗ ಕೇಳುವ ಹಲವಾರು ದಾಖಲೆ ಒದಗಿಸುವುದು ಬಡ, ಅಲೆಮಾರಿ ವರ್ಗ, ರೈತರು ಮೊದಲಾದವರಿಗೆ ಸಾಧ್ಯವಿಲ್ಲ. ಹೀಗಾಗಿ ರಾಜ್ಯ ಸರ್ಕಾರ ಕೂಡಲೇ ವಾಸ ದೃಢೀಕರಣ, ಜಾತಿ- ಆದಾಯ ಪ್ರಮಾಣ ಪತ್ರ ಶೀಘ್ರ ದೊರೆಯುವಂತೆ ನೋಡಿಕೊಳ್ಳಬೇಕೆಂದು ಆಗ್ರಹಿಸಿದರು.

ವಿದ್ಯುತ್ ಖಾಸಗೀಕರಣಗೊಳಿಸುವ ಹುನ್ನಾರ ನಡೆದಿದೆ. ಖಾಸಗಿ ಕಂಪನಿಗಳು ಏಕಸ್ವಾಮ್ಯ ಸಾಧಿಸಿ, ಬಡ ವರ್ಗದವರಿಗೆ ಉಪಟಳ ನೀಡಲಿವೆ. ಹೆಸ್ಕಾಂಗಳ ಸುಮಾರು 52 ಸಾವಿರ ಮಂದಿ ಬೀದಿ ಪಾಲಾಗಲಿದ್ದಾರೆ. ಹೀಗಾಗಿ ಖಾಸಗೀಕರಣಕ್ಕೆ ಸಮ್ಮತಿಸಬಾರದು ಎಂದರು.

ಬಸ್ ದರ ಏರಿಕೆ ಪ್ರಸ್ತಾಪ ಸರಿಯಲ್ಲ, ಈಗಾಗಲೇ ಜನರು ಇಂಧನ ದರ, ಅಗತ್ಯ ವಸ್ತುಗಳ ದರ ಏರಿಕೆಯಿಂದ ತತ್ತರಿಸಿದ್ದಾರೆ. ಇದು ಇವರಿಗೆ ದೊಡ್ಡ ಹೊಡೆತ ನೀಡಲಿದೆ. ಆದ್ದರಿಂದ ಸಾರಿಗೆ ಸಂಸ್ಥೆಯ ನಷ್ಟ ಕಡಿಮೆ ಮಾಡಲು, ಆದಾಯ ಹೆಚ್ಚಿಸಿಕೊಳ್ಳುವ ಬಗ್ಗೆ ಗಮನ ಹರಿಸಿ, ಈ ಬಗ್ಗೆ ಸಮಿತಿ ರಚಿಸಬೇಕು. ಒಂದು ವೇಳೆ ಈ ಮೂರೂ ಬೇಡಿಕೆಗಳನ್ನು ನಿರ್ಲಕ್ಷಿಸಿದಲ್ಲಿ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ದೇವನೂರು ಪುಟ್ಟನಂಜಯ್ಯ, ಅಮ್ಜದ್ ಖಾನ್, ಮೌಲಾನಾ ಅಕ್ರಂ, ಶಫಿವುಲ್ಲಾ, ಎಸ್. ಸ್ವಾಮಿ ಉಪಸ್ಥಿತರಿದ್ದರು.

ವಾರಾಂತ್ಯ ಯಕ್ಷಗಾನ ತರಬೇತಿ

ಮೈಸೂರು, ಜೂ. 26– ಮೈಸೂರಿನ ಬಿನ್ನಷಡ್ಜ, ಕೆಂಪ್ಸ್ ಸಹಯೋಗದೊಂದಿಗೆ ಪ್ರತಿ ಶನಿವಾರ ಮತ್ತು ಭಾನುವಾರ ಮಧ್ಯಾಹ್ನ 3 ರಿಂದ 5 ಗಂಟೆಯವರೆಗೆ ಕುವೆಂಪುನಗರದ ಕೆಂಪ್ಸ್ ಆವರಣದಲ್ಲಿ ವಾರಾಂತ್ಯ ಯಕ್ಷಗಾನ ತರಬೇತಿ ಹಮ್ಮಿಕೊಳ್ಳಲಾಗಿದೆ. 9 ತಿಂಗಳ ಕೋರ್ಸ್‌ನಲ್ಲಿ ಯಕ್ಷಗಾನದ ತಾಳಗಳು, ಸಾಂಪ್ರದಾಯಿಕ ನಡೆಗಳು, ಮಾತುಗಾರಿಕೆ, ಅಭಿನಯ, ವಿವಿಧ ಪಾತ್ರಗಳ ಪ್ರವೇಶಗಳ ನಡೆಗಳು ಮತ್ತು ಯುದ್ಧ ಕುಣಿತಗಳ ಪ್ರಾತ್ಯಕ್ಷಿಕೆಗಳ ಜೊತೆಗೆ ಕೊನೆಯಲ್ಲಿ ಶಿಬಿರಾರ್ಥಿಗಳಿಂದ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ. ಆಸಕ್ತರು ಮೊ. 9632535749 ಸಂಪರ್ಕಿಸಬಹುದು.

ಮನೆ-ಮನೆ ಹನುಮ ಧಾರ್ಮಿಕ ಕಾರ್ಯಕ್ರಮ



ಮೈಸೂರು: ಮೈಸೂರಿನ ಶ್ರೀರಾಂಪುರದ ಮೂಕಾಂಬಿಕಾ ಸಮೃದ್ಧಿ ಬಡಾವಣೆಯ ಸರಸ್ವತಿ ಭಾರತೀಯ ಸಂಸ್ಕಾರ ಕೇಂದ್ರದಲ್ಲಿ ವಿಶ್ವ ಹಿಂದೂ ಪರಿಷತ್‌ನ ಧರ್ಮ ಪ್ರಸಾರ ವಿಭಾಗದ ಮನೆ ಮನೆ ಹನುಮ ಎಂಬ ಧಾರ್ಮಿಕ ಕಾರ್ಯಕ್ರಮಕ್ಕೆ ಶ್ರೀ ವೀರಾಂಜನೇಯ ಮಹಾಸಂಸ್ಥಾನಮ್, ಹೇಮಾಪುರ ಮಾಹಾಪೀಠಂ ಶ್ರೀ ಕ್ಷೇತ್ರ ಬಂಗಾರಮಕ್ಕಿಯ ಪೀಠಾಧಿಪತಿಗಳಾದ ಶ್ರೀ ಮಾರುತಿ ಗುರೂಜಿ ಹನುಮನ ಮೂರ್ತಿಗೆ ಪೂಜೆ ಸಲ್ಲಿಸಿ ಮಂಗಳಾರತಿ ಮಾಡಿ ಚಾಲನೆ ನೀಡಿದರು.

ವಿಶ್ವ ಹಿಂದೂ ಪರಿಷತ್‌ನ ಈ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲಿ ಹಾಗೂ ಪ್ರತಿ ಮನೆಯಲ್ಲೂ ಹನುಮನ ಪೂಜೆಯ ಮೂಲಕ ಸನಾತನ ಧರ್ಮದ ಆಚರಣೆ ಹಾಗೂ ಜಾಗೃತಿ ಮೂಡಲಿ ಎಂದರು.

ಈ ಸಂದರ್ಭದಲ್ಲಿ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್ ಮಾತನಾಡಿ, ವಿಶ್ವ ಹಿಂದೂ ಪರಿಷತ್ ಹನುಮನ ಪೂಜೆಯನ್ನು ಮೈಸೂರಿನ ಪ್ರತಿ ಮನೆಯಲ್ಲೂ ಯಾವುದೇ ಬೇಧ-ಭಾವ ವಿಲ್ಲದೆ ಎಲ್ಲರೂ ಪೂಜೆ ಮಾಡಬಹುದು ಎಂದು ತಿಳಿಸಿದರು.

ಧರ್ಮ ಪ್ರಸಾರ ವಿಭಾಗದ ಜಿಲ್ಲಾ ಅಧ್ಯಕ್ಷ ಪುನೀತ್.ಜಿ ಮಾತನಾಡಿ, ಸನಾತನ ಹಿಂದೂ ಧರ್ಮದ ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ ಗುರುಗಳಿಂದ ಪೂಜಿಸಿ ಇಂದು ಮನೆ-ಮನೆ ಕಾರ್ಯಕ್ರಮದ ಹನುಮನ ಮೂರ್ತಿಗೆ ಚಾಲನೆ ನೀಡಲಾಗಿದೆ ಹನುಮನ ಪೂಜೆಯನ್ನು ಮನೆಯಲ್ಲಿ ಮಾಡಿಸಲು ಇಚ್ಚಿಸುವವರು ಮೈಸೂರಿನ ವಿಶ್ವ ಹಿಂದೂ ಪರಿಷತ್ ಅನ್ನು ಸಂಪರ್ಕಿಸಬಹುದು. ಈ ಪೂಜೆಗೆ ಯಾವುದೇ ತರಹದ ಶುಲ್ಕ ಅಥವಾ ಕಾಣಿಕೆ ಇರುವುದಿಲ್ಲ ಎಂದು ತಿಳಿಸಿದರು. ಪೂಜೆ ಮಾಡಿಸಲು ಇಚ್ಚಿಸುವವರು 8105366574 ಅಥವಾ 9880309898 ಗೆ ಕರೆಮಾಡಿ ಪೂರ್ವ ನೊಂದಣಿ ಮಾಡಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೈಸೂರಿನ ಬಾಲ ಪ್ರತಿಭೆ ತ್ರಿವಳಿ ವಿಶ್ವ ದಾಖಲೆ ಮಾಡಿರುವ ಪೃಥು ಪಿ ಅದ್ವೈತ್ ವೇದ ಘೋಷಣೆಗಳ ಮೂಲಕ ಶ್ರೀ ಮಾರುತಿ ಗುರೂಜಿ ಅವರನ್ನು ಸ್ವಾಗತಿಸಿದರು.

ಕೂಡ್ಲೂರು ಗುಂಡಪ್ಪ ಪ್ರತಿಷ್ಠಾನದ ಅಧ್ಯಕ್ಷ ಕೆ.ಆರ್. ಗಣೇಶ್, ಉದ್ಯಮಿ ಮನು, ವಿಶ್ವ ಹಿಂದೂ ಪರಿಷತ್‌ನ ನರಸಿಂಹ ಮೂರ್ತಿ, ಜಗದೀಶ್ ಹೆಬ್ಬಾರ್, ಮಂಜುನಾಥ್, ಹುಲಗಾದ್ರಿ, ಸರಸ್ವತಿ ಭಾರತೀಯ ಸಂಸ್ಕಾರ ಕೇಂದ್ರದ ನಿರ್ದೇಶಕಿ ಶ್ರೀಮತಿ ಸರಸ್ವತಿ ಗಣೇಶ್, ದಿಲೀಪ್, ಮೂಕಾಂಬಿಕಾ ಸತ್ಸಂಗ ಅಧ್ಯಕ್ಷರಾದ ಶ್ರೀಮತಿ ಶುಭಾ ಅರುಣ್, ನಂಜನಗೂಡು ಬ್ರಾಹ್ಮಣ ಸಂಘದ ಘಣೀಶ್, ಶ್ರೀಮತಿ ಸುಧಾ ಪ್ರಕಾಶ್, ಶ್ರೀಮತಿ ಶೈಲಾ, ಶ್ರೀಮತಿ ಚಂದ್ರಶೇಖರ್, ಶ್ರೀಮತಿ ಪೂಜಾ ಪುನೀತ್, ಶ್ರೀಮತಿ ಹೇಮಾ, ಹಲವಾರು ಪ್ರಮುಖರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಶ್ರೀರಾಮತಾರಕ ಹೋಮ; ಸಿಂಧೂರ ಅರ್ಚನೆ




ಮೈಸೂರು, ಜೂ.26– ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರದಲ್ಲಿ ಶ್ರೀವೀರಾಂಜನೇಯ ಮಹಾಸಂಸ್ಥಾನಮ್ ಬಂಗಾರಮಕಿ ಪೀಠಾಧಿಪತಿ ಶ್ರೀ ಮಾರುತಿ ಗುರೂಜಿ ಸಾನಿಧ್ಯದಲ್ಲಿ ನಡೆಯುತ್ತಿರುವ ಶ್ರೀರಾಮತಾರಕ ಹೋಮ ಮತ್ತು ಸಿಂಧೂರ ಅರ್ಚನೆ ಕಾರ್ಯಕ್ರಮದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಆಶೀರ್ವಾದ ಪಡೆದುಕೊಂಡರು.

ಯಂತ್ರೋದ್ಧಾರಕ ವೀರಾಂಜನೇಯನ ಅಷ್ಟೋತ್ತರದೊಂದಿಗೆ ಕುಂಕುಮ ಸಿಂಧೂರ ಅರ್ಚನೆಯಲ್ಲಿ 250 ದಂಪತಿಗಳು ಭಾಗವಹಿಸಿದ್ದರು. ನಂತರ ಮಾರುತಿ ಗುರೂಜಿ ಅವರಿಂದ ಸಂಸ್ಥಾನ ಪೂಜೆ ಹಾಗೂ ಭಕ್ತರಿಗೆ ಫಲಮಂತ್ರಾಕ್ಷತೆ ಪ್ರಸಾದ ವಿನಿಯೋಗ ಜರುಗಿತು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಆಧ್ಯಾತ್ಮಿಕ ಧಾರ್ಮಿಕ ಚಟುವಟಿಕೆಗಳ ಸಿದ್ಧಿಸಾಧನದಿಂದ ಗುರಿ ತಲುಪಲು ಯುವ ಜನಾಂಗ ಮುಂದಾಗುತ್ತಿರುವುದು ಸಮಾಜದಲ್ಲಿ ಸಂಸ್ಕಾರ ಸಂಸ್ಕೃತಿ ಉಳಿಸುವಲ್ಲಿ ಒಳ್ಳೆಯ ಬೆಳವಣಿಗೆಯಾಗಿದೆ. ಇದರಿಂದ ಆರೋಗ್ಯವು ವೃದ್ಧಿಸುತ್ತದೆ. ಹೊನ್ನಾವರದಲ್ಲಿರುವ ಬಂಗಾರಮಕಿ ವೀರಾಂಜನೇಯ ಸನ್ನಿಧಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಆಟಗಾರರು ಭಾಗವಹಿಸುತ್ತಾರೆ ಎಂದು ನೋಡಿ ಖುಷಿಯಾಯಿತು. ಚಾಮರಾಜ ಕ್ಷೇತ್ರದಲ್ಲೂ ಸಹ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪುರಾತನ ಶ್ರೀರಾಮ ಮಂದಿರವಿದೆ. ಮುಂದಿನ ದಿನದಲ್ಲಿ ಶ್ರೀರಾಮನ ವೀರಾಂಜನೇಯನ ಸನ್ನಿಧಿಯನ್ನ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಒಗ್ಗೂಡಿಸುವ ಯೋಜನೆ ರೂಪಿಸಲಾಗುವುದು ಎಂದರು.

ಜೂ.29ರಂದು ಬೆಳದಿಂಗಳ ಸಂಗೀತ




ಮೈಸೂರು, ಜೂ.26– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜೂ.29 ರಂದು ಸೋಮವಾರ ಸಂಜೆ 6 ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–293ರ ಅಂಗವಾಗಿ ವಿದ್ವಾನ್ ಸಿದ್ಧಾರ್ಥ ಬೆಳ್ಮಣ್ಣು ಅವರಿಂದ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ವಿದ್ವಾನ್ ಸಿದ್ಧಾರ್ಥ ಬೆಳ್ಮಣ್ಣುರವರು ನವೀನ ಶೈಲಿಯ ಸಂಗೀತ ಕಲಾವಿದರು. ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ 1996ರಲ್ಲಿ ಜನಿಸಿದರು. ಇವರ ಸಂಗೀತಾಸಕ್ತಿಯನ್ನು ಗಮನಿಸಿದ ಪೋಷಕರೇ ಪ್ರಾರಂಭಿಕ ಸಂಗೀತ ತರಬೇತಿ ನೀಡಿದರು. ಬಳಿಕ ಪಿ.ಆರ್. ಮಂಜುನಾಥ್ ಅವರ ಬಳಿ ಹಿಂದೂಸ್ತಾನಿ ಸಂಗೀತ ಶಿಕ್ಷಣಕ್ಕೆ ಕಳುಹಿಸಿದರು. ಕಿರಿಯ ವಯಸ್ಸಿಗೇ ಸಂಗೀತವನ್ನು ಕರತಲಾಮಲಕ ಮಾಡಿಕೊಂಡು ಕಚೇರಿ ನೀಡುವ ಮಟ್ಟಕ್ಕೆ ಬೆಳೆದರು. ಗಾಯನಾಚಾರ್ಯ ಗುರುರಾವ್ ದೇಶಪಾಂಡೆ ಮತ್ತು ಪಂ. ಭೀಮಸೇನ ಜೋಷಿಯವರ ಬಳಿ ಗುರುಕುಲ ಪದ್ಧತಿಯಲ್ಲಿ ಸಾಧನೆ ಮಾಡಿದ ಬಳಿಕ ಗ್ವಾಲಿಯರ್ ಮತ್ತು ಕಿರಾಣ ಘರಾನೆಯ ಸಂಗೀತಗಾರ ಪಂ. ವಿನಾಯಕ ತೊರವಿಯವರಲ್ಲಿ ಶಿಕ್ಷಣ ಮುಂದುವರಿಸಿದರು.

ವಯೋಲಿನ್ ಸಹಕಾರ ನೀಡಲಿರುವ ವಿದ್ವಾನ್ ಮೈಸೂರು ಎನ್.ಕಾರ್ತಿಕ್ ಉದಯೋನ್ಮುಖ ವಯೊಲಿನ್ ಕಲಾವಿದರಲ್ಲೊಬ್ಬರು, ಕರ್ನಾಟಕ ಸಂಗೀತ ವಿದ್ವಾನ್ ಮೈಸೂರು ಎಂ.ಮಹದೇವಪ್ಪನವರ ಮೊಮ್ಮಗ; ಖ್ಯಾತ ವಯೊಲಿನ್ ವಾದಕರಾದ ವಿದ್ವಾನ್ ಮೈಸೂರು ಎಂ.ನಾಗರಾಜ್‌ರವರ ಮಗ, ಸಹಜವಾಗಿಯೇ ಇವರಿಗೆ ಎಳನೆಯ ವಯಸ್ಸಿನಿಂದಲೇ ಪಿಟೀಲಿನತ್ತ ಸೆಳೆತ. ತಂದೆಯ ಬಳಿ ವಯೊಲಿನ್ ವಾದನ ಕಲಿತಿರುವ ಇವರು ಸಂಪ್ರದಾಯನಿಷ್ಠೆ ಮತ್ತು ಪ್ರಯೋಗಶೀಲತೆಯ ಅದ್ಭುತ ರಸಪಾಕ.

ಘಟಂ ಸಹಕಾರ ನೀಡಲಿರುವ ವಿದ್ವಾನ್ ಗಿರಿಧರ್ ಉಡುಪ, ಸುಮಾರು ಮೂರು ದಶಕಗಳಿಂದಲೂ ಸಂಗೀತ ಪ್ರಪಂಚದಲ್ಲಿ ಖ್ಯಾತರಾಗಿದ್ದು, ಜಾಗತಿಕ ಮನ್ನಣೆ ಗಳಿಸಿದ್ದಾರೆ. ಮೊದಲಿಗೆ ತಂದೆ ವಿದ್ವಾನ್ ಉಳ್ಳೂರು ನಾಗೇಂದ್ರ ಉಡುಪರಿಂದ, ಅನಂತರ ವಿದುಷಿ ಸುಕನ್ಯಾ ರಾಮಗೋಪಾಲ್ ಮತ್ತು ವಿದ್ವಾನ್ ವಿ. ಸುರೇಶ್‌ರವರಿಂದ ಘಟಂ ವಾದ್ಯ ಕಲಿಕೆ. ಚಿಕ್ಕ ವಯಸ್ಸಿಗೇ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಟಾಪ್ ಆರ್ಟಿಸ್ಟ್ ಸ್ಥಾನ ಪಡೆದರು. ಉಸ್ತಾದ್ ಬಿಸ್ಮಿಲ್ಲಾ ಖಾನ್ ಪುರಸ್ಕಾರ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿವೆ.

ಡ್ರಮ್ಸ್ ಸಹಕಾರ ನೀಡಲಿರುವ ವಿದ್ವಾನ್ ಬಿ.ಎಸ್. ಅರುಣ್‌ಕುಮಾರ್, ಲಯವಾದ್ಯ ಕ್ಷೇತ್ರದಲ್ಲಿ ಕಳೆದ ಎರಡೂವರೆ ದಶಕಗಳಿಂದ ಸುಪರಿಚಿತರು. ಡ್ರಮ್ಸ್ ಎಂಬ ಪಾಶ್ಚಾತ್ಯ ಲಯವಾದ್ಯವನ್ನು ಕರ್ನಾಟಕ, ಹಿಂದೂಸ್ತಾನಿ ಸಂಗೀತಗಳಿಗೆ ಹೊಂದಿಸಿ ನುಡಿಸುವುದು ಇವರ ವೈಶಿಷ್ಟ್ಯ. ಮೋರ್ಚಿಂಗ್ ವಾದನದಲ್ಲೂ ಪ್ರವೀಣತೆ ಹೊಂದಿರುವವರು.

ಕೀಬೋರ್ಡ್ ಸಹಕಾರ ನೀಡಲಿರುವ ವಿದ್ವಾನ್ ವರುಣ್ ಪ್ರದೀಪ್, ಸಂಗೀತ ಕ್ಷೇತ್ರದ ಬಹುಮುಖ ಪ್ರತಿಭಾಶಾಲಿಗಳು. ಪಿಯಾನೋ ಕಲಾವಿದರು ಮತ್ತು ಧ್ವನಿ ತಂತ್ರಜ್ಞರು; ಬಹುಮುಖ ವಿದ್ವತ್ತು ಒಂದೇ ಕಡೆ ಮೇಳೈಸಿರುವ ಅಪರೂಪದ ಸಂಗೀತ ಕಲಾವಿದರು. ಜಾಗತಿಕ ಮಟ್ಟದಲ್ಲಿ ಸಂಗೀತವನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಹಲವಾರು ಖ್ಯಾತನಾಮರ ಜತೆ ಒಡನಾಟ ಹೊಂದಿದ್ದಾರೆ.

ನಾಲ್ವಡಿ ಸ್ಮರಣಾರ್ಥ ಭಾವಗೀತೆ, ಭಕ್ತಿಗೀತೆಗಳ ಕಲರವ

ಮೈಸೂರು, ಜೂ. 26– ಜನಚೈತನ್ಯ ಫೌಂಡೇಷನ್ ವತಿಯಿಂದ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಮರಣಾರ್ಥ ಮರೆಯೋದುಂಟೆ ಮೈಸೂರು ದೊರೆಯ ಶೀರ್ಷಿಕೆಯ ಭಾವಗೀತೆ ಮತ್ತು ಭಕ್ತಿಗೀತೆ ಕಾರ್ಯಕ್ರಮವು ಗುರುವಾರ ನಡೆಯಿತು.



ಜನಚೈತನ್ಯ ಫೌಂಡೇಷನ್ ಏರ್ಪಡಿಸಿದ್ದ 'ಮರೆಯೋದುಂಟೆ ಮೈಸೂರು ದೊರೆಯ' ಸಂಗೀತ ಕಾರ್ಯಕ್ರಮದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು. ಜನಚೈತನ್ಯ ಫೌಂಡೇಷನ್ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಗುರುವಾರ ಏರ್ಪಡಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಗಾಯಕರನ್ನು ಸನ್ಮಾನಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ 'ಮರೆಯೋದುಂಟೆ ಮೈಸೂರು ದೊರೆಯ' ಗೀತರಚನೆಕಾರರಾದ ಹನಸೋಗೆ ಸೋಮಶೇಖರ್ ಮಾತನಾಡಿ, ಮೈಸೂರಿನ ಜನತೆ ಯಾವತ್ತಿಗೂ ನಾಲ್ವಡಿಯವರಿಗೆ ಕೃತಜ್ಞರಾಗಿರಬೇಕು. ಅಷ್ಟೊಂದು ಅನುಕೂಲಗಳನ್ನು ಅವರು ಮಾಡಿಕೊಟ್ಟಿದ್ದಾರೆ ಎಂದರು.

ನಾಲ್ವಡಿಯವರನ್ನು ಮೈಸೂರಿನ ಹಾಗೂ ರಾಜ್ಯದ ಜನ ಮರೆತಿದ್ದಾರೆ ಎನಿಸಿತ್ತು. ಹೀಗಾಗಿ 26 ವರ್ಷಗಳ ಹಿಂದೆ ಅವರ ಕೊಡುಗೆಗಳನ್ನು ಸೇರಿಸಿ, ಈ ಗೀತೆ ರಚಿಸಿದೆ. ಇದು ಇಷ್ಟೊಂದು ಜನಪ್ರಿಯವಾಗುತ್ತದೆ ಎಂದು ನಾನು ಎಣಿಸಿರಲಿಲ್ಲ ಎಂದು ಅವರು ಹೇಳಿದರು.

ಪ್ರಸ್ತುತ ನಾಡಿನೆಲ್ಲೆಡೆ ನಾಲ್ವಡಿ ಅವರನ್ನು ಸ್ಮರಿಸುವ ಕೆಲಸ ಆಗುತ್ತಿದೆ. ರಾಜ್ಯದ ಜನ ಯಾವತ್ತಿಗೂ ಅವರನ್ನು ಮರೆಯಬಾರದು. ಶಿಕ್ಷಣ, ನೀರು, ವಿದ್ಯುತ್ ಸೇರಿದಂತೆ ಎಲ್ಲ ಸೌಲಭ್ಯವನ್ನು ಕಲ್ಪಿಸಿಕೊಟ್ಟ ದೇಶದ ಒಬ್ಬ ಆದರ್ಶ ದೊರೆ ನಾಲ್ವಡಿಯವರು ಎಂದು ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ ಮಾತನಾಡಿ, ಉತ್ತರ ಭಾರತದ ಹಲವಾರು ರಾಜ್ಯಗಳಲ್ಲಿ ಪ್ರವಾಸ ಮಾಡಿದಾಗ ಮೈಸೂರಿನಲ್ಲಿ ನಾಲ್ವಡಿಯವರು ಜನತೆಗೆ ಎಷ್ಟೊಂದು ಅತ್ಯುತ್ತಮವಾದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಎಂಬುದು ಅರಿವಾಗುತ್ತದೆ. ನಾಲ್ವಡಿ ಅವರ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ರಾಜ್ಯದ ಆದಾಯದಲ್ಲಿ ಮೂರನೇ ಒಂದು ಭಾಗವನ್ನು ಬ್ರಿಟಿಷರಿಗೆ ನೀಡಿಯೂ ಎಷ್ಟೊಂದು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂಬುದು ಈಗಿನ ಆಡಳಿತಗಾರರಿಗೆ ಮಾದರಿಯಾಗಬೇಕು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಬ್ರಾಹ್ಮಣ ಸಮಾಜದ ಮುಖಂಡ ಕೆ. ರಘುರಾಂ ವಾಜಪೇಯಿ, ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷರೂ ಆದ ಹಿರಿಯ ವಕೀಲ ಡಿ.ಬಿ. ರಾಜಶೇಖರ ಮೂರ್ತಿ, ರೈಲ್ವೆ ಇಲಾಖೆಯ ನಿವೃತ್ತ ಎಂಜಿನಿಯರ್ ಎಂ. ಓಂಪ್ರಕಾಶ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮುಖ್ಯ ಅತಿಥಿಗಳಾಗಿದ್ದರು. ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಕುವೆಂಪು, ದ.ರಾ. ಬೇಂದ್ರೆ, ದೊಡ್ಡರಂಗೇಗೌಡ ರಚನೆಯ, ಎಸ್.ಜಾನಕಿ, ರತ್ನಮಾಲಾ ಪ್ರಕಾಶ್, ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಹಾಡಿರುವ 35 ಹಾಡುಗಳನ್ನು ಆರ್.ಲಕ್ಷ್ಮಣ್, ವಿಜಯ್ ಆನಂದ್, ಪುಷ್ಪಲತಾ, ಜಾಯ್ಸ್ ವೈಶಾಖ್, ಶ್ರೀಲತಾ ಮನೋಹರ್, ಮೀರಾ, ರೇಖಾ, ಕವಿತಾ ಕಾಮತ್, ರೇಖಾ ಗೌತಮ್, ಬಸವರಾಜ್ ಪ್ರಸ್ತುತಪಡಿಸಿದರು.